
ಕೊಡಗು ಸಂಗಾತಿ

ಜುಲೈ 1 ರಿಂದ 31, 2001 ಪಾಕ್ಷಿಕ ಪತ್ರಿಕೆ (ಕಾರ್ತಿಲ್ 16-32 - ಆಟಿ 1-15)

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಅರೆಭಾಷೆಯಲ್ಲಿ ಪ್ರಕಟಿತ

Reg. No. KA/SK/MYS-88 ಸಂಪುಟ : 5 ಸಂಚಿಕೆ : 13-14 ಪುಟಗಳು : 24 ಬೆಲೆ ರೂ. : 6-00









ತುಂಗಾ ತೀರದ ಶೃಂಗೇರಿಯ ಸ್ನಾನಘಟ್ಟದಲ್ಲಿ ಮತ್ಸ್ಯಗಳೊಡನೆ ಭಕ್ತರ ಆಟ

ಚಿತ್ರ : ತಾಯಿ ಶಾರದಾಂಬೆ, ಆದಿಶ್ರೀ ಶಂಕರಚಾರ್ಯರು ಮತ್ತು ಶ್ರೀ ಭಾರತಿ ತೀರ್ಥರು

ಜೀವಾವಧಿ ಸದಸ್ಯತನ ನೀಡ್ಯೋಳೊ



ಸುಂಟಿಕೊಪ್ಪ ಸನಿಹದ ಅತ್ತೂರು ನೆಲ್ಲೂರು ಗ್ರಾಮದ ಶ್ರೀ ಕುಂಜಿಲನ ಮಂಜುನಾಥ ಮತ್ತು ಪುಷ್ಪಲತಾ ದಂಪತಿಗ ಮತ್ತೆ ಮಕ್ಕಳಾದ ಜೀವಿತ ಹಂಗೆ ಚೇತನ್ ಇವು ಪತ್ರಿಕೆಯ ಅಭಿವೃದ್ಧಿ ಬಯಸಿ ಜೀವಾವಧಿ ನೀಡಿ ಸಹಕರಿಸ್ಯೊಳೊ.

ಇವು ಹಾಲಿ ತಾಲೂಕು ಪಂಚಾಯಿತಿ ಸದಸ್ಯರಾಗಿದ್ದ್‌ಕಂಡ್ ಉತ್ತಮ ಸೇವೆನ ಬಡ ಜನಿಕ್ಕೆ ಸಲ್ಲಿಸುತ್ತಾ ಒಳೊ. ಇವರ ಪರಿಚಯನ ಸಂಗಾತಿ ಸಂಪುಟ 5, ಸಂಚಿಕೆ 6ರ್ಲಿ ನೀಡ್ಯಳೊ

ಈ ಸಂಸಾರಕ್ಕೆ ನಮ್ಮ ಕುಲದೇವ್ರು ಶ್ರೀವೆಂಕಟರಮಣ ಮತ್ತೆ ಶೃಂಗೇರಿ ಶಾರದಾಂಬೆಯು ತಾಯಿ ಕಾವೇರಿಯಮ್ಮೆಯ ಅನುಗ್ರಹ ಸದಾ ಇರಲಿತ್ತೇಳಿ ಸಂಗಾತಿ ಈ ಸಂದರ್ಭಲಿ ಶುಭ ಹಾರೈಸಿದೆ.

- ಸಂಪಾದಕಿ

'ಪುಣ್ಯ' ವಧು-ವರರ ಅನ್ವೇಷಣೆ ಕೇಂದ್ರ - ಸುಂಟಿಕೊಪ್ಪ.

1. ಸುಂಟಿಕೊಪ್ಪದ ಯಂಕನ ಮನೆ ಮಾಚಯ್ಯನವರ ಪುತ್ರ **ದಿಲೀಪ್‌ಕುಮಾರ್** ಮತ್ತು ಗೂನಡ್ಕದ ಕುಯಿಂತೊಂಡು ರಾಮಪ್ಪಗೌಡರ ಪುತ್ರಿ **ಉಷಾ** ಇವರ ವಿವಾಹವು ತಾರೀಖು 30-5-2001ರಂದ್ ಮಡಿಕೇರಿಯ ಮೇಲಿನ ಗೌಡ ಸಮಾಜದಲ್ಲಿ ಭಾರಿ ವಿಜೃಂಭಣೆಯಿಂದ ನಡೆಯಿತು.
2. ಬೆಂಗಳೂರಿನಲ್ಲಿ ವಾಸವಿರುವ ಬೊಳುತ್ತಜ್ಜಿ ಚಂಗಪ್ಪನವರ ಪುತ್ರ **ಹರೀಶ್** ಮತ್ತು ಮಡಿಕೇರಿಯಲ್ಲಿವಾಸವಿರುವ ಬಿಟ್ಟೀರ (ಬಿಟ್ರ) ಕಾರ್ಯಪ್ಪನವರ ಪುತ್ರಿ **ಸ್ವಾತಿ** ಇವರ ವಿವಾಹವು ತಾರೀಖು 3-6-2001ರಂದು ಮಡಿಕೇರಿಯ ಮೈತ್ರಿ ಸಮುದಾಯ ಭವನದಲ್ಲಿ ಭಾರಿ ವಿಜೃಂಭಣೆಯಿಂದ ನಡೆಯಿತು.

ನಮ್ಮ ಸಂಸ್ಥೆಯ ಮೂಲಕ ಒಂದಾದ ಈ ನವ ದಂಪತಿಗಳಿಗೆ ನಮ್ಮ ಶುಭ ಹಾರೈಕೆಗಳು

ಯಿಂದ : **ಶ್ರೀಮತಿ ಕಡ್ಯದ ರತಿ ಅರುಣ್‌ಕುಮಾರ್, 'ಪುಣ್ಯ' ವಧು - ವರರ ಅನ್ವೇಷಣೆ ಕೇಂದ್ರ ಅಂಡ್ ರಿಯಲ್ ಎಸ್ಟೇಟ್,**
ಎನ್. ಸಿ. ಜಿ. ಕಾಂಪ್ಲೆಕ್ಸ್, ಬಿ. ಎಂ. ರಸ್ತೆ, ಸುಂಟಿಕೊಪ್ಪ - 571237 ☎ : 95, 08276 / ಮನೆ : 62252 ಕಛೇರಿ : 62083

ಕೆ. ಡಿ. ಪ್ರತಿಮಾ



ಉನ್ನತ ಶ್ರೇಣಿಯಲ್ಲಿ ತೇರ್ಗಡೆ

ಬೆಂಗಳೂರಿನ ಹೆಬ್ಬಗೋಡಿ ಎಸ್.ಎಫ್.ಎಸ್. ಹೈಸ್ಕೂಲಿನ ವಿದ್ಯಾರ್ಥಿನಿ ಕುಮಾರಿ **ಕೆ. ಡಿ. ಪ್ರತಿಮಾ**, 2000-2001ರ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇಖಡ 86% ತೇರ್ಗಡೆಯಾಗಿರುವುದಲ್ಲದೆ, ಗಣಿತ 98, ವಿಜ್ಞಾನ 95, ಇಂಗ್ಲೀಷ್ 112 ಅಂಕಗಳೊಂದಿಗೆ ಒಟ್ಟು 536 ಅಂಕ ಗಳಿಸಿ, ಹೆತ್ತ ಪೋಷಕರಿಗೆ ಕೀರ್ತಿಯನ್ನು ತಂದಿದ್ದಾಳೆ.

ಇವಳ ಉಜ್ವಲ ಭವಿಷ್ಯಕ್ಕೆ ಶುಭವನ್ನು ಕೋರುವ

ಯಿಂದ : ತಂದೆ : **ಕುದುಕುಳಿ ಜಿ. ದಾಮೋದರ**
ತಾಯಿ : **ರಾಧ ದಾಮೋದರ** (ಎಡಿಕೇರಿ ಉತ್ತಯ್ಯನವರ ಮಗಳು)
ತಂಮ : **ಭವನ್ ದಾಮೋದರ** ವಿಳಾಸ : ಮಾಲೀಕರು, ಶ್ರೀ ಗಣೇಶ್ ಗ್ಯಾಸ್ ಏಜೆನ್ಸಿ,
ಹೆಬ್ಬಗೋಡಿ ಎಲೆಕ್ಟ್ರಾನಿಕ್ಸ್ ಸಿಟಿ ಪೋಸ್ಟ್, ಬಸ್ ನಿಲ್ದಾಣದ ಎದುರು, ಹೊಸೂರು ರಸ್ತೆ ಬೆಂಗಳೂರು - 561 229

ವಧು ಬೇಕಾಗಿದೆ

ಸ್ಫುರದ್ರೂಪಿ, ವ್ಯವಹಾರಸ್ಥ, ವ್ಯಾಪರಸ್ಥ, ಪಿ.ಯು.ಸಿ. ಓದಿರುವ ಹತ್ತು ಕುಟುಂಬ ಹದಿನೆಂಟು ಗೋತ್ರದ ಹುಡುಗನಿಗೇಳದೇ ಸಮುದಾಯದ ಸುಂದರಿ ಹುಡುಗಿ ಪಿ.ಯು.ಸಿ. / ಡಿಗ್ರಿ ಓದಿರುವ, 10ನೇ ತರಗತಿಯ ಮಕ್ಕಳಿಗೆ ಗಣಿತ ವಿಷಯದಲ್ಲಿ ಟ್ಯೂಷನ್ನ್ ನೀಡುವ ಶಕ್ತರಾಗಿರುವ ಆಸಕ್ತರು ಬೇಕಾಗಿದ್ದಾರೆ. ಸಂಪರ್ಕಿಸಿ.

ಬಾಕ್ಸ್ ನಂ. 11 C/o ಕೊಡಗು ಸಂಗಾತಿ

☎ : 0821 / 516771

ಬೆಂಗಳೂರಿನಲ್ಲಿ ಸಂಗಾತಿ ಬಾತ್ಮಿದಾರರಾಗಿ

ಶ್ರೀ ಕಲ್ಲುಮುಟ್ಲು ಬಸಪ್ಪನವರು ಕೊಡಗು ಸಂಗಾತಿಯ ಬೆಂಗಳೂರಿನ ಬಾತ್ಮಿದಾರರಾಗಿ ಈ ಹಿಂದಿನಂತೆಯೇ ಮುಂದುವರಿಯಲು ಇಚ್ಛಿಸಿದ್ದಾರೆ. ವರದಿ / ಜಾಹೀರಾತು / ಚಂದಾ ಇತ್ಯಾದಿಗಳ ಕಾರ್ಯ ನಿರ್ವಹಿಸಲು ಒಪ್ಪಿದ್ದಾರೆ. ಬೆಂಗಳೂರಿನ ಸುತ್ತ ಮುತ್ತ ಇರುವ ಚಂದದಾರರು / ಜಾಹೀರಾತುದಾರರು ಈ ಹಿಂದಿನಂತೆ ಸಂಗಾತಿಗೆ ಸಹಕರಿಸುವಂತೆ ಸಹೃದಯ ಚಂದದಾರರಲ್ಲಿ ವಿನಂತಿ

ವ್ಯವಸ್ಥಾಪಕರು

2001, ಜುಲೈ 1 ರಿಂದ 30 ರ ತನಕ

ಒಳನೋಟ

ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ	**ಕೊಡಗು ಸಂಗಾತಿ,** 35, "ಸವಿತಾ ನಿಲಯ", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 12. ಫೋನ್ : **95821/516771**
ಮಡಿಕೇರಿಯಲ್ಲಿ ಸಂಗಾತಿ ಕಛೇರಿ	ಬೈತಡ್ಕ ಜಾನಕಿ ಬೆಳ್ಯಪ್ಪ,, ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, ಫೋನ್ : **08272/28047**
ಚಿಪ್ಪೆ, ಹಸೆಮಣೆ/ಶುಭಾಶಯ ಕಾರ್ಡ್ಸ್ ಕ್ಯಾಸೆಟ್/ಕೀ ಚೈನ್ ಲಭ್ಯ	ಕುಂಭಗೌಡನ ಪ್ರವೀಣ್‌ಕುಮಾರ್, ವೆಜಿಟೆಬಲ್ ಶಾಪ್, ಪಾಂಡನ ಕಾಂಪೌಂಡ್, ಅಪ್ಪಯ್ಯಗೌಡ ರಸ್ತೆ, ಮಡಿಕೇರಿ,
ಕುಶಾಲ ನಗರ	ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/73370
ಬೆಂಗಳೂರು ಮಹಾನಗರ	ಕಲ್ಲುಮುಟ್ಲು ಬಸಪ್ಪ, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19, ಫೋನ್ : 080/6500946

ಚಂದಾ ವಿವರ : ಜೀವಾವಧಿ ಸದಸ್ಯತನ - **2000** ರೂ., ಬಿಡಿ ಪ್ರತಿ - **6** ರೂ., ಅರ್ಧ ವಾರ್ಷಿಕ -**75** ರೂ., ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

ಸಂಪಾದಕೀಯ : ಗುಡಿಸಲು ಕೈಗಾರಿಕೆ

ಕೊಡಗಿನಲ್ಲಿ ಹಿಂದೆ ರೈತನು ತನಗೆ ಬೇಕಾದ ನೇಗಿಲು ನೊಗ, ಬುಟ್ಟಿ, ಗೊರಗ, ಹಗ್ಗ, ನೂಲಿನ ಅಥವಾ ಹಗ್ಗದ ಬೇಲಿಗಳನ್ನು ತಾನೇ ತಯಾರಿಸುತ್ತಿದ್ದ. ಇದೊಂದು ಕೃಷಿಕನ ಉಪ ಕೈಗಾರಿಕೆ ಹಾಗೂ ಕಲೆಯೂ ಆಗಿತ್ತು. ಬರು ಬರುತ್ತಾ ಕೃಷಿಕರಲ್ಲಿ ಸೋಮಾರಿತನ ಹಾಗೂ ಅಸಡ್ಡೆಯ ಭಾವನೆಯಿಂದಾಗಿ ಈ ಕೈಗಾರಿಕೆಗಳು ಮಾಯವಾಗಿ ಈಗ ಬಡಗಿ ತಯಾರಿಸಿದ ವಸ್ತುವನ್ನೋ ಅಥವಾ ಕಾರ್ಖಾನೆಗಳಲ್ಲಿ ತಯಾರಾಗುವ ವಸ್ತುಗಳನ್ನೋ ಉಪಯೋಗಿಸುತ್ತಿದ್ದಾರೆ. ಹೀಗಾಗಿ ರೈತನಲ್ಲಿದ್ದ ಕೃಷಿ ಕೈಗಾರಿಕೆ ಮೂಲೆ ಪಾಲಾಗಿದೆ. ಅದೇ ರೀತಿ ಹಿಂದಿನ ಗೃಹಿಣಿಯರು ನೂಜೆಯಿಂದ ಮುಡೆಂಗಿ ಎಲೆಯಿಂದ ಮನೆಗೆ ಬೇಕಾದ ಚೀಲ, ರಕ್ಕಸಪಟ್ಟೆಯ ನೂಲಿನ ಚೀಲ ಹೆಣೆಯುವುದು. ಕಾಡು ಮರಗಳ ಕಾಯಿಯಿಂದ ಸಿಗುತ್ತಿದ್ದ ಬೀಜಗಳನ್ನು ಒಡೆದು ಎಣ್ಣೆ ಮತ್ತು ಬತ್ತಿಗಳನ್ನು ತಯಾರಿಸಿ ಮನೆಯ ದೀಪದ ಖರ್ಚನ್ನು ಕಡಿಮೆ ಮಾಡಿಕೊಳ್ಳುವ ಸಾಧನಗಳನ್ನು ತಾಯಾರಿಸುತ್ತಿದ್ದದ್ದು ಈಗ ಕನಸಿನ ಅಥವಾ ಗತಕಾಲದ ಕತೆಯಾಗಿದೆ. ಇಂತಹ ಗುಡಿಸಲು ಕೈಗಾರಿಗೆಗಳನ್ನು ಪ್ರೋತ್ಸಾಹಿಸುವುದಕ್ಕೆ ಸಮಾಜಗಳು ಮುಂದೆ ಬರುವವೆ ಎಂದು ಸಂಗಾತಿಯ ಪ್ರಶ್ನೆ.

ತರ್ಕಬದ್ಧ ತತ್ವಜ್ಞಾನಿ ಆಚಾರ್ಯ - ಶ್ರೀ ಆದಿ ಶಂಕರಾಚಾರ್ಯರು



ಭಾರತೀಯ ಧರ್ಮ-ಇತಿಹಾಸ, ಜೀವನ-ವಿಚಾರಧಾರೆ, ಇವುಗಳ ಮೇಲೆ ಗಾಢ ಪ್ರಭಾವ ಬೀರಿದ ಮಹಾಮಹಿಮರಲ್ಲಿ ಶ್ರೀ ಆದಿ ಶಂಕರಾಚಾರ್ಯರು ಅಗ್ರಗಣ್ಯರು. ಕುಸಿಯುತ್ತಿದ್ದ ವೇದಾಧಾರಿತ ಧರ್ಮಕ್ಕೆ ಭದ್ರ ಬುನಾದಿ ಕಟ್ಟಿದರು. ಅಂತಃಕಲಹಗಳು, ಅಂಧಶ್ರದ್ಧೆ, ನಿಷ್ಕ್ರಿಯತೆ, ನಾಸ್ತಿಕತೆ, ದೋಷಪೂರಿತ ಪೂಜಾವಿಧಾನಗಳು, ವಾಮಮಾರ್ಗದವರು -ಹೀಗೆ ಹತ್ತುಹಲವು ಅಡ್ಡಿ-ಆತಂಕಗಳನ್ನು ತೊಡೆದು ಹಾಕಿ, ಭಾರತೀಯ ತತ್ವಜ್ಞಾನ ಸಂಪತ್ತನ್ನು ತರ್ಕ ಬದ್ಧವಾಗಿ ವಿವರಿಸಿ, ಅದಕ್ಕೆ ಸುಯೋಗ್ಯ ಸ್ಥಾನವನ್ನು ದೊರಕಿಸಿಕೊಟ್ಟರು. ಇಂದಿಗೂ ಆಚಾರ್ಯರು, ಆಗಸದಲ್ಲಿ ತತ್ವ ಶಾಸ್ತ್ರದ ಜ್ವಾಜ್ವಲ್ಯಮಾನ ನಕ್ಷತ್ರದಂತೆ ಮೆರೆಯುತ್ತಿದ್ದಾರೆ.

ಕೇರಳದ ಪವಿತ್ರ ಪೂರ್ಣಾನದಿ ತೀರದ ಕಾಲಟಿ ಒಂದು ಚಿಕ್ಕ ಗ್ರಾಮ. ಅಲ್ಲಿ ಶಿವಗುರು ಹಾಗೂ ಆರ್ಯಾಂಬೆ ಆಚರಿಸಿದ ಕಠೋರ ತಪಸ್ಸಿನ ಫಲವಾಗಿ 1300 ವರ್ಷಗಳ ಹಿಂದೆ ಇವರು ಪುಣ್ಯಜನ್ಮ ತಾಳಿದರು. ಬುದ್ಧಿ, ಸಂಸ್ಕಾರಗಳನ್ನು ಪಡೆದು ಅಲ್ಪಾವಧಿಯಲ್ಲಿಯೇ ಪ್ರತಿಭಾವಂತನಾಗಿ ಬೆಳೆದು ಪರಮಾತ್ಮನ ವಿಶೇಷ ಪ್ರತಿನಿಧಿ- ದೂತರೆಂಬಂತೆ ಸರ್ವಮತ ಸಾಮರಸ್ಯವನ್ನುಂಟು ಮಾಡಿದರು.

ಅಷ್ಟವರ್ಷೇ ಚತುರ್ವೇದೀ ದ್ವಾದಶೇ
ಸರ್ವಶಾಸ್ತ್ರವಿತ್।ಷೋಡಶೇ ಕೃತವಾನ್ ಭಾಷ್ಯಂ,
ದ್ವಾತ್ರಿಂಶೇ, ಮುನಿರಭ್ಯಗಾತ್॥

'ಶ್ರೀ ಶಂಕರಯತಿಗಳು, ತಮ್ಮ 8ನೇ ವರ್ಷದಲ್ಲಿ, ನಾಲ್ಕು ವೇದಗಳಲ್ಲಿ ಪಾರಂಗತರಾದರು. 12ನೇ ವಯಸ್ಸಿನಲ್ಲಿ, ಸರ್ವಶಾಸ್ತ್ರಗಳನ್ನು ಬಲ್ಲವರಾಗಿದ್ದರು. 16ನೇ ವರ್ಷದಲ್ಲಿ, ಸೂತ್ರ ಭಾಷ್ಯ ರಚಿಸಿದರು. 32ನೇ ವಯಸ್ಸಿನಲ್ಲಿ, ನಿರ್ವಾಣವನ್ನೈದಿದರು' ಎಂದು ಈ ಶ್ಲೋಕ ಹೇಳುತ್ತದೆ.

ಶಂಕರರಿಗೆ ಐದು ವರ್ಷಕ್ಕೆ ಉಪನಯನವಾಗಿತ್ತು. ಮೊದಲು ಗ್ರಾಮದ ಸಮೀಪದಲ್ಲಿಯೇ ಇದ್ದ ಗುರುಕುಲದಲ್ಲಿ, ನಂತರ ಶ್ರೀ ಗೋವಿಂದ ಯತೀಶ್ವರರಲ್ಲಿ ಇವರ ಅಧ್ಯಯನ ನಡೆಯಿತು. ಪುಣ್ಯಜೀವಿಗಳ ಬಾಳಿನಲ್ಲಿ ಕೆಲವು ಅಸಾಮಾನ್ಯ ಘಟನೆಗಳುಸಂಭವಿಸುತ್ತವೆ.

ಸನ್ಯಾಸ ಸ್ವೀಕಾರ : ಸುಪುತ್ರ ಶಂಕರನು ಸನ್ಯಾಸಿಯಾಗುವುದು ತಾಯಿ ಆರ್ಯಾಂಬೆಗೆ ಸಮ್ಮತವಿರಲಿಲ್ಲ. ಶಂಕರರು ಸ್ನಾನಕ್ಕೆ ಹೋದಾಗ, ಮೊಸಳೆಯೊಂದು ಅವರ ಕಾಲು ಹಿಡಿಯಿತು. ಶಂಕರರು 'ಈಗಲಾದರೂ ಸನ್ಯಾಸ ಸ್ವೀಕಾರಕ್ಕೆ ಒಪ್ಪಿಗೆ ಕೊಡು- 'ಜಾತಸ್ಯ ಮರಣಂ ಆ ಧ್ರುವರ ಎಂದಾಗ, ಬಡತಾಯಿ ಭಯಭೀತಳಾಗಿ ಒಪ್ಪಿಗೆ ಕೊಟ್ಟಳು. ಇದು ಪರಮಾತ್ಮನ ಯೋಜನೆಯೇ ಆಗಿರಬೇಕು.

ನದಿ ಪಥ ಬದಲಾವಣೆ : ಪೂರ್ಣಾ ನದಿಯು, ಶಂಕರರ ಮನೆಯಿಂದ ಸ್ವಲ್ಪ ದೂರದಲ್ಲಿತ್ತು. ವೃದ್ಧಾಪ್ಯದ ಮೂಲಕ, ಆರ್ಯಾಂಬೆಗೆ ಸ್ನಾನಕ್ಕೆ ನದಿಗೆ ಹೋಗುವುದು, ಕಷ್ಟಕರವಾಗಿತ್ತು. ಶಂಕರರು ನದಿ ದೇವತೆಯನ್ನು ಪ್ರಾರ್ಥಿಸಿದಾಗ, ನದಿಯು, ಅವರ ಮನೆಯ ಸಮೀಪದಿಂದ ಹರಿಯ ತೊಡಗಿತು. ಪ್ರಕೃತಿಯಲ್ಲಿಯ ಜಡಶಕ್ತಿಯನ್ನು ಅಧ್ಯಾತ್ಮವು ಸಚೇತನಗೊಳಿಸುವುದು ಗೊತ್ತಾಗುತ್ತದೆ.

ಬಂಗಾರದ ಮಳೆ : ಬಾಲಕ ಶಂಕರರು, ಭಿಕ್ಷೆಗಾಗಿ ಬಡ ಬ್ರಾಹ್ಮಣನ ಮನೆಗೆ ಹೋದಾಗ, ಅಲ್ಲಿಯ ಗೃಹಿಣಿಯು, ಒಂದು ನೆಲ್ಲಿಕಾಯಿ ತಂದುಕೊಟ್ಟಳು. ಶಂಕರರ ಮನಸ್ಸು ಕರಗಿತು.

ಗೇಟಿದ್ದರೆ ಪೂರ್ವದಲ್ಲಿ - ಸುಳಿಯದು ಎಂಥ ಲೋಪವಲ್ಲಿ.

ಶಂಕರರು ಶ್ರೀ ಲಕ್ಷ್ಮಿ ದೇವಿಯನ್ನು ಸ್ತುತಿಸಲಾಗಿ ಆ ಮನೆಯಲ್ಲಿ ಬಂಗಾರದ ನೆಲ್ಲಿ ಕಾಯಿಗಳ ಸುರಿಮಳೆಯಾಯಿತು.

ಈ ಸ್ತೋತ್ರವು ಕನಕ ಧಾರಾಸ್ತವವೆಂದು ಪ್ರಸಿದ್ಧ.

ತಾಯಿಯ ನಿರ್ಗಮನ: ಆರ್ಯಾಂಬೆಯು ಮೃತ್ಯು ಶಯ್ಯೆಯಲ್ಲಿ ತನ್ನ ಕೊನೆಯ ಕ್ಷಣಗಳನ್ನು ಕಳೆಯುತ್ತಿದ್ದಾಗ, ಆಚಾರ್ಯರಿಗೆ, ದಿವ್ಯದೃಷ್ಟಿಗೆ ತಿಳಿದ ಕಾರಣ ಅವರ ಆಗಮನವಾಯಿತು. ತಾಯಿ ಮಗನ ಕೈ ಹಿಡಿದಾಗ, ಅವಳ ಪ್ರಾಣಪಕ್ಷಿ ಹಾರಿ ಹೋಯಿತು.

ಆರ್ಯಾಂಬೆ ಅಂತ್ಯ ಸಂಸ್ಕಾರದಲ್ಲಿ ಸಹಕರಿಸಲು ಯಾರೂ ಒಪ್ಪಲಿಲ್ಲ. ತಮ್ಮ ಅಂಗೈಗಳನ್ನು ತೀಡಿ, ಅಗ್ನಿಯನ್ನು ಉತ್ಪಾದಿಸಿ, ಶಾಸ್ತ್ರವಿಧಿಯಂತೆ ಅಗ್ನಿಸಂಸ್ಕಾರ ಪೂರ್ಣಗೊಳಿಸಿ ಜನತೆಗೆ ಆಶ್ಚರ್ಯ ತಂದರು.

ನರ್ಮದಾ ನದಿ ಕಮಂಡಲದಲ್ಲಿ: ಶ್ರೀ ಶಂಕರರು, ಶ್ರೀ ಗೋವಿಂದ ಯತೀಶ್ವರರಿಂದ, ಅನುಗ್ರಹಿಸಲ್ಪಟ್ಟು, ವಿಧಿಪೂರ್ವಕ ಸನ್ಯಾಸಿಯಾದರು. ಅವರ ಆಶ್ರಮವು ನರ್ಮದಾ ತೀರದಲ್ಲಿತ್ತು. ಒಮ್ಮೆ ನದಿಗೆ ಮಹಾಪೂರ ಬಂದು, ಆಶ್ರಮದಲ್ಲಿ ನೀರು ನುಗ್ಗಿತು. ಆಗ ಆಚಾರ್ಯರು ಕಮಂಡಲವನ್ನು ಅಭಿಮಂತ್ರಿಸಿದಾಗ ಅದು ಎಲ್ಲ ನೀರನ್ನೂ ಕುಡಿದು ಬಿಟ್ಟಿತು.

ಸಾಹಿತ್ಯ ಸಂಪದ : ಆಚಾರ್ಯರು, ಪ್ರಸ್ಥಾನತ್ರಯಿ ಉಪನಿಷತ್ತು, ಭಗವದ್ಗೀತೆ, ಬ್ರಹ್ಮಸೂತ್ರ ಇವುಗಳಿಗೆ ಪಾಂಡಿತ್ಯಪೂರ್ಣ ಭಾಷ್ಯಗಳನ್ನು ಬರೆದಿದ್ದಾರೆ. ದೇವತೆಗಳಿಗೆ ಭಕ್ತಿಪೂರ್ಣ ಸ್ತೋತ್ರಗಳನ್ನು ಬರೆದಿದ್ದಾರೆ. ಇವು ಉತ್ತಮ ಮಟ್ಟದ ಸಾಹಿತ್ಯ ಕೃತಿಗಳೂ, ಭಕ್ತಿ ರಸದ ಆಗರಗಳೂ ಆಗಿವೆ. ಇವು ಆಚಾರ್ಯರ ದಿವ್ಯ ಜ್ಞಾನಕ್ಕೆ ಹಿಡಿದ ಕನ್ನಡಿ. ಅದ್ವೈತ ಮತದ ಮೂಲಾಧಾರ. ಲಲಿತಾಸಹಸ್ರನಾಮ, ದುರ್ಗಾ, ಲಕ್ಷ್ಮೀ, ಶಾರದಾ ಸ್ತುತಿಗಳು, ಶಿವಾನಂದಲಹರಿ, ಸೌಂದರ್ಯ ಲಹರಿ, ಪರೋಕ್ಷಾನುಭೂತಿ, ಆತ್ಮ ಬೋಧ, ಭಜಗೋವಿಂದಂ, ವಿವೇಕ ಚೂಡಾಮಣಿಗಳನ್ನು ಸಾರಸ್ವತಲೋಕಕ್ಕೆ ಸಮರ್ಪಿಸಿದ್ದಾರೆ.

ಬೋಧನೆ : ಶ್ರೀ ಶ್ರೀ ಶಂಕರ ಭಗವತ್ಪಾದರು ವೇದೋಕ್ತವಾದ ಏಕಾತ್ಮತಾ ಸಿದ್ಧಾಂತವನ್ನೇ ಬೋಧಿಸಿದರು. ಅಖಂಡ ಭಾರತದಲ್ಲಿ ಕಾಲ್ನಡಿಗೆಯಿಂದಲೇ ಸಂಚರಿಸಿದರು. ಸಕಲ ಉಪನಿಷತ್ತುಗಳಲ್ಲಿಯೂ, ಜೀವನಿಗೂ, ಪರಮಾತ್ಮನಿಗೂ ಅಭೇದವೇ ಪ್ರತಿಪಾದಿತವಾಗಿದೆ ಎಂದು ಹೇಳಿದ್ದಾರೆ. ಮಾನವ ಹಿತಕ್ಕಾಗಿ, ಕರ್ಮ, ಉಪಾಸನೆ, ಆತ್ಮ ಜ್ಞಾನ ಈ ಮೂರನ್ನೂ ಹೇಳಿದ್ದಾರೆ.

ಆಚಾರ್ಯರು ಸರ್ವಕಾಲಿಕ ವಿಶ್ವಧರ್ಮವನ್ನೇ ಅರುಹಿದ್ದಾರೆ. 'ಯತ್ರ ವಿಶ್ವಂ ಭವತ್ಯೇಕ ನೀಡಂ' ಎಂದು ನಾರಾಯಣೋಪನಿಷತ್‌ನಲ್ಲಿಯ ವಾಕ್ಯವನ್ನು ಉಲ್ಲೇಖಿಸಿ, ವಿಶ್ವವನ್ನೇ ನನ್ನ ಕುಟುಂಬ ಎಂಬ ಭಾವವನ್ನು ದೃಢಪಡಿಸಿದ್ದಾರೆ. ನಂತರದಲ್ಲಿ ಅವರ ವಿಚಾರಗಳಿಗೆ, ಭಾಗ್ಯೋದಯದ ದಿನಗಳು ಉದಯವಾದವು.

— ಸಂಗ್ರಹ : ಶಾಂತಾರಾಮ ದ. ಗೋಕರ್ಣ

ಹೊನ್ನಮ್ಮನ ಕೆರೆಗೆ ನೀರಾವರಿ ಇಲಾಖೆಯಿಂದ ಕಾಯಕಲ್ಪ

ಸೋಮವಾರ ಪೇಟೆಯ ಸಮೀಪದ ಹೊನ್ನಮ್ಮನ ಕೆರೆಯನ್ನು ಸಣ್ಣ ನೀರಾವರಿ ಇಲಾಖೆಯಿಂದ ರೂ. 10ಲಕ್ಷ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ.

ದೊಡ್ಡಮಳ್ತೆ, ಹಾರೋಹಳ್ಳಿ, ಮಸಗೋಡು, ಮೋರಿಕಲ್ಲು ಹಾಗೂ ಅಡಿನಾಡೂರು ಗ್ರಾಮಗಳ ಸುಮಾರು ಸಾವಿರ ಎಕರೆ ಕೃಷಿ ಪ್ರದೇಶಕ್ಕೆ ನೀರುಣಿಸುವ ಈ ಕೆರೆಯ ಹೂಳೆತ್ತುವ ಕಾರ್ಯ ಭರದಿಂದ ಸಾಗುತ್ತಿದೆ.

ಜಿಲ್ಲೆಯಲ್ಲೇ ಅತ್ಯಂತ ದೊಡ್ಡದಾದ ಸುಮಾರು 16.5 ಎಕರೆ ವಿಸ್ತೀರ್ಣ ಹೊಂದಿರುವ ಈ ಕೆರೆಯ ಅಭಿವೃದ್ಧಿಗಾಗಿ ಸಣ್ಣ ನೀರಾವರಿ ಇಲಾಖೆ ಕೈ ಹಾಕಿದ್ದು ಗಮನಾರ್ಹ. ದಾಖಲೆಯಲ್ಲಿ 16.5 ಎಕರೆ ಪ್ರದೇಶವಿದ್ದರೂ ಸಹ ಕೆರೆಯ ಸುತ್ತ ಮುತ್ತಲಲ್ಲಿ ಸುಮಾರು 4 ಎಕರೆ ಪ್ರದೇಶ ಒತ್ತುವರಿ ಆಗಿದೆಯೆಂಬ ಕೆಲವು ಗ್ರಾಮಸ್ಥರ ಕೂಗಿಗೆ ಕಂದಾಯ ಇಲಾಖಾಧಿಕಾರಿಗಳು ತಕ್ಷಣವೆ ಸ್ಪಂದಿಸಬೇಕಾಗಿದೆ.

ವರ್ಷಕ್ಕೊಮ್ಮೆ ಬರುವ ಸ್ವರ್ಣಗೌರಿ ಹಬ್ಬದಂದು ಇಲ್ಲಿ ಎಲ್ಲಿಲ್ಲದ ಸಂಭ್ರಮ. ಹೆಂಗಸರು ಈ ಸ್ಥಳಕ್ಕೆ ಬಂದು ಬಾಗಿನ ಅರ್ಪಿಸುವುದು ಇಲ್ಲಿ ತಲತಲಾಂತರಗಳಿಂದ ನಡೆದು ಬಂದಿರುವ ಪದ್ಧತಿ. ಇಂತಹ ಇತಿಹಾಸ ಪ್ರಸಿದ್ಧ ಸ್ಥಳದ ಬಗ್ಗೆ ಪ್ರವಾಸಿ ಮಾರ್ಗದರ್ಶಿ ಪುಸ್ತಕದಲ್ಲಿ ಸೇರ್ಪಡೆಗೊಳ್ಳುತ್ತಿರುವುದು ಹೆಮ್ಮೆ ಅಲ್ಲದೆ ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಕೂಡ ಪ್ರಸ್ತುತ ಈ ಬಗ್ಗೆ ಗಮನ ಹರಿಸಿ ಕರ್ನಾಟಕದ ಪ್ರವಾಸೋದ್ಯಮ ತಾಣಗಳಲ್ಲಿ ಹೊನ್ನಮ್ಮನ ಕೆರೆಯು ಒಂದು ಎಂಬದಾಗಿ ದಾಖಲಿಸಬೇಕಾಗಿರುವದು ಅತ್ಯವಶ್ಯಕವಾಗಿದ್ದು, ಈ ಬಗ್ಗೆ ಇಲಾಖೆ ಮುಖ್ಯಸ್ಥರು ಈಗಾಗಲೇ ಈ ಸ್ಥಳಕ್ಕೆ ಭೇಟಿ ನೀಡಿದ್ದಾಗಿದೆ.

ಕಳೆದ ಸ್ವರ್ಣಗೌರಿ ಹಬ್ಬದಂದು ಕಾರ್ಯಕ್ರಮಕ್ಕೆ ಆಗಮಿಸಿದ ಜಿ.ಪಂ. ಅಧ್ಯಕ್ಷೆ ಚಂದ್ರಕಲಾ ಪ್ರಸನ್ನ ಅವರು ಈ ಕೆರೆಗೆ ರೂ. 60ಸಾವಿರ ಬಿಡುಗಡೆ ಮಾಡಿ ದೋಣಿ ಸೌಲಭ್ಯಕ್ಕೆ ಸೂಚಿಸಿದ್ದಾರೆ.

ಇದೀಗ ಕೆರೆ ಅಭಿವೃದ್ಧಿ ಕಾರ್ಯಕ್ಕೆ ಬಿರುಸಿನ ಚಾಲನೆಯೊಂದಿಗೆ ಪ್ರವಾಸಿಗರನ್ನು ಆಕರ್ಷಿಸುವ ತಾಣವಾಗಿ ಪರಿವರ್ತನೆಗೊಳ್ಳುವಂತಾಗಿದೆ.

ವಿ. ಸೂ. : ಹೊನ್ನಮ್ಮನ ಕೆರೆಯು ಕೊಡಗು ಪ್ರಾಂತ್ಯವನ್ನು ಆಳಿದ ತಲಕಾಡಿನ ಗಂಗರಸರ ವಂಶಕ್ಕೆ ಸೇರಿದ ಹತ್ತಿರದ ಸಂಬಂಧಿಯ ಒಬ್ಬ ಗೌಡ ಪಾಳೆಗಾರನ ಸೊಸೆಯಾದ ಹೊನ್ನಮ್ಮಳ ಕೆರೆಯೇ ಈ ಮೇಲಿನ ಲೇಖನದ ಕೆರೆಯಾಗಿದೆ. ಸಂಚಿ ಹೊನ್ನಮ್ಮಳ ಕಥೆಯ ವಿವರವನ್ನು ಸಂಗಾತಿಯ ಸಂಪುಟ 2 ಸಂಚಿಕೆ 2ರಲ್ಲಿ ನೀಡಲಾಗಿದೆ.

— ಸಂಗಾತಿ.

ಪೂರ್ವಾಗ್ನೇಯದ ಗೇಟು - ಅರಿಷ್ಟಗಳ ಚೂರಿ ಏಟು.

ಕಾಶ್ಮೀರ ಕಣಿವೆಯಲ್ಲಿ ಕೊಡಗಿನ ಯೋಧನ ವೀರ ಮರಣ
ಉಗ್ರರ ದಾಳಿಗೆ ನಾಪೋಕ್ಲಿನ ಬಾವಲಿಗ್ರಾಮದ ದೇವಪ್ಪ ಪೂಜಾರಿ ಹತ



ಇತ್ತೀಚೆಗೆ ಕಾಶ್ಮೀರ ಕಣಿವೆ ಪ್ರದೇಶದಲ್ಲಿ ಉಗ್ರಗಾಮಿಗಳ ವಿರುದ್ಧ ನಡೆಸುತ್ತಿದ್ದ ಸೇನಾ ಕಾರ್ಯಾಚರಣೆ ಸಂದರ್ಭ ಗುಂಡಿನ ಕಾಳಗದಲ್ಲಿ ಹುತಾತ್ಮರಾದ ನಾಪೋಕ್ಲು ಸಮೀಪ ಬಾವಲಿ ಗ್ರಾಮದ ಯೋಧ ದೇವಪ್ಪ ಪೂಜಾರಿ(23) ಅವರ ಪಾರ್ಥಿವ ಶರೀರವು ಸ್ವಗ್ರಾಮಕ್ಕೆ ಆಗಮಿಸಿದ ಸಂದರ್ಭ, ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದ ನಾಗರೀಕರು 'ದೇವಪ್ಪ ಅಮರ್ ರಹೇ ಎಂಬ ಘೋಷಣೆಯೊಂದಿಗೆ ಮೆರವಣಿಗೆಯಲ್ಲಿ ಕೊಂಡೊಯ್ದು, ಸಾರ್ವಜನಿಕ ದರ್ಶನದ ಬಳಿಕ ಸಕಲ ಸರ್ಕಾರಿ ಗೌರವದೊಂದಿಗೆ ಅಂತ್ಯಸಂಸ್ಕಾರ ನಡೆಸಲಾಯಿತು.

ಸೇನಾ ಕಾರ್ಯಾಚರಣೆ

ಜಮ್ಮು ಕಾಶ್ಮೀರದ ಕುಪ್ವಾರ ಜಿಲ್ಲೆಯ ಜನ್ನಾರ್ - ಸಂಗಲ್ ಪ್ರದೇಶದ ಕಾಂಡಿ ಎಂಬ ಗ್ರಾಮದ ಬಳಿ ಪಾಕ್ ಬೆಂಬಲಿತ ಲಷ್ಕರ್‌ತೊಯಿಬಾ ಸಂಘಟನೆಯ ಉಗ್ರರ ನೆಲೆಯನ್ನು ಭೇಧಿಸಲು, ಭಾರತದ ಸೇನೆಯು ಕಾರ್ಯಾಚರಣೆ ನಡೆಸುತ್ತಿದ್ದ ಸಂದರ್ಭ14-6-2001ರಂದು ಗುಂಡಿನ ಚಕಮಕಿ ನಡೆದಿತ್ತು. ಕಾರ್ಯಾಚರಣೆಯ ಮುಂಚೂಣಿಯಲ್ಲಿದ್ದ ಕೊಡಗಿನ ದೇವಪ್ಪ ಪೂಜಾರಿ ಹಾಗೂ ಕೇರಳದ ರಾಧಾಕೃಷ್ಣನ್ ಅವರುಗಳು ಯಶಸ್ವಿಯಾಗಿ ಮುನ್ನುಗ್ಗಿ ಉಗ್ರರ ನೆಲೆಯನ್ನು ಜಾಲಾಡಿ ಐದು ಮಂದಿ ಉಗ್ರರನ್ನು ಬಲಿ ತೆಗೆದುಕೊಂಡಿದ್ದರು. ಕಾರ್ಯಾಚರಣೆ ಮುಂದುವರೆಯುತ್ತಿದ್ದ ಸಂದರ್ಭ ಬದಿಯಲ್ಲಿ ಅಡಗಿದ್ದ ಉಗ್ರರು ಹಾರಿಸಿದ ಗುಂಡು ದೇವಪ್ಪ ಅವರ ಎದೆಯನ್ನು ಸೀಳಿ ದೇಶ ರಕ್ಷಣೆಗೆ ಯೋಧನನ್ನು ಅರ್ಪಿಸಿಕೊಳ್ಳುವಂತೆ ಮಾಡಿತು. ಕ್ಷಣಮಾತ್ರದಲ್ಲಿ ಗ್ರೆನೆಡ್ ಸ್ಫೋಟಿಸಿದ ಪರಿಣಾಮ ದೇವಪ್ಪ ಅವರ ಹೊಟ್ಟೆಯ ಭಾಗಕ್ಕೆ ಬಲವಾದ ಪೆಟ್ಟು ಬಿದ್ದಿತ್ತಲ್ಲದೆ, ಸಹಪಾಠಿ ರಾಧಾಕೃಷ್ಣ ಅವರನ್ನು ಬಲಿ ತೆಗೆದುಕೊಂಡಿದೆ.

ಜೂನ್ 14ರಂದು ಬೆಳಿಗ್ಗೆ 10-30ರ ವೇಳೆಯಲ್ಲಿ ಈ ದುರ್ಘಟನೆ ಸಂಭವಿಸಿದ್ದು, ತಾ. 15 ರಂದು ಕಾಶ್ಮೀರದಿಂದ ದೆಹಲಿಗೆ ಬಂದು ತಾ. 16 ರಂದು ಸಂಜೆ ಬೆಂಗಳೂರಿಗೆ ದೇವಪ್ಪ ಅವರ ಪಾರ್ಥಿವ ಶರೀರವನ್ನು ತರಲಾಯಿತು. ಆ ಬಳಿಕ ಬೆಳಿಗ್ಗೆ ಬೆಂಗಳೂರಿನಿಂದ ಹೊರಟು ಮಧ್ಯಾಹ್ನ 3 ಗಂಟೆ ವೇಳೆಗೆ ನಾಪೋಕ್ಲುವಿಗೆ ತರಲಾಯಿತು. ಬೆಂಗಳೂರಿನಿಂದ ಹೊರಟು ಜಿಲ್ಲೆಗೆ ಪ್ರವೇಶಿಸಿದ ಸಂದರ್ಭ ಕುಶಾಲನಗರದಲ್ಲಿ ಜಿ.ಪಂ. ಸದಸ್ಯ ವಿ. ಪಿ. ಶಶಿಧರ್ ಅವರು ದೇವಪ್ಪ ಅವರ ಪಾರ್ಥಿವ ಶರೀರಕ್ಕೆ ಪುಷ್ಪ ಗುಚ್ಛವಿರಿಸಿ ಮೆರವಣಿಗೆಯಲ್ಲಿ ಬರಮಾಡಿಕೊಂಡರು. ಅನಂತರ ಮಡಿಕೇರಿಗೆ ಬಂದ ಸಂದರ್ಭ ಸುದರ್ಶನ ವೃತ್ತದ ಬಳಿ ಮಡಿಕೇರಿ ತಾಲೂಕು ತಹಶೀಲ್ದಾರ್ ವಿ. ಎಲ್. ಹೆಗಡೆ, ಜಿಲ್ಲಾ ಉಸ್ತುವಾರಿ ಸಚಿವರ ಪರ ಆಪ್ತ ಕಾರ್ಯದರ್ಶಿ ಬಿ. ಆರ್. ಗೊಕುಲ್‌ನಾಥ್ ನಾಯಕ್, ತಾ. ಪಂ. ಸದಸ್ಯೆ ಜಯಂತಿ ಶೆಟ್ಟಿ ಅವರುಗಳು ಪುಷ್ಪಗುಚ್ಛವಿರಿಸಿ ಗೌರವ ಸಲ್ಲಿಸಿದರು.

ಆ ಬಳಿಕ ಬೆಟ್ಟಗೇರಿಯಲ್ಲಿ ನಾಪೋಕ್ಲು ಠಾಣಾಧಿಕಾರಿ ಡಿ. ಕುಮಾರ್ ಅವರು ಹೂಗುಚ್ಛವಿರಿಸಿ ಗೌರವ ಸಲ್ಲಿಸಿ ಬರಮಾಡಿಕೊಂಡರು. ಕೊಟ್ಟಮುಡಿಯಲ್ಲಿ ಆಟೋ ಚಾಲಕರ ಸಂಘದ ವತಿಯಿಂದ ಹೂಗುಚ್ಛ ಇರಿಸಲಾಯಿತು.

ಈ ಸಂದರ್ಭ ಇಲ್ಲಿಂದಲೇ ಅಪಾರ ಸಂಖ್ಯೆ ವಾಹನಗಳು, ಆಟೋಗಳು ಯೋಧನ ಪಾರ್ಥಿವ ಶರೀರ ಹೊತ್ತಿದ್ದ ಖಾಸಗಿ ಆಂಬುಲೆನ್ಸ್ ವಾಹನದ ಮುಂದೆ ಸಾಲುಗಟ್ಟಿ ತೆರಳಿದವು. ನಾಪೋಕ್ಲುವಿಗೆ ಪಾರ್ಥಿವ ಶರೀರ ತಲುಪುವ ಮುನ್ನವೇ ಸಾವಿರಾರು ಸಂಖ್ಯೆಯಲ್ಲಿ ಸುತ್ತಮುತ್ತಲ ನಾಗರಿಕರು ನೆರೆದಿದ್ದರು. ದೇವಪ್ಪ ಅವರ ಮೃತದೇಹ ನಾಪೋಕ್ಲುವಿಗೆ ಮಧ್ಯಾಹ್ನ 3 ಗಂಟೆ ಹೊತ್ತಿಗೆ ಪ್ರವೇಶಿಸುತ್ತಿದ್ದಂತೆ ಸಹಸ್ರ ಕಂಠದಲ್ಲಿ 'ದೇವಪ್ಪ ಅಮರ್ ರಹೇ, 'ಭಾರತ್ ಮಾತಾಕೀ ಜೈ', 'ಸೈನಿಕ್ ಅಮರ್ ರಹೇ ಎಂಬಿತ್ಯಾದಿ ಘೋಷಣೆಗಳೊಂದಿಗೆ ಪ್ರಮುಖ ಬೀದಿಯಲ್ಲಿ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು.

ಅಂತಿಮ ದರ್ಶನ

ಅನಂತರ ಇಲ್ಲಿನ ಗ್ರಾ. ಪಂ. ಕಟ್ಟಡದಲ್ಲಿ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕೆ ಇರಿಸಲಾಯಿತು. ನಾಲ್ಕುನಾಡು ವ್ಯಾಪ್ತಿಯಿಂದ ಆಗಮಿಸಿದ್ದ ಸಾವಿರಾರು ಮಂದಿ ಭಾರತಾಂಬೆಯ ರಕ್ಷಣೆಗಾಗಿ ಜೀವ ತೆತ್ತ ಯೋಧನ ಅಂತಿಮ ದರ್ಶನ ಪಡೆದರು.

ವಿವಿಧ ಸಂಘಟನೆಗಳ ಪ್ರಮುಖರು ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛವಿರಿಸಿ ಅಂತಿಮ ನಮನ ಸಲ್ಲಿಸಿದರು.

ಬಳಿಕ ದೇವಪ್ಪ ಅವರ ಪಾರ್ಥಿವ ಶರೀರವನ್ನು ಸ್ವಗ್ರಾಮವಾದ ಬಾವಲಿ ಗ್ರಾಮಕ್ಕೆ ಕೊಂಡೊಯ್ಯಲಾಯಿತು. ಅಲ್ಲಿ ಯೋಧನ ತಂದೆ, ಪೋಷಕರು, ಕುಟುಂಬ ವರ್ಗದವರು ಹಾಗೂ ನಾಗರೀಕರು ಊರಿನ ಯುವಕ ಮೃತ ಯೋಧ ದೇವಪ್ಪ ಅವರ

ಪಾರ್ಥಿವ ಶರೀರಕ್ಕೆ ಹೂ ಹಾಕುವ ಮೂಲಕ ಗೌರವ ಸಲ್ಲಿಸಿದರು.

ಬಳಿಕ ಸಂಜೆ 6 ಗಂಟೆ ವೇಳೆಗೆ ನಾಪೋಕ್ಲು ವಿನ ಕೂರುಳಿ ರಸ್ತೆಯಲ್ಲಿ ಮೃತಯೋಧ ದೇವಪ್ಪ ಅವರು ಖರೀದಿಸಿದ್ದ ಬರೇ 10 ಸೆಂಟ್ ಜಾಗದಲ್ಲಿಯೇ ಅಂತಿಮ ಸಂಸ್ಕಾರ ನೆರವೇರಿಸಲಾಯಿತು. ಸಂಜೆ 7 ಗಂಟೆ ವೇಳೆಗೆ ಜಿಲ್ಲಾ ಸಶಸ್ತ್ರ ಪಡೆಯ ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸುವ ಮೂಲಕ ಅಗಲಿದ ಯೋಧನಿಗೆ ಅಂತಿಮ ನಮನ ಅರ್ಪಿಸಿದರು. ಅಗಲಿದ ಯೋಧ ದೇವಪ್ಪ ಅವರ ಗೌರವಾರ್ಥ ಮಧ್ಯಾಹ್ನ 2 ಗಂಟೆಯಿಂದ 4 ಗಂಟೆಯವರೆಗೆ ಚೇಂಬರ್ ಆಫ್ ಕಾಮರ್ಸ್ ಕರೆಯ ಮೇರೆಗೆ ನಾಪೋಕ್ಲುನಲ್ಲಿ ಬಂದ್ ನಡೆಸಲಾಯಿತು.

— ಇ. ಕೆ. ತಿಮ್ಮಪ್ಪ

ಐವರನ್ನು ಧರೆಗುರುಳಿಸಿದ ವೀರಯೋಧ.



ದೇಶರಕ್ಷಣೆಯ ಸಂದರ್ಭ ಕಾಶ್ಮೀರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಕೊಡಗಿನ ಯೋಧ ದೇವಪ್ಪ ಅವರು ಅಸುನೀಗುವ ಮುನ್ನ ಐವರು ದೇಶದ್ರೋಹಿಗಳನ್ನು ಬಲಿತೆಗೆದು ಕೊಂಡಿದ್ದರು ಎಂಬುದಾಗಿ ತಿಳಿದು ಬಂದಿದೆ. ದೇವಪ್ಪ ಅವರ ಪಾರ್ಥಿವ ಶರೀರವನ್ನು ಸ್ವಗ್ರಾಮಕ್ಕೆ ತಂದ ಸಂದರ್ಭ ಮದ್ರಾಸ್ ಇನ್‌ಫೆಂಟ್ರಿ ರೆಜಿಮೆಂಟ್‌ನ 10ನೇ ಬೆಟಾಲಿಯನ್ ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ದೇವಪ್ಪ ಅವರು, ಉಗ್ರಗಾಮಿಗಳ ವಿರುದ್ಧ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಜಮ್ಮು-ಕಾಶ್ಮೀರ ಕುಪ್ವಾರ ಜಿಲ್ಲೆಯ ಕಾಂಡಿ ಗ್ರಾಮದಲ್ಲಿ ಅಫಘಾನ್ ಹಾಗೂ ಲಷ್ಕರ್ ತೊಯಿಬಾ ಸಂಘಟನೆಯ ಉಗ್ರರು ಅಡಗಿದ್ದ ಖಚಿತ ಸುಳಿವಿನ ಮೇರೆಗೆ 200 ಮಂದಿ ಸೈನಿಕರಿದ್ದ ತಂಡ ನೆಲೆಯನ್ನು ಸುತ್ತುವರಿದಿತ್ತು.

ಮುಂಚೂಣಿಯಲ್ಲಿ ಕರ್ತವ್ಯದಲ್ಲಿದ್ದ ದೇವಪ್ಪ ಮುಂದಾಗಿ ಮುನ್ನುಗ್ಗುತ್ತಿದ್ದರು. ಹಗುರ ಮೆಷಿನ್‌ಗನ್‌ನೊಂದಿಗೆ ಕಾರ್ಯಾಚರಣೆಯಲ್ಲಿದ್ದ ಇವರು, ಐದು ಮಂದಿ ಉಗ್ರರನ್ನು ತಮ್ಮ ಬಂದೂಕಿನಿಂದ ಬಲಿತೆಗೆದುಕೊಂಡಿದ್ದರು. ಇವರೊಂದಿಗೆ ಕೇರಳದ ರಾಧಾಕೃಷ್ಣನ್ ಎಂಬವರು ಪಾಲ್ಗೊಂಡಿದ್ದರು. ಈ ಘಟನೆ ನಡೆದ ಕೆಲವೇ ಕ್ಷಣಗಳಲ್ಲಿ ಅಡವಿಯಲ್ಲಿ ಅಡಗಿದ್ದ ಉಗ್ರರು ಇವರತ್ತ ಹಾರಿಸಿದ ಗುಂಡು ನೇರವಾಗಿ ದೇವಪ್ಪ ಅವರ ಎದೆ ಭಾಗಕ್ಕೆ ತಗುಲಿತು. ತೀವ್ರಗಾಯಗೊಂಡಿದ್ದ ಅವರು ಸ್ಥಳದಲ್ಲೇ ಕುಸಿದು ಬೀಳುತ್ತಿದ್ದ ಸಂದರ್ಭವೇ ಮತ್ತೊಂದು ಗ್ರೆನೇಡ್ ಇದೇ ಸ್ಥಳದಲ್ಲಿ ಸ್ಫೋಟಗೊಂಡು ದೇವಪ್ಪ ಅವರ ಹೊಟ್ಟೆಭಾಗಕ್ಕೆ ಮಾರಣಾಂತಿಕ ಹೊಡೆತ ನೀಡಿತಲ್ಲದೆ, ಇವರ ಸಹಪಾಠಿ ರಾಧಾಕೃಷ್ಣನ್ ಅವರನ್ನು ಬಲಿತೆಗೆದುಕೊಂಡಿದೆ.

ಪ್ರಸ್ತುತ ಕಾಶ್ಮೀರದ ಪರಿಸ್ಥಿತಿಯ ಬಗ್ಗೆ ದಿನನಿತ್ಯ ಗುಂಡಿನ ಕಾಳಗ ಸಾಮಾನ್ಯವಾಗಿರುತ್ತದೆ. ಅಲ್ಲಿನ ಸ್ಥಳೀಯರೇ ಉಗ್ರಗಾಮಿಗಳಿಗೆ ಆಶ್ರಯ ನೀಡುವ ಮೂಲಕ ಪರೋಕ್ಷವಾಗಿ ಸೇನೆಯ ಧೈರ್ಯಗುಂದಿಸುತ್ತಿದ್ದರು. ರಾಷ್ಟ್ರ ರಕ್ಷಣೆಯಲ್ಲಿ ನಾವೇನೂ ಹಿಂದೆ ಬಿದ್ದಿಲ್ಲ. ಕಾರ್ಗಿಲ್ ಕದನದ ಬಳಿಕ ಸೇನೆ ಕಾಶ್ಮೀರದಲ್ಲಿ ಉಗ್ರ ನೆಲೆಯನ್ನು ಅಲುಗಾಡಿಸಿದೆ. ಯಾವತ್ತೂ ಜಯ ನಮ್ಮದೆ.

ದಿನಾಂಕ 14ರಲ್ಲಿ ಅಸುನೀಗಿದ ದೇವಪ್ಪ ಪೂಜಾರಿ ಇವರು ಈವರೆಗೆ ಜೀವತೆತ್ತ ಬಲಿದಾನಗೈದ ಕೊಡಗಿನ ಯೋಧರಲ್ಲಿ ಅತ್ಯಂತ ಕಿರಿಯವನಾಗಿದ್ದಾನೆ. ಯೋಧ ದೇವಪ್ಪ, ಮುತ್ತಪ್ಪ ಪೂಜಾರಿ ಮತ್ತು ದೇವಕ್ಕಿ ದಂಪತಿಯ ಪುತ್ರ. ತಾನು 6 ವರ್ಷ ಪ್ರಾಯದವನಿದ್ದಾಗಲೇ ತಾಯಿಯನ್ನು ಕಳೆದುಕೊಂಡ ದುರ್ದೈವಿ ದೇವಪ್ಪನಿಗೆ 6 ಮಂದಿ ಒಡಹುಟ್ಟಿದವರು. ಇವರೆಲ್ಲರು ಚಿಕ್ಕಪ್ಪನ ಮಗಳು ಲಕ್ಷ್ಮಿಯ ಆಸರೆಯಲ್ಲಿ ಬೆಳೆದವರು.

ದೇವಪ್ಪ ಪದವಿ ಪೂರ್ವ ಶಿಕ್ಷಣವನ್ನು ನಾಪೋಕ್ಲಿನಲ್ಲಿ ಮುಗಿಸಿ 1998ರಲ್ಲಿ ಭಾರತೀಯ ಸೇನೆಯನ್ನು 2ನೇ ಪ್ರಯತ್ನದಲ್ಲಿ ಸೇರಿದರು. ತಮಿಳುನಾಡಿನ ವೆಲ್ಲಿಂಗ್ಟನ್‌ನಲ್ಲಿ ತರಬೇತಿ ಮುಗಿಸಿ ಕಾಶ್ಮೀರದಲ್ಲಿ ಕುಪ್ವಾರದಲ್ಲಿ ಕರ್ತವ್ಯ ನಿರತರಾಗಿದ್ದ ಕಡುಬಡತನದಲ್ಲಿ ಬೆಳೆದ ಇವರು ಇತ್ತೀಚೆಗೆ 10 ಸೆಂಟ್ ಜಾಗ ಖರೀದಿಸಿದ್ದರು. ಕೂರುಳಿ ರಸ್ತೆಯಲ್ಲಿ ತಾನು ಖರೀದಿಸಿದ 10 ಸೆಂಟ್ ಜಾಗದಲ್ಲಿಯೇ ತನ್ನ ಅಂತ್ಯಕ್ರಿಯೆ ನೆರವೇರಿದ್ದು ಎಂತಹ ವಿಪರ್ಯಾಸವಲ್ಲವೇ?

ದೇಶ ರಕ್ಷಣೆಗಾಗಿ ತನ್ನ ಕರ್ತವ್ಯದಲ್ಲಿದ್ದ ಸಂದರ್ಭ ದೇಶದ್ರೋಹಿ ಉಗ್ರಗಾಮಿಗಳ ಗುಂಡಿನ ಸುರಿಮಳೆಗೆ ಧರೆಗುರುಳಿ ತನ್ನ ದೇಹವನ್ನು ಈ ಭಾರತ ಮಾತೆಯ ಒಡಲಿಗೆ ಅರ್ಪಿಸಿ ಹುತಾತ್ಮನಾದ ಕಿರಿಯ ಯೋಧ ಭಾವಲಿಗ್ರಾಮದ, ದೇವಪ್ಪ ಪೂಜಾರಿಯವರಿಗೆ ಕೊಡಗು ಸಂಗಾತಿ ಓದುಗರ ಪರವಾಗಿ ತನ್ನ ಅಂತಿಮ ಅಶ್ರುತರ್ಪಣವನ್ನು ಈ ಮೂಲಕ ಅರ್ಪಿಸುತ್ತದೆ.

— ಸಂಗಾತಿ.

ಮಹದೇವಪುರ — ಸೆಂಟ್ ಪರ್‌ಸೆಂಟ್ ರಿಸಲ್ಟ್

ಶ್ರೀರಂಗ ಪಟ್ಟಣ ತಾಲೂಕು ಮಹದೇವಪುರ ಗ್ರಾಮದ ಸರ್. ಎಂ. ವಿಶ್ವೇಶ್ವರಯ್ಯ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2000-2001ರ ಸಾಲಿನಲ್ಲಿ 7ನೇ ತರಗತಿಯ ಪರೀಕ್ಷೆಯಲ್ಲಿ ನೂರಕ್ಕೆ ನೂರರ ಫಲಿತಾಂಶ ಬಂದಿದೆ. ಕುಳಿತ 23 ವಿದ್ಯಾರ್ಥಿಗಳಲ್ಲಿ 11 ಉನ್ನತ, 11 ಪ್ರಥಮ ಹಾಗೂ ಒಬ್ಬ ವಿದ್ಯಾರ್ಥಿ ದ್ವಿತೀಯ ಸ್ಥಾನದಲ್ಲಿ ಪಾಸಾಗಿದ್ದು ಶಾಲೆಗ ಹಾಗೂ ಊರಿನ ಜನತೆಗೆ ಹರ್ಷವನ್ನು ತಂದು ಕೊಟ್ಟಿದೆ.

— ಎಂ. ಎಸ್. ಕೃಷ್ಣಪ್ಪ, ಮಹದೇವ ಪುರ
ಸಂಗಾತಿ ಚಂದಾದಾರ

Kodagu-Gowda.Com



"ಇಂಟರ್‌ನೆಟ್"-ಸಂಪರ್ಕ ತಂತ್ರಜ್ಞಾನದ ಹೊಚ್ಚ ಹೊಸ ಅವಿಷ್ಕಾರ ನಿಮ್ಮ ಮನೆಯ ಕೋಣೆಯ ಮೂಲೆಯ PCಯ ಮುಂದೆ ಕುಳಿತು ವಿಶ್ವದ ನಾನಾ ಮೂಲೆಗಳಲ್ಲಿ ನಡೆಯುವ ಸುದ್ಧಿ, ಸಮಾಚಾರಗಳ ಮಾಹಿತಿಯನ್ನು Internetಮೂಲಕ ನಾವು ಪಡೆಯಬಹುದು. ನಮ್ಮ ಬಗ್ಗೆ ಮಾಹಿತಿಯನ್ನು ವಿಶ್ವದಾದ್ಯಂತ ಜನರಿಗೆ ತಿಳಿಯಪಡಿಸಬಹುದು, ಕ್ಷಣಾರ್ಧದಲ್ಲಿ ಸಾವಿರಾರು ಮೈಲಿ ದೂರ, ಸಮುದ್ರದಾಚೆಗಿನ ದೇಶದಲ್ಲಿರುವ ನಿಮ್ಮ ಮಿತ್ರನಿಗೆ e-mail [Electronic Mail]ಸಂದೇಶವನ್ನು ಕಳುಹಿಸಬಹುದು.

ಭಾರತದ ಒಂದು ಮೂಲೆಯಲ್ಲಿರುವ ನಮ್ಮ ಬಗ್ಗೆ, ಎಂದರೆ ಗೌಡ ಜನಾಂಗದ ಬಗ್ಗೆ, ಕೊಡಗಿನ ಅರೆ ಭಾಷೆ, ಗೌಡರ ಸಂಪ್ರದಾಯಗಳ ಬಗ್ಗೆ ಕೂಡInternetನಲ್ಲಿ ದಾಖಲಾತಿಗಳಿವೆ. Internetನಲ್ಲಿ www.kodagu-gowda.com ಎಂದು ಟೈಪ್‌ಮಾಡಿದರೆ ಈ websiteನ Home-pageಗೆ ಹೋಗುವಿರಿ. ಈ websiteನಲ್ಲಿ ಕೊಡಗಿನ ಪ್ರೇಕ್ಷಣೀಯ ಸ್ಥಳಗಳು, ನಮ್ಮ ಭಾಷೆ ಸಾಹಿತ್ಯದ ಹಿನ್ನೆಲೆ, ಸುಮಾರು 375 ಗೌಡರ ಮನೆತನದ ವಿವರಗಳು, ಅನೇಕ ಗೌಡ ಸಂಘ-ಸಂಸ್ಥೆಗಳ ವಿವರ, ಹುಟ್ಟು-ಸಾವು, ಹಬ್ಬ ಹರಿದಿನಗಳ ಆಚರಣೆ ಹಾಗೂ ವಧು-ವರರ ಅನ್ವೇಷಣೆಯ ವಿವರ ಕೂಡ ಇದೆ.

15ನೇ ಅಕ್ಟೋಬರ್ 2000 ಇಸವಿಯಿಂದ ಚಾಲ್ತಿಯಲ್ಲಿರುವ ಈ websiteಕೊಡಗಿನ ಗೌಡ ಜನಾಂಗದ ಬಗ್ಗೆ ಮಾಹಿತಿ ಒದಗಿಸುವ ಮೊದಲನೇ ಪ್ರಯತ್ನ. ಈ websiteನ ಸೃಷ್ಟಿಕರ್ತರು 24ವರ್ಷದ ಯೆಂಕನ ವಿನೋದ್, ಹಾಗೂ ಇವರ ಸಹಚರರಾದ ಯೆಂಕನ ಭಜನ್ ಮತ್ತು ಬಾಡನ ವೆಂಕಟೇಶ್, ಕುಂದಿಕೊಪ್ಪದ ನಿವಾಸಿಗಳಾದ Y.N. ಅಪ್ಪಚ್ಚ ಹಾಗೂ ಬೇಬಿ ದಂಪತಿಗಳ ಮಗನಾದ ಯೆಂಕನ ವಿನೋದ್ B.Com ಪದವೀಧರ. ಮಡಿಕೇರಿಯ Aptechನಲ್ಲಿ Higher Diploma in Software Engineering ಮುಗಿಸಿ ವಿನೋದ್ ತನ್ನ ಸ್ವಂತ ಪ್ರಯತ್ನದಿಂದ Kodagu-Gowda Domain ನೋಂದಣಿ ಮಾಡಿಸಿದರು. ಈ website ಅನ್ನು ವೀಕ್ಷಿಸಿರುವ ಗೆಳೆಯರ ಅಭಿಪ್ರಾಯಗಳಿಂದ ವಿನೋದ್ ತಮ್ಮ ಪ್ರಯತ್ನಕ್ಕಾಗಿ ಸಂತುಷ್ಟರಾಗಿದ್ದಾರೆ. ಉಚಿತ e-mail ಸೌಲಭ್ಯ, ಹುಟ್ಟುಹಬ್ಬ ಶುಭಾಷಯಗಳು ಹಾಗೂ ನಾನಾ ಮನೆತನದವರ ಬಗ್ಗೆ ಹೆಚ್ಚಿನ ಮಾಹಿತಿಯನ್ನೊದಗಿಸಬೇಕೆಂದು ಯೋಜನೆಗಳನ್ನು ಹಾಕಿಕೊಂಡಿರುವ ವಿನೋದ್ ಮತ್ತು ತಂಡಕ್ಕೆ 'ಕೊಡಗು ಸಂಗಾತಿ ಹಾಗೂ ಗೌಡ ಜನತೆಯ ಪರವಾಗಿ ನಮ್ಮ ಶುಭಾಶಯಗಳು

— ಎಡಿಕೇರಿ ಸುದರ್ಶನ್, ಬೆಂಗಳೂರು.

ನಾವೇಕೆ "ಸಾಹಿತ್ಯ" ವನ್ನು ಬಡವಾಗಿಸುತ್ತಿದ್ದೇವೆ !?

'ಸಾಹಿತ್ಯ' ಸಹಸ್ರಾರು ವರ್ಷಗಳ ಐತಿಹ್ಯವನ್ನು ಹಾಗೂ ವಿಶೇಷ ಗುಣ ಮೌಲ್ಯವನ್ನು ಹೊಂದಿದೆ. ಪ್ರಾಪಂಚಿಕತೆಯ ಮಾನವನ ಜೀವನದ ಒಂದು ಸಮಗ್ರ ಚಿತ್ರಣವು ಈ 'ಸಾಹಿತ್ಯ' ದಿಂದ ಮಾತ್ರ ಲಭ್ಯ ಎಂಬುದನ್ನು ಯಾವತ್ತೂ ತಳ್ಳಿಹಾಕುವಂತಿಲ್ಲ. ನಮ್ಮ ಮಾನಸಿಕತೆಯ ದುರ್ಬಲತೆಯನ್ನು ಸರಿಪಡಿಸಿಕೊಂಡು ಬೌದ್ಧಿಕತೆಯ ವಿಕಸನಕ್ಕೆ ಕಾರಣೀಭೂತವಾದ ಈ 'ಸಾಹಿತ್ಯ'ವನ್ನು ಎಲ್ಲಾ ದೃಷ್ಟಿಯಿಂದಲೂ ಉದ್ದೀಪಿಸದೇ ಹೋದಲ್ಲಿ ಕರ್ನಾಟಕದ ಹಿರಿಮೆಯ ಕನ್ನಡ ತಾಯಿನುಡಿ ಬಡವಾಗುವುದರಲ್ಲಿ ಎರಡು ಮಾತಿಲ್ಲ.

ಬದುಕಿನ ಅನೇಕ ಜಂಜಡಗಳ ಮಧ್ಯೆ ಮನಸ್ಸು ತನ್ನ ಸಮತೋಲನವನ್ನು ಕಳೆದುಕೊಂಡಾಗ ಜೀವನಯಾತ್ರೆ ಹಾಗೂ ಸಾವು-ನೋವುಗಳ ಅಂತರ್ಯವನ್ನು ಅರ್ಥೈಸಿಕೊಳ್ಳುವ ತಾರ್ಕಿಕ ಮನೋಭಾವ, ಮುಂಬರುವ ಕಷ್ಟಕೋಟಲೆಗಳನ್ನು ಜಯಿಸುವಂತಹ ಆತ್ಮ ವಿಶ್ವಾಸ ಮನದಂಗಳದಲ್ಲಿ ಮೂಡುತ್ತದೆ. ಇಂತಹ ಒಂದು ಆತ್ಮ ಧೈರ್ಯವನ್ನು ಬೆಳೆಸಲು 'ಸಾಹಿತ್ಯ'ವು ನೆರವಾಗುತ್ತದೆ.

ದಾಸವರೇಣ್ಯರು, ಜನಪದೀಯರು ತಮ್ಮ ಆಶು ಸಾಹಿತ್ಯದ ಕೀರ್ತನೆ-ಹಾಡುಗಳ ಮೂಲಕವೇ ತಮ್ಮ ಮನಸ್ಸಿನ ಭಾವ ನಿವೇಧನೆಯನ್ನು ಮಾಡಿಕೊಳ್ಳುತ್ತಿದ್ದರು. ಇಂತಹ ಸಾಹಿತ್ಯ ಪ್ರಪಂಚದ ಒಳಹೊಕ್ಕು ವಿಹರಿಸಿದಲ್ಲಿ ನಿತ್ಯ ಜೀವನದ ಅನಂತ ಸಂಕಷ್ಟಗಳು ಮನಸ್ಸಿನಿಂದ ಮರೆಯಾಗಿ, ಮನಸ್ಸು ಪ್ರಾಂಜಲವಾಗಿ ಯಾವುದೋ ಮಧುರಾನಂದಾನುಭೂತಿಯನ್ನು ಹೊಂದುತ್ತದೆ ಎಂಬುದು ಸರ್ವಥಾ ಹುರುಳುಳ್ಳ ವಿಚಾರ.

ಇತ್ತೀಚಿನ ದಿನಗಳಲ್ಲಿ 'ಓದುವ ಪ್ರವೃತ್ತಿ' ಕಡಿಮೆಯಾಗಿ ಸಾಹಿತ್ಯಿಕ ವಾತಾವರಣವೇ ಕುಂದಿಹೋಗುತ್ತಿದೆ. ಮಕ್ಕಳಿಗೆ ಓದುವ ಹವ್ಯಾಸವನ್ನು ಪ್ರಾಥಮಿಕ ಹಂತದಲ್ಲಿಯೇ ಉತ್ತೇಜಿಸಬೇಕು. ಸ್ಥಿತ ಮಾನಸಿಗರಾಗಿ ಓದಿ, ತಮ್ಮ ಮನೋಭಾವವನ್ನು ಲಿಖಿತಕ್ಕಿಳಿಸುವ ಪ್ರಯತ್ನದಿಂದಲೂ 'ಸಾಹಿತ್ಯಾಭ್ಯಾಸ ಸುಲಭವಾಗುತ್ತದೆ.

ಇತ್ತೀಚೆಗೆ ಟಿ.ವಿ. ಮಾಧ್ಯಮದ ಅಬ್ಬರವೂ ಅಧಿಕವಾಗಿ ಮಕ್ಕಳ ಸೃಜನಶೀಲತೆಯು ಹಾಳಾಗುವುದರೊಂದಿಗೆ ಓದುವಿಕೆಯು ಮರೆಸೇರುತ್ತಿದೆ. ದೊಡ್ಡವರೂ ಕೂಡ ಈ ಮಾಧ್ಯಮದ ತೋಳತೆಕ್ಕೆಯಲ್ಲೇ ಬಂಧಿತರಾಗುವುದನ್ನು ಕಂಡಾಗ ನಿಜಕ್ಕೂ ವಿಷಾದವೆನಿಸುತ್ತದೆ. ಇದರಲ್ಲಿ ನಮ್ಮ ದೌರ್ಬಲ್ಯವೂ ಇದೆ ಎಂಬುದು ಕಟುಸತ್ಯ. ಇನ್ನಾದರೂ ಮುಕ್ತ ಮನಸ್ಸಿನಿಂದ ಚಿಂತನಶೀಲರಾಗಿ ಸಾಹಿತ್ಯದ ಬಗೆಗಿನ ಅಸೀಮ ನಿರ್ಲಕ್ಷ್ಯ ತೋರದೆ ಸಾಹಿತ್ಯಾಭಿಮಾನ ಬೆಳೆಸಿಕೊಳ್ಳುವ ಅಗತ್ಯವಿದೆ ಈ ನಮ್ಮ ನಾಡಿನಲ್ಲಿ.

— ಎಂ. ಎಚ್. ಪ್ರಸಾದ್‌ಕುಮಾರ್, ಮೈಸೂರು.

ದಕ್ಷಿಣ ನೈರುತ್ಯದ ಗೇಟು - ಕಾಲನಾಗನ ಕಾಟು.

ಶೃಂಗೇರಿಯ ಸ್ಥೂಲ ಪರಿಚಯ

ಶೃಂಗೇರಿ ಕನ್ನಡನಾಡಿನ ಸಹ್ಯಾದ್ರಿ ಬೆಟ್ಟದ ತುದಿಯಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿದೆ. ಪೂರ್ವದಲ್ಲಿ ಮಹರ್ಷಿ ವಿಭಾಂಡಕರು ಅವರ ಮಗ ಋಷ್ಯಶೃಂಗ ಋಷಿಯು ಇಲ್ಲಿ ತಪಸ್ಸು ಮಾಡಿದರು. ಸನಾತನ ಧರ್ಮಪ್ರಸಾರಕ್ಕಾಗಿ ಶ್ರೀ ಶಂಕರಾಚಾರ್ಯರು ಮೊದಲು ದಕ್ಷಿಣಾಮ್ನಾಯ ಪೀಠವನ್ನು ಸ್ಥಾಪಿಸಿದರು ಇಲ್ಲಿ.

ಶ್ರೀ ವಿದ್ಯಾರಣ್ಯರು ಕರ್ನಾಟಕ ಸಾಮ್ರಾಜ್ಯ ಸ್ಥಾಪನೆಗಾಗಿ ಸಂಕಲ್ಪ ಮಾಡಿದ ಸ್ಥಳ ಶೃಂಗೇರಿ. ಶೈವ, ವೈಷ್ಣವ, ಶಾಕ್ತ ಮುಂತಾದ ಭಿನ್ನ ಮತಗಳ ಐಕ್ಯತೆಗಾಗಿ ಸನಾತನ ಹಿಂದೂ ಧರ್ಮದ ಉದ್ಧಾರಕ್ಕಾಗಿ ಯೋಗಿಗಳು ತಪಸ್ಸು ಮಾಡಿದದು ಇಲ್ಲಿಯೆ.

ಭಾರತ ದೇಶವು ಋಷಿಗಳ ತಪೋಭೂಮಿ ಆಧ್ಯಾತ್ಮಿಕ ಸಾಧನೆಯ ಕೇಂದ್ರವಾಗಿದ್ದು ಭಕ್ತಿ, ಜ್ಞಾನ, ವೈರಾಗ್ಯಗಳ ಉಗಮ ಸ್ಥಾನವಾಗಿದೆ. ಇಲ್ಲಿಯೆ ಋಷಿಮುನಿಗಳು ವೇದ ಮಂತ್ರಗಳನ್ನು ಮೊತ್ತಮೊದಲಿಗೆ ಹಾಡಿದುದು, ಶಾಸ್ತ್ರಗಳನ್ನು ಸೃಷ್ಟಿಸಿದುದು, ಇತಿಹಾಸಗಳನ್ನು ಬರೆದುದು, ಕಾವ್ಯ ನಾಟಕ ಸಾಹಿತ್ಯಗಳನ್ನು ರಚಿಸಿದುದು ಇಲ್ಲಿಯೆ. ಇಲ್ಲಿ ಎಲ್ಲಾ ವಿದ್ಯೆಯನ್ನು ಕಲಿಸುವ ವಿದ್ವಾಂಸರಿದ್ದರು. ವಿದ್ಯಾರ್ಥಿಗಳು ಯಾವ ಭೇದವೂ ಇಲ್ಲದೆ ಋಷಿಕುಮಾರರಂತೆ ನಾರುಬಟ್ಟೆಯನ್ನುಟ್ಟು, ಗೆಡ್ಡೆಗೆಣಸು, ಹಣ್ಣು ಹಂಪಲುಗಳನ್ನು ತಿಂದು ವಿದ್ಯಾಭ್ಯಾಸ ಮಾಡುತ್ತಿದ್ದರು.

ಕಶ್ಯಪ ಮಹರ್ಷಿಗಳ ಮಗ ವಿಭಂಡಕಮುನಿ. ವಿಭಂಡಕ ಮತ್ತು ದೇವಲೋಕದ ಊರ್ವಶಿಯ ಮಗನೆ ಋಷ್ಯಶೃಂಗ. ಹುಟ್ಟುವಾಗಲೇ ತಲೆಯ ಮೇಲೆ ಚಿಕ್ಕ ಕೊಂಬಿದ್ದುದರಿಂದ ಋಷ್ಯಶೃಂಗ ಎಂದು ಹೆಸರಾಯ್ತು. ಇವರು ಶೃಂಗೇರಿಗೆ ಸಮೀಪ ಇರುವ ಕಿಗ್ಗದಲ್ಲಿರುವ ಈಶ್ವರ ಲಿಂಗದಲ್ಲಿ ಐಕ್ಯರಾದರು. ಆದ್ದರಿಂದ ಋಷ್ಯಶೃಂಗರ ಹೆಸರಿನಲ್ಲಿ ಋಷ್ಯಶೃಂಗಗಿರಿ, ಶೃಂಗಪುರ,ಶೃಂಗಗಿರಿ, ಶೃಂಗೇರಿ ಎಂದಾಯ್ತು.

ಶೃಂಗೇರಿಯು ಮೊದಲು ಹೊಯ್ಸಳ ಸಾಮ್ರಾಜ್ಯಕ್ಕೆ ಸೇರಿತ್ತು. ಮುಸ್ಲಿಂ ದಂಡಿನಿಂದ ಹೊಯ್ಸಳದೇಶ ನಾಶವಾಯ್ತು. ಆ ಸಮಯದಲ್ಲಿ ಶೃಂಗೇರಿ ಮಠದ ಶಾರದ ಪೀಠವನ್ನು ನಾಶಮಾಡಿದರು. ತದನಂತರ ಶೃಂಗೇರಿಯ ಇತಿಹಾಸ ಗುರು ವಿದ್ಯಾತೀರ್ಥರಲ್ಲಿ ಬದಲಾಯಿತು. ಋಷಿಗಳ ಆಶ್ರಮವಾಗಿದ್ದ ಶೃಂಗೇರಿ, ದೇಶವನ್ನು ಕಟ್ಟುವ ಕ್ರಾಂತಿವೀರರ ಮಂತ್ರಾಲೋಚನೆಯ ಸ್ಥಳವಾಯಿತು. ವಿದ್ಯಾತೀರ್ಥರ ಶಿಷ್ಯರಾದ ಭಾರತೀ ತೀರ್ಥರು ಮತ್ತು ವಿದ್ಯಾರಣ್ಯರು ಹೊಸ ಸಾಮ್ರಾಜ್ಯ ಮಾಡಲು ಗುರುಗಳಿಂದ ಆದೇಶ ಪಡೆದಿದ್ದರು. ಹಂಪೆಯಲ್ಲಿದ್ದ ಹಕ್ಕ ಬುಕ್ಕರು ಆಗಾಗ ಬಂದು ಗುರುಗಳ ಸಲಹೆ ಪಡೆಯುತ್ತಿದ್ದರು. ಆಗಿನ ಪಾಳೆಯಗಾರರು ರಾಜರು ಗುರುಗಳ ಆದೇಶದಂತೆ ನಡೆಯುತ್ತಿದ್ದರು. ಅನೇಕರು, ಗುರುಗಳಿಗೆ ತಮ್ಮ ಐಶ್ವರ್ಯವನ್ನು ಗುರುಕಾಣಿಕೆಯಾಗಿ ಒಪ್ಪಿಸಿದರು. ಗುರುಗಳು ಇದನ್ನು ರಾಷ್ಟ್ರ ನಿರ್ಮಾಣಕ್ಕಾಗಿ ಹಕ್ಕಬುಕ್ಕರಿಗೆ ಕೊಟ್ಟರು. ಹೀಗೆ ಶೃಂಗೇರಿಯ ಗುರುಗಳು ವಿಜಯ ನಗರ ಸ್ಥಾಪನೆಗೆ ಕಾರಣರಾದರು.

ವಿಜಯನಗರ ಚಕ್ರವರ್ತಿಗಳು ಶೃಂಗೇರಿಯ ಗುರುಗಳಿಗೆ ಹರಿಹರ ಬುಕ್ಕರಾಯ ಇಮ್ಮಡಿ ಹರಿಹರ ಇವರು ಹೇರಳ ದಾನ ಕೊಟ್ಟರು. ಹೀಗೆ ಶೃಂಗೇರಿಯು ವಿಜಯನಗರದ ಪ್ರಗತಿಯನ್ನು ಹೊಂದಿತು.

ಶೃಂಗೇರಿಯಲ್ಲಿಯೇ ಇದ್ದ ಭಾರತಿ ತೀರ್ಥಸ್ವಾಮಿಗಳು ಅನೇಕ ಜನ ಪಂಡಿತರನ್ನು ಕರೆಸಿ ಉಪಯುಕ್ತವಾದ ಗ್ರಂಥಗಳನ್ನು ಬರೆಸಿದರು. ವೇದಾಂತ ಶಾಸ್ತ್ರಗಳಲ್ಲದೆ ಅರ್ಥಶಾಸ್ತ್ರ, ಧರ್ಮಶಾಸ್ತ್ರ, ಆಯುರ್ವೇದ, ಸಂಗೀತ, ಸಾಹಿತ್ಯ, ಮುಂತಾದ ಅನೇಕ ಗ್ರಂಥಗಳನ್ನು ಬರೆಸಿದರು. ಶಾರದಾ ದೇವಾಲಯದ ಮುಂಭಾಗದಲ್ಲಿ ನೂರಾರು ಜನ ಪಂಡಿತರು ಚರ್ಚಿಸುತ್ತಿದ್ದರು. ಗ್ರಂಥಗಳನ್ನು ರಚಿಸುತ್ತಿದ್ದರು. ವಿದ್ಯಾರಣ್ಯರು ಸರ್ವಮತೀಯರಲ್ಲಿ ಸೌಹಾರ್ದವೇರ್ಪಡಲು ಸಹಾಯಮಾಡಿದರು. ಆಕಾಲದಲ್ಲಿ ಶೈವರೂ ವೈಷ್ಣವರೂ ನಾಮೇಲು ತಾಮೆಲೆಂದು ಕಾದಾಡುತಿದ್ದರು. ಎಲ್ಲಾ ಮತಗಳ ಗುರಿ ಒಂದೆ. ಮಾರ್ಗಬೇರೆ ಎಂದು ಎಲ್ಲ ಮತೀಯರನ್ನು ಒಂದೇ ರೀತಿಯಲ್ಲಿ ಕಾಣುವಂತೆ ವಿಜಯನಗರದ ದೊರೆಗಳಿಗೆ ಭೋದಿಸಿದರು. ಹೀಗೆ ವಿಜಯನಗರದ ರಾಜ ಮುದ್ರೆಯಲ್ಲಿ ವೈಷ್ಣವರ ವರಾಹ ಮತ್ತು ರಾಜನ ಆಜ್ಞೆಗಳು ಶೈವರ ವಿರೂಪಾಕ್ಷ ಎಂಬ ಅಂಕಿತದಿಂದ ಹೊರಡುತಿತ್ತು. ಗುರುಗಳು ಶೈವರಿಗೆ ಶೈವಧರ್ಮವನ್ನೂ; ವೈಷ್ಣವರಿಗೆ ವೈಷ್ಣವ ಧರ್ಮವನ್ನೂ ಭೋದಿಸುತ್ತಿದ್ದುದರಿಂದ ಜಗದ್ಗುರು ಎಂಬ ಬಿರುದನ್ನು ಪಡೆದಿದ್ದರು. ವಿದ್ಯಾರಣ್ಯರು ವಿಜಯನಗರ ಸಾಮ್ರಾಜ್ಯ ಸ್ಥಾಪಕರಾದುದರಿಂದ ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ ಎಂದು ಗೌರವ ಪೂರ್ವಕವಾಗಿ ಕರೆಯಲ್ಪಟ್ಟರು. ಅಂದಿನಿಂದ ಗುರು ಪರಂಪರೆ ಇಂದಿನ ತನಕ ಮುಂದುವರಿದಿದೆ.

ಶೃಂಗೇರಿಯು ಮಹಾತ್ಮರ ತವರೂರು. ಯೋಗಿಗಳ ನೆಲೆ ಬೀಡು. ಋಷಿಗಳ ತಪೋಧಾಮ. ಶಂಕರರಿಂದ ಸ್ಥಾಪಿಸಲ್ಪಟ್ಟು, ಶಾರದಾ ಪೀಠದಲ್ಲಿ ಅನೇಕ ಜನ ಮಹಾಪುರುಷರು ತಪಸ್ವಿಗಳು ಬೆಳಗಿದರು. ಇಲ್ಲಿನ ಗುರುಗಳು ಮಹಾ ಜ್ಞಾನಿಗಳೂ ವಿನಯ ಸೌಜನ್ಯದಿಂದ ಮಹರ್ಷಿಗಳಂತಿದ್ದರು.

ಭರತ ಖಂಡದ ಯಾವುದೇ ಭಾಗದಲ್ಲಿರಲಿ, ಯಾವ ವೃತ್ತಿಯನ್ನೇ ಮಾಡಲಿ, ಯಾವ ಭಾಷೆಯನ್ನೇ ಆಡಲಿ, ನಾವೆಲ್ಲರು ಬಾರತೀಯರು ಭಾರತೀಯ ಸಂಸ್ಕೃತಿಗೆ ಸೇರಿದವರೆಂದು ಸನಾತನ ಧರ್ಮದಲ್ಲಿ ಶ್ರದ್ಧೆಯನ್ನು ಮೂಡಿಸಿದರು.

ಶೃಂಗೇರಿಯ ಗುರುಗಳಲ್ಲಿ ಭಕ್ತಿ ಇಟ್ಟಿದ್ದ ಟಿಪ್ಪುವು "ನಾನು ದೇವರದಯ, ಗುರುವಿನ ಆಶೀರ್ವಾದ ಮತ್ತು ನನ್ನ ಬಾಹುಬಲವನ್ನು ನಂಬಿದ್ದೇನೆ ಎಂದು ಬರೆದಿದ್ದನು. ಅವನು ಪ್ರತಿಸಲ ಬ್ರಿಟಿಷರ ಮೇಲೆ ಯುದ್ದಮಾಡುವಾಗ ಗುರುಗಳ

ಪಶ್ಚಿಮ ನೈರುತ್ಯದಲ್ಲಿ ಗೇಟಿರಿಸಿದರೆ - ಅಕಾಲ ಮರಣವನ್ನು ಆಹ್ವಾನಿಸಿದಂತೆ.

ಆಶೀರ್ವಾದ ಬೇಡಿ ನಂತರ ಯುದ್ಧಕ್ಕೆ ಹೊರಡುತ್ತಿದ್ದನು. ಟಿಪ್ಪುವಿನ ನಂತರ ಮೈಸೂರು ಒಡೆಯರು ಭಕ್ತಿ ಭಾವದಿಂದ ನಡೆದು ಕೊಂಡರು.

ವಿಜಯನಗರ ಕಾಲದಲ್ಲಿ ಸ್ವತಂತ್ರವಾಗಿ ರೂಪುಗೊಂಡ ಶೃಂಗೇರಿ ಸಂಸ್ಥಾನವು ಇಕ್ಕೇರಿ ನಾಯಕರ ಕಾಲದಲ್ಲಿಯೂ ಮೈಸೂರು ಒಡೆಯರ ಕಾಲದಲ್ಲಿಯೂ ಹಾಗೆಯೇ ಬೆಳೆದು ಬಂತು. ಇತ್ತೀಚಿನ ಪ್ರಜಾಪ್ರಭುತ್ವ ದೇಶದಲ್ಲಿ ಶೃಂಗೇರಿಗೆ ಸೇರಿದ್ದ ಜಹಗೀರನ್ನು ಮೈಸೂರು, ಕರ್ನಾಟಕ ಸರ್ಕಾರ ವಶಪಡಿಸಿಕೊಂಡಿತು.

ಯಾಗ ಕುಂಡದಲ್ಲಿ ಯಾವಾಗಲೂ ಉರಿಯುತ್ತಿರುವ ಅಗ್ನಿಯೇ ವೇದಪುರುಷ, ಆತನ ಪೂರ್ವದಿಕ್ಕಿನಲ್ಲಿ ಋಗ್ವೇದ, ದಕ್ಷಿಣ ದಿಕ್ಕಿನಲ್ಲಿ ಯಜುರ್ವೇದ, ಪಶ್ಚಿಮ ದಿಕ್ಕಿನಲ್ಲಿ ಸಾಮವೇದ, ಉತ್ತರದಿಕ್ಕಿನಲ್ಲಿ ಅಥರ್ವಣ ವೇದವೂ ಇರುತ್ತದೆ. ಶಂಕರಾಚಾಯರು ಸನಾತನ ಹಿಂದೂ ಧರ್ಮವನ್ನು ಕಾಪಾಡಲು ಹೀಗೆ ಮಠಗಳನ್ನು ಸ್ಥಾಪಿಸಿದರು. ಪೂರ್ವದಲ್ಲಿ ಪುರೀಪೀಠ. ಅಲ್ಲಿ ಋಗ್ವೇದದ ಅಧ್ಯಯನ ದಕ್ಷಿಣದಲ್ಲಿ ಶೃಂಗೇರಿ ಪೀಠ. ಅಲ್ಲಿ ಯಜುರ್ವೇದ ಅಧ್ಯಯನ. ಪಶ್ಚಿಮದಲ್ಲಿ ದ್ವಾರಕಾ ಪೀಠ, ಸಾಮವೇದ, ಉತ್ತರದ ಬದರಿಪೀಠದಲ್ಲಿ ಅಥರ್ವಣವೇದವೂ ಪ್ರಧಾನವಾಗಿದೆ

(ಪೀಠ)-ಮಠ

ಯಜ್ಞಕುಂಡದಲ್ಲಿ ಅಗ್ನಿಯಂತೆ ಪ್ರಜ್ವಲಿಸುವುದೇ ಸನಾತನ ವೈದಿಕ ಧರ್ಮ. ಅದನ್ನು ಪೋಷಣೆ ಮಾಡುವುದೇ ಈ ಚತುರಾಮ್ನಾಯ ಮಠಗಳ ಕೆಲಸ.

ಹೀಗೆ ಶಂಕರಾಚಾರ್ಯರು ಮೊದಲು ಸ್ಥಾಪಿಸಿದುದು ಶೃಂಗೇರಿಯ ಶಾರದಾ-ಪೀಠ(ಮಠ). ಅಲ್ಲಿ ತುಂಗಾ ತೀರದಲ್ಲಿ ಕಲ್ಲು ಬಂಡೆಯ ಮೇಲೆ ಶ್ರೀ ಚಕ್ರವನ್ನು ಬರೆದು ಪೂಜಿಸಿದರು. ನಂತರ ಶಾರದಾ ದೇವಿಯನ್ನು ಪ್ರತಿಷ್ಠೆ ಮಾಡಿದರು. ಪೀಠದ ರಕ್ಷಣೆಗಾಗಿ ಪೂರ್ವದಲ್ಲಿ ಕಾಲಭೈರವ, ದಕ್ಷಿಣದಲ್ಲಿ ದುರ್ಗೆ, ಪಶ್ಚಿಮದಲ್ಲಿ ಆಂಜನೇಯ ಉತ್ತರದಲ್ಲಿ ಮಹಾಕಾಳಿಯನ್ನು ಪ್ರತಿಷ್ಠಾಪಿಸಿ, ಪೂಜಾ ವ್ಯವಸ್ಥೆಯನ್ನು ಮಾಡಿದರು.

ವಿಜಯ ನಗರದ ಪ್ರಭುಗಳು ಶೃಂಗೇರಿಯ ಗುರುಗಳಲ್ಲಿ ಬಹಳ ಭಕ್ತಿ ಗೌರವಗಳನ್ನು ಹೊಂದಿದ್ದರು. ಶೃಂಗೇರಿಯ ಪ್ರಗತಿಯು ವಿಜಯನಗರದ ಪ್ರಗತಿಗೆ ಹೊಂದಿಕೊಂಡಂತೆ ಮಠ ದೇವಾಲಯಗಳು ಹೆಚ್ಚಾಗಿ ವಿದ್ಯಾಪ್ರಸಾರ ಮತ್ತು ಜ್ಞಾನ ಕೇಂದ್ರವಾಯಿತು. ಹೀಗಾಗಿ ಅದೊಂದು ಪುಟ್ಟರಾಜ್ಯವಾಗಿ ಬೆಳೆದು " ಶೃಂಗೇರಿ ಮೂರುಸಾವಿರ ಸೀಮೆ" ಎಂದು ಹೆಸರು ಬಂದಿತು.

ತಾಳಿಕೋಟೆಯ ಯುದ್ಧದ ನಂತರ ಅತ್ಯಂತ ವೈಭವಪೂರ್ಣ ವಾಗಿದ್ದ ವಿಜಯನಗರ ಸಾಮ್ರಾಜ್ಯ ಅಸ್ತವಾಯಿತು. ಇದರಿಂದ ಶೃಂಗೇರಿಗೆ ಅನೇಕ ತೊಂದರೆಗಳು ಬಂದುವು. ಆ ಸಮಯದಲ್ಲಿ ಇಕ್ಕೇರಿಯ ವೆಂಕಟಪ್ಪ ನಾಯಕನು ಶೃಂಗೇರಿಯ ನೆರವಿಗೆ ಬಂದನು. ನಂತರ ಕಳಸದ ಭೈರವನು ಪದೇ ಪದೇ ಮಠ ಮಂದಿರಗಳನ್ನು ನಾಶಮಾಡಿದನು. ಆ ಕಾಲದಲ್ಲಿ ಶ್ರೀ ಸಚ್ಚಿದಾನಂದ ಎಂಬ ಗುರುಗಳು ಆಕ್ರಮಣ ಕಾಲದಲ್ಲಿ ಊರಿನ ಜನಕೆಲ್ಲಾ ಮಠದಲ್ಲಿಯೇ ಆಶ್ರಯವನ್ನು ಕೊಟ್ಟು, ನಗರ ರಕ್ಷಣೆಗಾಗಿ ಸೂಕ್ತ ಏರ್ಪಾಡು ಮಾಡಿದ್ದರು. ಕಳಸದ ಭೈರವನನ್ನು ಇಕ್ಕೇರಿಯ ನಾಯಕರು ಸೋಲಿಸಿದ ನಂತರ ಮೈಸೂರಿನ ಹೈದರಾಲಿಯ ಸೈನ್ಯ ತನ್ನದಾಗಿಸಿಕೊಂಡಿತು. ನಂತರ ಹೈದರಾಲಿಗೂ ಮರಾಠರಿಗೂ ಯುದ್ಧವಾಯಿತು. ಹೀಗೆ ಶೃಂಗೇರಿಯನ್ನು ಮುತ್ತಿದ್ದ ಮರಾಠ ಪರಶುರಾಮ ಬಾವು ಎಂಬುವನು ಮಠಗಳನ್ನು ಕೊಳ್ಳೆ ಹೊಡೆದು ಅಪಾರ ಐಶ್ವರ್ಯವನ್ನು ಅಪಹರಿಸಿದನು. ಬ್ರಾಹ್ಮಣರನ್ನು ಕೊಂದು ದೇವತಾ ಮೂರ್ತಿಗಳನ್ನು ಭಿನ್ನಗೊಳಿಸಿದನು. ಈ ವಿಚಾರವನ್ನು ಕೇಳಿದ ಟಿಪ್ಪುವು ದೇವಸ್ಥಾನದ ಪುನ ನಿರ್ಮಾಣ, ಕುಂಭಾಭಿಷೇಕಕ್ಕೂ ತಗಲುವ ಹಣವನ್ನು ಪದಾರ್ಥಗಳನ್ನು ಶೃಂಗೇರಿಗೆ ಕಳುಹಿಸಿದನು.

ಶೃಂಗೇರಿಯ ಈಗಿನ ಗುರುಗಳಾದ ಶ್ರೀ ಭಾರತಿ ತೀರ್ಥ ಸ್ವಾಮಿಗಳು ಸಕಲ ಶಾಸ್ತ್ರ ಪಾರಂಗತರೂ, ಸಂಸ್ಕೃತ, ಕನ್ನಡ ತೆಲುಗು, ತಮಿಳು, ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಅದ್ವಿತೀಯ ಪಾಂಡಿತ್ಯವುಳ್ಳವುರು ಕೃಪಾಶೀಲರೂ ಆಗಿದ್ದು ಸಮಸ್ತ ಭಕ್ತರಿಗೆ ಆರಾಧ್ಯರೂ ಮಾರ್ಗದರ್ಶಕರು ಆಗಿದ್ದರೆ, ದಕ್ಷಿಣಾಮ್ನಾಯ ಪೀಠದ ದಿವ್ಯ ಜ್ಯೋತಿಯಾಗಿದ್ದಾರೆ. ಮಂದಸ್ಮಿತರಾಗಿ ಎಲ್ಲರನ್ನು ಹರಸುವ ಗುರುಗಳ ಸಾನ್ನಿಧ್ಯ ಪರಮಪುಣ್ಯವಾಗಿರುತ್ತದೆ ಶೃಂಗೇರಿಯು ಪ್ರತಿಯೊಬ್ಬ ಭಾರತೀಯನಿಗೂ ಪವಿತ್ರವಾದ ಸ್ಥಳ ಅದರಲ್ಲೂ ನಮ್ಮ ಗೌಡಜನರಂತೂ ಜನ್ಮದಲ್ಲಿ ಒಮ್ಮೆ ನೋಡಲೇ ಬೇಕಾದ ಸ್ಥಳ. ಯಾಕೆಂದರೆ ಇವರು ಮದುವೆಯಲ್ಲಿ ಕಟ್ಟುವ ಹರಿಕೆ ಹಣ ಶೃಂಗೇರಿಗೆ ತಲುಪಲೇ ಬೇಕಲ್ಲವೆ? ಅಲ್ಲದಿದ್ದರೆ ಗೌಡನಾದವನ ಉದ್ಧಾರ ಹೇಗಾದೀತು? ಎಂಬುದನ್ನು ಮತ್ತೊಮ್ಮೆ ನೆನೆಸ ಬೇಕಾದುದು ಪ್ರತಿಯೊಬ್ಬನ ಹೊಣೆಯೂ, ಕರ್ತವ್ಯವೂ ಹೌದು.

— ಬೈತಡ್ಕ ಜಾನಕಿ ಬೆಳ್ಯಪ್ಪ, ಮಡಿಕೇರಿ.

ಕೈಮಗ್ಗ ನಿಗಮಕ್ಕೆ ಎಸ್. ಜಿ. ಮೇದಪ್ಪ ನೇಮಕ



ಸೋಮವಾರಪೇಟೆ, ಇಲ್ಲಿಗೆ ಸಮೀಪದ ಶಾಂತಳ್ಳಿಯ ಎಸ್.ಜಿ. ಮೇದಪ್ಪ ಅವರನ್ನು ಭಾರತ ಕೈಮಗ್ಗ ನಿಗಮದ ಸದಸ್ಯರನ್ನಾಗಿ ಕೇಂದ್ರ ಸರ್ಕಾರವು ನಾಮಕರಣ ಮಾಡಿದೆ. ಮೇದಪ್ಪ ಅವರು ಈ ಹಿಂದೆ ಎರಡು ಬಾರಿ ಜಿ. ಪಂ. ಗೆ ಸದಸ್ಯರಾಗಿ ಆಯ್ಕೆಯಾಗಿದ್ದರು. ಕೈಗಾರಿಕಾ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದ ಅವರು, ಬಿಜೆಪಿಯ ಜಿಲ್ಲಾ ಕಾರ್ಯದರ್ಶಿಯಾಗಿದ್ದಾರೆ.

— ಸಂಗಾತಿ

ದೈವ ಪ್ರಜ್ಞೆ

— ಅಮೆ ಸೋಮಣ್ಣ, ಬೆಂಗಳೂರು.

ಮಾನವ ಸಮಾಜದ ಸದ್ಯದ ಅಗತ್ಯವನ್ನು ನಾವು ಅರಿತುಕೊಳ್ಳಬೇಕು. ಆ ಅಗತ್ಯ ಯಾವುದು? ಮಾನವ ಸಮಾಜ ಈಗ ನಿರ್ದಿಷ್ಟ ರಾಷ್ಟ್ರಗಳ ಅಥವಾ ಸಮುದಾಯಗಳ ಭೌಗೋಳಿಕ ಮಿತಿಗಳಿಗೆ ಒಳಪಟ್ಟಿದ್ದಾಗಿಲ್ಲ. ಅದರ ಸ್ವರೂಪ ಮಧ್ಯಯುಗದಲ್ಲಿದ್ದುದಕ್ಕಿಂತ ಈಗ ಹೆಚ್ಚು ವಿಶಾಲವಾಗಿದೆ. ಜಗತ್ತಿನ ಪ್ರವೃತ್ತಿಯು ಈಗ ಒಂದು ಜನಾಂಗವಾಗಿ ಅಥವಾ ಮಾನವ ಸಮಾಜವಾಗಿ ರೂಪುಗೊಳ್ಳುವ ಕಡೆಗಿದೆ.

ಮಾನವ ಸಮಾಜವು ಸಧ್ಯಕ್ಕೆ ವಿಸ್ಮೃತಿಯ ಅಂಧಕಾರದಲ್ಲಿ ಇಲ್ಲ. ಲೌಕಿಕ ಸೌಲಭ್ಯ, ವಿದ್ಯಾಭ್ಯಾಸ, ಆರ್ಥಿಕ ಅಭಿವೃದ್ಧಿ ಮೊದಲಾದ ಕ್ಷೇತ್ರಗಳಲ್ಲಿ ಅದು ಇಡೀ ಜಗತ್ತಿನಾದ್ಯಂತ ಶೀಘ್ರಪ್ರಗತಿಯನ್ನು ಸಾಧಿಸಿದೆ. ಆದರೆ ಅದರ ಸಾಮಾಜಿಕ ಶರೀರದಲ್ಲಿ ಎಲ್ಲೋ ಒಂದು ಕಡೆ ಸೂಜಿಯಿರಿತದಂತಹ ನೋವುಯಿದ್ದೇಯಿದೆ. ಅದರ ಫಲವಾಗಿ ಕ್ಷುದ್ರ ಸಂಗತಿಗಳ ಸಂಬಂಧದಲ್ಲಿಯೂ ದೊಡ್ಡ ದೊಡ್ಡ ಕಲಹಗಳು ಘಟಿಸುತ್ತಿವೆ. ಶಾಂತಿ, ಸ್ನೇಹ ಮತ್ತು ಅಭಿವೃದ್ಧಿಗಳಲ್ಲಿ ಇಡೀ ಮಾನವ ಸಮಾಜ ಹೇಗೆ ಒಂದಾಗಿ ಬಾಳಬಹುದೆಂಬ ಬಗ್ಗೆ ಸೂಚನೆಯೊಂದರ ಅಗತ್ಯವಿದೆ. ಶ್ರೀಮದ್ಭಾಗವತವು ಮಾನವ ಸಮಾಜದ ಈ ಅಗತ್ಯವನ್ನು ಪೂರೈಸಬಲ್ಲದು.

ಮಾನವ ಸಮಾಜದಲ್ಲಿನ ಏರು ಪೇರಿಗೆ ದೈವರಹಿತ ಸಮಾಜದ ತತ್ವಹೀನ ನಾಗರೀಕತೆಯೇ ಕಾರಣವಾಗಿದೆ. ಭಗವಂತ ಅಥವಾ ಸರ್ವಶಕ್ತ ಇದ್ದಾನೆ. ಎಲ್ಲವೂ ಅವನಿಂದಲೇ ಹೊಮ್ಮುತ್ತಿವೆ. ಅವನಿಂದಲೇ ಪೋಷಿತವಾಗುತ್ತವೆ, ಅವನಲ್ಲೇ ಸೇರಿ ಹೋಗುತ್ತವೆ. ಆದರೆ ಅದು ಅಸಮರ್ಪಕವಾಗಿದೆ. ಅಸ್ತಿತ್ವದಲ್ಲಿರುವ ಎಲ್ಲದಕ್ಕೂ ಒಂದು ಅಂತಿಮ ಮೂಲ ಇದ್ದೇ ಇದೆ ಎನ್ನುವುದು ಸತ್ಯವಾದ ಸಂಗತಿ. ಸುಂದರ ಕೃತಿಯಾದ ಭಾಗವತದಲ್ಲಿ ಈ ಅಂತಿಮ ಮೂಲ ಯಾವುದೆನ್ನುವುದನ್ನು ವಿವೇಚನೆಯುತವಾಗಿ ಮತ್ತು ಅಧಿಕೃತವಾಗಿ ವಿವರಿಸಲಾಗಿದೆ. ಇದು ಒಂದು ಅಲೌಕಿಕ ವಿಜ್ಞಾನ. ಅದು ಇರುವುದು ಅಂತಿಮ ಮೂಲ ಯಾವುದೆಂದು ತಿಳಿಯುವುದಕ್ಕಾಗಿ ಮಾತ್ರವಲ್ಲ. ಭಗವಂತನೊಡನೆ ನಮ್ಮ ಸಂಬಂಧ ಎಂಥದು ಎಂದು ಅರಿಯುವುದಕ್ಕಾಗಿ ಮತ್ತು ಆ ಸಂಬಂಧದ ಸಮರ್ಪಕ ಅರಿವಿನ ಆಧಾರದ ಮೇಲೆ ಮಾನವ ಸಮಾಜವನ್ನು ಪೂರ್ಣತೆಯತ್ತ ಕೊಂಡೊಯ್ಯಲು ನಾವು ಮಾಡಬೇಕಾದ ಕರ್ತವ್ಯ ಏನೆಂದು ತಿಳಿಯುವುದಕ್ಕಾಗಿ.

ಈ ಕೃತಿಯನ್ನು ಕೇವಲ ಲಕ್ಷ್ಯ ಕೊಟ್ಟು ಓದುವಷ್ಟರಿಂದಲೇ ಯಾರೇ ಆಗಲಿ ಭಗವಂತನನ್ನು ಚೆನ್ನಾಗಿ ತಿಳಿಯುತ್ತಾನೆ ಹಾಗೂ ತನ್ನನ್ನು ನಾಸ್ತಿಕರ ದಾಳಿಯಿಂದ ರಕ್ಷಿಸಿಕೊಳ್ಳಬಲ್ಲವನಾಗುತ್ತಾನೆ. ತಪ್ಪು ಮಾರ್ಗದಲ್ಲಿ ಸಾಗಿರುವ ನಾಗರೀಕತೆಯ ಅಧಾರ್ಮಿಕ ಜೀವನದಲ್ಲಿ ಒಂದು ಕ್ರಾಂತಿಯನ್ನುಂಟುಮಾಡಲು ಆ ಕೃತಿ ಉದ್ದೇಶಿತವಾಗಿದೆ.

ಸಾಮಾನ್ಯವಾಗಿ ಜನರು, ಅದರಲ್ಲಿಯೂ ಈ ಕಲಿಯುಗದಲ್ಲಿ ದೇವರ ಬಹಿರಂಗ ಶಕ್ತಿಯಲ್ಲಿ ಮೋಹಗೊಳ್ಳುತ್ತಾರೆ. ಐಹಿಕ ಸೌಕರ್ಯಗಳನ್ನು ಹೆಚ್ಚಿಸಿದರೆ ಪ್ರತಿಯೊಬ್ಬ ಮನುಷ್ಯನೂ ಸುಖವಾಗಿರುತ್ತಾನೆ ಎಂದು ಅವರು ಭಾವಿಸುತ್ತಾರೆ. ಪ್ರತಿಯೊಬ್ಬನೂ ಐಹಿಕ ಪ್ರಕೃತಿಯ ಕಠಿಣ ನಿಯಮಗಳಿಂದ ಬಂಧಿತವಾಗಿದ್ದಾನೆ, ಅದು ತುಂಬ ಬಲಶಾಲಿಯಾದದ್ದು ಎಂದು ಅವರಿಗೆ ತಿಳಿಯದು. ಜೀವಿಯು ಪ್ರಭುವಿನ ವಿಭಿನ್ನಾಂಶವಾಗಿ ಸುಖವಾಗಿರುತ್ತಾನೆ ಮತ್ತು ಸಹಜವಾಗಿ ಅವನ ಕೆಲಸವೆಂದರೆ ಪ್ರಭುವಿಗೆ ಕೂಡಲೇ ಸೇವೆ ಸಲ್ಲಿಸುವುದು. ಆದರೆ ಮಾಯೆಯ ಸಂಮೋಹನದಿಂದ ಮನುಷ್ಯನು ತನ್ನ ವೈಯಕ್ತಿಕ ಇಂದ್ರಿಯ ತೃಪ್ತಿಯನ್ನು ವಿವಿಧ ರೀತಿಗಳಲ್ಲಿ ಪೂರೈಸಿಕೊಂಡು ಸುಖವಾಗಿರಲು ಪ್ರಯತ್ನಿಸುತ್ತಾನೆ, ಇದರಿಂದ ಅವನು ಎಂದೂ ಸುಖವಾಗಿರಲಾರ. ತನ್ನ ವೈಯಕ್ತಿಕ ಐಹಿಕ ಇಂದ್ರಿಯಗಳನ್ನು ತೃಪ್ತಿ ಪಡಿಸಲು ಪ್ರಯತ್ನಿಸುವುದರ ಬದಲಾಗಿ ಅವನು ಪ್ರಭುವಿನ ಇಂದ್ರಿಯಗಳನ್ನು ತೃಪ್ತಿ ಪಡಿಸಬೇಕು. ಇದೇ ಬದುಕಿನ ಅತ್ಯುನ್ನತ ಪರಿಪೂರ್ಣತೆ. ಪ್ರಭುವು ಇದನ್ನು ಬಯಸುತ್ತಾನೆ ಮತ್ತು ಹೇಗೆ ಮಾಡಬೇಕೆಂದು ಒತ್ತಾಯಿಸಿ ಹೇಳುತ್ತಾನೆ.

ದೇವರ ಮಹಿಮೆಯೇನು ಎನ್ನುವುದು ಪ್ರತಿಯೊಬ್ಬರಿಗೂ ತಿಳಿದಿರಬೇಕು. ಜೀವಿಗಳ ನಿಜವಾದ ಸ್ಥಾನವೇನು ಎನ್ನುವುದನ್ನು ಪ್ರತಿಯೊಬ್ಬರು ತಿಳಿದಿರಬೇಕು. ಈ ಜ್ಞಾನವು ಬಹುಶ್ರೇಷ್ಠ ವಿಜ್ಞಾನ, ಪ್ರತಿಯೊಬ್ಬ ಜೀವಿಯೂ ತನ್ನ ಹಿತಕ್ಕಾಗಿಯೇ ಇದನ್ನು ಕೇಳಬೇಕು. ಇದನ್ನು ಭಗವದ್ಗೀತೆಯಲ್ಲಿ ಸಂಪೂರ್ಣವಾಗಿ ವಿವರಿಸಿದೆ.

— ಅಮೆ ಸೋಮಣ್ಣ, ಬೆಂಗಳೂರು

15-35ವರ್ಷದೊಳಗಿರುವ ಆಸಕ್ತರಿಂದ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

2000-01ನೇ ಸಾಲಿನಲ್ಲಿ ಉತ್ತಮ ಕಾರ್ಯನಿರ್ವಹಿಸಿದ ಯುವಕ, ಯುವತಿಯರು ಹಾಗೂ ನೋಂದಾಯಿತ ಸಂಘ ಸಂಸ್ಥೆಗಳು ಮತ್ತು ಮಂಡಳಿಗೆ ಸರಕಾರ ನೀಡುವ ರಾಜ್ಯ ಹಾಗೂ ರಾಷ್ಟ್ರಮಟ್ಟದ ಪ್ರಶಸ್ತಿಗಳಿಗೆ ಅರ್ಜಿಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು 15ರಿಂದ 35ವರ್ಷದೊಳಗಿನವರಾಗಿರಬೇಕು. ಆಸಕ್ತರು ಜಿಲ್ಲಾ ಯುವಜನಸೇವಾ ಮತ್ತು ಕ್ರೀಡಾ ಇಲಾಖೆಯನ್ನು ಸಂಪರ್ಕಿಸಬಹುದಾಗಿದೆ.

— ಸಂಗಾತಿ.

ಅನೇಕ ಜನರನ್ನು ಕೊಂದ ಭಯೋತ್ಪಾದಕ ಪೆರೋಲ್ ಮೇಲೆ ಬಿಡುಗಡೆಯಾಗುವುದು ಸಾಧ್ಯವಾದರೆ ಪೋಲಿಸ್‌ರನ್ನು ಬಿಡುಗಡೆ ಮಾಡಲು ಏಕೆ ಸಾಧ್ಯವಿಲ್ಲ

— ಕೆ. ಪಿ. ಎಸ್. ಗಿಲ್, ಮಾಜಿ ಪೋಲಿಸ್ ದಂಡಾಧಿಕಾರಿ

ಪಶ್ಚಿಮ ವಾಯುವ್ಯದ ಗೇಟು - ಹಲ ಶುಭಗಳಿಗೆ ಸೀಟು.

15 ವರ್ಷದ ಮಕ್ಕಳಿಂದ ರಾಷ್ಟ್ರಪ್ರಶಸ್ತಿಗೆ ಅರ್ಜಿ ಆಹ್ವಾನ

ಶಿಕ್ಷಣ, ಕಲೆ, ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಕ್ರೀಡಾ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಅಸಾಧಾರಣ ಸಾಮರ್ಥ್ಯವುಳ್ಳ ಮಕ್ಕಳಿಗೆ ರಾಷ್ಟ್ರಪ್ರಶಸ್ತಿ ನೀಡವ ಯೋಜನೆಯೊಂದನ್ನು ಕೇಂದ್ರ ಸರ್ಕಾರವು ಜಾರಿಗೆ ತಂದಿದೆ.

ಮೇಲ್ಕಂಡ ಯಾವುದೇ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆಯನ್ನು ಮಾಡಿರುವ 4 ರಿಂದ 15 ವರ್ಷದ ಮಕ್ಕಳನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗುವುದು. ಪ್ರತಿ ವರ್ಷ ಒಂದು ಚಿನ್ನದ ಪದಕ ಮತ್ತು ರೂ. 10 ಸಾವಿರ ನಗದು ಬಹುಮಾನ ಹಾಗೂ 32 ಬೆಳ್ಳಿ ಪದಕ, ಪ್ರತಿ ಪದಕಕ್ಕೆ ರೂ. 5 ಸಾವಿರ ನಗದು ಬಹುಮಾನ (ಪ್ರತಿ ರಾಜ್ಯಕ್ಕೆ ಒಂದು ಬೆಳ್ಳಿ ಪದಕ) ಮತ್ತು ಪ್ರಶಸ್ತಿ ಪತ್ರ ಕೊಡುವುದಾಗಿ ಸರ್ಕಾರವು ತಿಳಿಸಿದೆ.

ಈ ಪ್ರಶಸ್ತಿಗೆ ಆಯ್ಕೆಯಾಗುವಂತಹವರು ಅಪ್ರತಿಮ ಪ್ರತಿಭೆಯುಳ್ಳವರಾಗಿದ್ದು, ಶಿಕ್ಷಣ, ಕಲೆ, ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಕ್ರೀಡೆ ಈ ಯಾವುದೇ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆಯನ್ನು ಮಾಡಿರಬೇಕು. ಈ ಮಕ್ಕಳು ಅಸಾಧಾರಣವೆಂದು ಗುರುತಿಸಲು ಅವರು ಸಾಧಿಸಿದ ಪ್ರತಿಭೆಯ ಬಗ್ಗೆ ವೃತ್ತ ಪತ್ರಿಕೆಗಳಲ್ಲಿ ವರದಿಯಾಗಿರಬೇಕು ಅಥವಾ ಸಂಬಂಧಪಟ್ಟ ಕ್ಷೇತ್ರದ ತಜ್ಞರಿಂದ ಪರೀಕ್ಷಿರಿಸಬೇಕು. ಮಕ್ಕಳ ವಯಸ್ಸಿನ ಪ್ರಮಾಣ ಪತ್ರವನ್ನು ಗಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸಬೇಕು.

ರಾಜ್ಯ ಸರ್ಕಾರದಿಂದ ರಚಿಸಲ್ಪಟ್ಟಿರುವ ಸಮಿತಿಯು ಉತ್ತಮ ಸಾಧನೆಯನ್ನು ಮಾಡಿರುವಂತಹ ಮಕ್ಕಳ ಹೆಸರನ್ನು ಆಯ್ಕೆ ಮಾಡಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು. ಆಯ್ಕೆಯಾದ ಮಕ್ಕಳಿಗೆ ಈ ಪ್ರಶಸ್ತಿಯನ್ನು ಭಾರತ ಸರ್ಕಾರ ನವೆಂಬರ್ 14 ರಂದು ಘೋಷಿಸಿ, ಅನುಕೂಲಕರವಾದ ದಿನದಂದು ನವದೆಹಲಿಯಲ್ಲಿ ನೀಡಲಾಗವುದು.

ನಿದಿಷ್ಟ ಅರ್ಜಿ ನಮೂನೆಯನ್ನು ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, 1 ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ ಅಂಬೇಡ್ಕರ್ ವೀದಿ, ಬೆಂಗಳೂರು - 560 001 ಇವರಿಂದ ಅಥವಾ ಆಯಾ ಜಿಲ್ಲಾ ಸಹಾಯಕ ನಿದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಛೇರಿ ಇವರುಗಳಿಂದ ಪಡೆಯಬಹುದು.

ಆಂಗ್ಲ ಭಾಷೆಯಲ್ಲಿ ತುಂಬಿದ ಅರ್ಜಿಗಳನ್ನು ದ್ವಿಪ್ರತಿಯಲ್ಲಿ ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, 1 ನೇ ಮಹಡಿ, ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀದಿ, ಬೆಂಗಳೂರು -1 ಅಥವಾ ಸಂಬಂಧಪಟ್ಟ ಜಿಲ್ಲೆಯ ಸಹಾಯಕ ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇವರಿಗೆ ಸಲ್ಲಿಸಬಹುದು.

— ಸಂಗಾತಿ

ಜಾನಪದ ಅಕಾಡೆಮಿ ನೂತನ ಅಧ್ಯಕ್ಷರಾಗಿ ಹಿ.ಶಿ. ರಾಮಚಂದ್ರೇಗೌಡ



ಜನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಪ್ರೊ. ಹಿ.ಶಿ. ರಾಮಚಂದ್ರೇಗೌಡ ಅವರು ಪ್ರಸ್ತುತ ಮೈಸೂರು ವಿಶ್ವವಿದ್ಯಾಲಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಸ್ವತಃ ಜನಪದ ಕಲಾವಿದರು, ಹಾಡುಗಾರರೂ ಆಗಿರುವ ರಾಮಚಂದ್ರೇಗೌಡರು, ದೇಶದ ವಿವಿದೆಡೆ ಜನಪದ ಕಲಾ ಪ್ರಾಕಾರಗಳ ಕುರಿತು ವಿಶೇಷ ಉಪನ್ಯಾಸ ನೀಡಿದ್ದಾರೆ. ಜನಪದ ಕುರಿತು 12 ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ಹಿರಿಮೆ ಇವರದು.

1947 ರಲ್ಲಿ ಹಾಸನ ಜಿಲ್ಲೆ ಹಿರಿಸಾವೆಯಲ್ಲಿ ಜನಿಸಿದ ಹಿರಿಸಾವೆ ಶಿವನಂಜಪ್ಪ ರಾಮಚಂದ್ರೇಗೌಡರು, ತಮ್ಮ ಪದವಿ ವಿದ್ಯಾಭ್ಯಾಸವನ್ನು ಹಾಸನದಲ್ಲಿ ಮುಗಿಸಿ, ಮೈಸೂರಿನ ಮಾನಸಗಂಗೋತ್ರಿಯಲ್ಲಿ ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಅನಂತರ ಕೊಳ್ಳೇಗಾಲ ಸರಕಾರಿ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ಆರಂಭಿಸಿದ ಅವರು, ಕೇರಳದ ಭಾಷಾ ಸಂಸ್ಥಾನ ವಿವಿಯಲ್ಲಿ ಭಾಷಾ ಸಂಶೋಧಕ ಹಾಗೂ ಉಪನ್ಯಾಸಕರಾಗಿ ಕಾರ್ಯ ನಿರ್ವಸಿದರು. 1975 ರಲ್ಲಿ ಮಾನಸಗಂಗೋತ್ರಿ ಜನಪದ ಅಧ್ಯಾಪಕರಾಗಿ ನೇಮಕವಾದರು. 1990 ರಿಂದ 95 ರ ವರೆಗೆ ಪ್ರಾಧ್ಯಾಪಕರಾಗಿದ್ದರು. 'ಕನ್ನಡ ಜನಪದ ಕಥಾ ವರ್ಗಗಳು ವಿಷಯದಲ್ಲಿ ಸಂಶೋಧನೆ ನಡೆಸಿ ಪಿಎಚ್‌ಡಿ ಪದವಿ ಪಡೆದರು. ಅನಂತರ 'ಬಯಲಾಟದ ಪ್ರಾರ್ಥನಾ ನೃತ್ಯಗಳು' ಮತ್ತು 'ಮಲಯಾಳಂ ಭಾಷೆ ಮತ್ತು ಜನಪದ' ಕುರಿತು ವಿಶೇಷ ಅಧ್ಯಯನ ನಡೆಸಿದರು. ಜನಪದ ತಜ್ಞರಾಗಿ ಕೋಲ್ಕತ್ತಾ, ಮದ್ರಾಸ್, ಗುವಹಾಟಿ, ಹಂಪಿ ವಿಶ್ವವಿದ್ಯಾಲಯ, ಮಧುರೈ, ಭುವನೇಶ್ವರ, ಪಾಂಡಿಚೇರಿ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಉಪನ್ಯಾಸ ನೀಡಿದ್ದಾರೆ. ಜನಪದ ಅಧ್ಯಯನ ಜತೆಗೆ ವಿಚಾರ ವೇದಿಕೆ, ವಿವಿಧ ಜನಪದ ಪ್ರಾಕಾರಗಳ ಸಮಿತಿ ಸದಸ್ಯರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. 'ಭೂಮಿ ಮತ್ತು ಹಿಂಸೆ ಮತ್ತು 'ರಾಮ ಅಳುತ್ತಿದ್ದಾನೆ ಎಂಬ ವೈಚಾರಿಕ ಲೇಖನಗಳ ಸಂಕಲನ ಹೊರತಂದಿದ್ದಾರೆ. 'ಕೇರಳ ಜನಪದ ಕಥಕ್ಕಳಿ, 'ಪ್ರಕೃತಿ ಜನಪದ, 'ಹಾಸನ ಜಿಲ್ಲೆ ಜನಪದ' ಸೇರಿದಂತೆ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಇವರ' ಹಾಸನ ಜಿಲ್ಲೆ ಜನಪದ ಕಥೆ ಕೃತಿಗೆ ಜನಪದ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

— ವಿಜಯಕರ್ನಾಟಕ

ಉತ್ತರ ವಾಯುವ್ಯದ ಗೇಟು - ಮನೆಯವರಿಗೆ ಕೇಡು.

ಪೂರ್ವ ಕರ್ನಾಟಕ - ಇತಿಹಾಸದ ಪಟ್ಟಿ

ಕಾಲ	ವಂಶಸ್ಥರು	ಮುಖ್ಯಸ್ಥರು	ಆಳ್ವಿಕೆ ಪ್ರದೇಶಗಳು
ಮಿಂಚಿನ ಕಾಲ	ಶಾತವಾಹನರು	ಸಿಮುಖ ಗೌತಮೀಪುತ್ರ	ಡೆಕ್ಕನ್, ಆಂಧ್ರ ಪ್ರದೇಶ, ಕರ್ನಾಟಕ ಮಹಾರಾಷ್ಟ್ರ ಸೇರಿದಂತೆ
ಕ್ರಿ. ಶ. 325-540	ಬನವಾಸಿ ಕದಂಬರು	ಮೂರಶರ್ಮಾ ಕಕುಸ್ತವರ್ಮಾ	ಕರ್ನಾಟಕ ಕೇಂದ್ರ, ಪಶ್ಚಿಮ, ವಾಯುವ್ಯ ಭಾಗಗಳು
ಕ್ರಿ. ಶ. 325-999	ತಲಕಾಡು ಗಂಗರು	ಅವಿನಿತ. ದುರ್ವಿನಿತ. ಶ್ರೀಪುರುಷ	ದಕ್ಷಿಣ ಕರ್ನಾಟಕ, ಗಡಿಭಾಗದ ಆಂಧ್ರಪ್ರದೇಶ, ತಮಿಳುನಾಡು
ಕ್ರಿ. ಶ. 500-757	ಬಾದಾಮಿ ಚಾಲುಕ್ಯರು	ಮಂಗಳೇಶ ಪುಲಕೇಶಿ II	ಕರ್ನಾಟಕ, ಮಹಾರಾಷ್ಟ್ರ, ಗುಜರಾತ್ ಒರಿಸ್ಸಾ ಮತ್ತು ಆಂದ್ರ ಪ್ರದೇಶದ ಭಾಗಗಳು
ಕ್ರಿ. ಶ. 757-973	ಮಾಲ್ಕೆಡ ರಾಷ್ಟ್ರಕೂಟರು	ಕೃಷ್ಣI, ಗೋವಿಂದII ನೃಪತುಂಗI	ಕರ್ನಾಟಕ, ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶ, ಆಂದ್ರಪ್ರದೇಶ, ತಮಿಳುನಾಡಿನ ಭಾಗಗಳು
ಕ್ರಿ. ಶ. 973-1198	ಕಲ್ಯಾಣ	ವಿಕ್ರಮಾದಿತ್ಯVI	ಕರ್ನಾಟಕ, ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶ, ಆಂಧ್ರ ಪ್ರದೇಶ, ತಮಿಳುನಾಡಿನ ಭಾಗಗಳು
ಕ್ರಿ. ಶ. 1198-1312	ದೇವಗಿರಿ ಸ್ಯೂನರು	ಸಿಂಗಾನ II	ಉತ್ತರ ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂದ್ರ ಪ್ರೇಧಸದ ಭಾಗಗಳು
ಕ್ರಿ. ಶ. 1000-1346	ದ್ವಾರಸಮುದ್ರ ಹೊಯ್ಸಳರು	ವಿಷ್ಣುವರ್ಧನ, ಬಲ್ಲಾಳII	ದಕ್ಷಿಮ ಮತ್ತು ಕರಾವಳಿ ಕರ್ನಾಟಕ ಮತ್ತು ಆಂಧ್ರಪ್ರದೇಶ, ತಮಿಳುನಾಡಿನ ಭಾಗಗಳು
ಕ್ರಿ. ಶ. 1336-1565	ವಿಜಯನಗರ ವಂಶಸ್ಥರು	ದೇವರಾಯII ಕೃಷ್ಣದೇವರಾಯ	ಕರ್ನಾಟಕ, ಕೇರಳ, ತಮಿಳುನಾಡು ಮತ್ತು ಆಂಧ್ರ ಪ್ರದೇಶದ ಬಹುಭಾಗ
ಕ್ರಿ. ಶ. 1347-1527	ಬಹುಮನಿ ಸಂಸ್ಥಾನ	ಮೊಹಮ್ಮದ್ ಷಾI ಮೊಹಮ್ಮದ್ ಷಾII	ಉತ್ತರ ಡೆಕ್ಕನ್, ಕರಾವಳಿ ಪ್ರದೇಶಗಳು
ಕ್ರಿ. ಶ. 1490-1686	ಬಿಜಾಪುರ ಸುಲ್ತಾನರು	ಯೂಸುಫ್ ಆದಿಲ್‌ಖಾನ್ ಇಬ್ರಾಹಿಂ ಆದಿಲ್‌ಷಾII	ಬಿಜಾಪುರ
ಕ್ರಿ. ಶ. 1500-1763	ಕೆಳದಿ ನಾಯಕರು	ಶಿವಪ್ಪನಾಯಕ ರಾಣಿ ಚೆನ್ನಮಾಜಿ	ಪಶ್ಚಿಮ ಘಟ್ಟ ಪ್ರದೇಶ ಮತ್ತು ಮಲ್ನಾಡ್‌ನ ಭಾಗಗಳು
ಕ್ರಿ. ಶ. 1399-1761	ಮೈಸೂರು ಒಡೆಯರು	ರಾಜಾ ಒಡೆಯರ್ ರಣಧೀರ ಕಂಠೀರವ ಚಿಕ್ಕದೇವರಾಜ ಒಡೆಯರ್	ಹಳೇ ಮೈಸೂರು ರಾಜ್ಯ (ದಕ್ಷಿಣ ಕರ್ನಾಟಕದ ಸಂಪೂರ್ಣ ಭಾಗ)
ಕ್ರಿ. ಶ. 1761-1799	ಹೈದರ್ ಆಲಿ ಟಿಪ್ಪೂಸುಲ್ತಾನ್	ಹೈದರ್ ಆಲಿ ಟಿಪ್ಪೂಸುಲ್ತಾನ್	ಕನಾಟಕ ಮತ್ತು ಆಂಧ್ರ ಪ್ರದೇಶದ ಭಾಗಗಳು
ಕ್ರಿ. ಶ. 1800-1831	ಮೈಸೂರು ಒಡೆಯರು	ಕೃಷ್ಣದೇವರಾಯ ಒಡೆಯರುIII	ಹಳೇ ಮೈಸೂರು ರಾಜ್ಯ
ಕ್ರಿ. ಶ. 1831-1881	ಬ್ರಿಟಿಷ್ ಆಳ್ವಿಕೆ	ಕಮೀಷನರ್ಸ್	ಹಳೇ ಮೈಸೂರು ರಾಜ್ಯ
ಕ್ರಿ. ಶ. 1881-1950	ಮೈಸೂರು ಒಡೆಯರು	ಕೃಷ್ಣದೇವರಾಯ ಒಡೆಯರುIV ಜಯಚಾರಾಜ ಒಡೆಯರು	ಹಳೇ ಮೈಸೂರು ರಾಜ್ಯ
ಕ್ರಿ. ಶ. 1956	ರಾಜ್ಯ ಮರುಸ್ಥಾನೆ ಕಾಯಿದೆ. ಈಗಿನ ಕರ್ನಾಟಕ ರಾಜ್ಯ ಸ್ಥಾಪನೆ.		

ಉತ್ತರದ ಗೇಟು - ಸಂತೋಷದ ತಂತಿ ಮೀಟು.

ಕಾವೇರಿ ನಾಡಿನಲ್ಲಿ ನಡೆದ ಹಾಕಿ ಜಾತ್ರೆಯೊಂದು ವಿಶೇಷ (ಹಾಕಿನಾಡ್)

ಹಿಂದೆಂದೂ ಕಾಣದ ಕಾಫಿ ಬೆಲೆ ಕುಸಿತ ಕೊಡಗಿನ ಆರ್ಥಿಕ-ಸಾಮಾಜಿಕ ಭದ್ರತೆಗೆ ಸಂಚಕಾರ ಒಡ್ಡುವ ಭೀತಿ ಹುಟ್ಟಿಸಿದ್ದರೂ, ಕೊಡವರ ಹಾಕಿ ಪ್ರೇಮವನ್ನು ಒಂದಿನಿತೂ ಕುಗ್ಗಿಸಿಲ್ಲ. ಬದಲಿಗೆ ಇನ್ನಷ್ಟು ಹೆಚ್ಚಿಸಿದೆ. ಕಳೆದ ಏಪ್ರಿಲ್ 20ರಿಂದ 24 ದಿನಗಳ ಕಾಲ ಅಮ್ಮತ್ತಿಯಂತಹ ಪುಟ್ಟ ಗ್ರಾಮದಲ್ಲಿ ನಡೆದ ಕೌಟುಂಬಿಕ ಹಾಕಿ ಉತ್ಸವ ಇದಕ್ಕೆ ನಿದರ್ಶನ.

ಉಡುಗೆ-ತೊಡುಗೆ, ನಂಬಿಕೆ, ಆಚಾರ-ವಿಚಾರಗಳಲ್ಲಿ ತನ್ನದೇ ಆದ ವೈಶಿಷ್ಟ್ಯ ಹೊಂದಿರುವ ಕರ್ನಾಟಕದ ಈ ಪುಟ್ಟ ಕಾಫಿ ಕಣಜ ಹಾಕಿ ವಿಷಯಕ್ಕೆ ಬಂದಾಗ ತೋರುವ ಭಾವಾವೇಶ ಅನುಭವಿಸಿ ತಿಳಿಯಬೇಕಷ್ಟೆ. ಹಾಕಿ ಎಂಬುದು ಇಲ್ಲಿ ಕೇವಲ ಆಟವಾಗಿ ಉಳಿಯದೆ ಕೊಡವರ ನರನಾಡಿಗಳಲ್ಲಿ ಬೆರೆತಿದೆ. ಇಲ್ಲಿನ ಮಟ್ಟಿಗಂತೂ ಈ ಕ್ರೀಡೆ ಸ್ಥಳೀಯರ ಸಂಸ್ಕೃತಿಯಲ್ಲಿ ಮಿಳಿತವಾಗಿದೆ. ಇತ್ತೀಚಿನ ದಿನಗಳಲ್ಲಿ ಅತಿಯಾದ ವಾಣಿಜ್ಯ ಚಟಗಳು ಇಲ್ಲಿನ ಯುವ ಜನಾಂಗವನ್ನು ಮೂಲ ಸಂಸ್ಕೃತಿಯಿಂದ ದೂರ ಕರೆದೊಯ್ಯುತ್ತಿರುವ ಭೀತಿ ಕಾಡಲಾರಂಭಿಸಿದಾಗ ರೂಪು ತಳೆದ ಕೌಟುಂಬಿಕ ಹಾಕಿ ಉತ್ಸವ ಈ ಪಲಾಯನವಾದಕ್ಕೆ ತೆರೆ ಎಳೆಯುವಲ್ಲಿ ಸಾಕಷ್ಟು ಯಶಸ್ವಿಯಾಗಿದೆ. ಅಮ್ಮತ್ತಿಯಲ್ಲಿ ಕೊನೆಗೊಂಡ ನೈಕಿ ನೆಲ್ಲಮಕ್ಕಡ ಕಪ್ ಹಾಕಿ ಪಂದ್ಯಾಟ ಈ ಮಾತಿ ಸಾಕ್ಷಿಯಾಗಿ ನಿಲ್ಲುತ್ತದೆ.

ಈ ಬಾರಿ ಪಂದ್ಯಾಟದಲ್ಲಿ 226 ತಂಡಗಳ ಸುಮಾರು 4068 ಹಾಕಿ ಪಟುಗಳು ಅಮ್ಮತ್ತಿಗೆ ದಾಳಿಯಿಟ್ಟಿದ್ದು, ಭಾರತದಲ್ಲಿ ಮಾತ್ರವಲ್ಲ ವಿಶ್ವದಲ್ಲಿಯೇ ಅತಿ ದೊಡ್ಡ ಕ್ರೀಡಾಜಾತ್ರೆ ಎನಿಸಿದೆ. ಇಂತಹ ಅಪರೂಪದ ಘಟನೆಗಳನ್ನು ದಾಖಲೆಗಳ ರೂಪದಲ್ಲಿ ಸಂಗ್ರಹಿಸುವ ಗಿನ್ನಿಸ್ ವಿಶ್ವದಾಖಲೆ ಪುಸ್ತಕದ ತಂಡವೊಂದು ಅಮ್ಮತ್ತಿಗೆ ಖುದ್ದಾಗಿ ಆಗಮಿಸಿತ್ತು. ಇನ್ನು ಎರಡು ವರ್ಷಗಳಲ್ಲಿ ನೆಲ್ಲಮಕ್ಕಡ ಕಪ್ ಹಾಕಿ ಟೂರ್ನಿಗೆ ಗಿನ್ನಿಸ್ ಪುಸ್ತಕದಲ್ಲಿ ಸ್ಥಾನ ಪಡೆಯುವ ಎಲ್ಲ ಸಾಧ್ಯತೆಗಳಿವೆ ಎನ್ನುತ್ತಾರೆ ನೆಲ್ಲಮಕ್ಕಡ ಕಪ್ ಆಯೋಜನೆಯ ಉಸ್ತುವಾರಿ ವಹಿಸಿದ ಮೋಹನ್ ಅಯ್ಯಪ್ಪ.

ಹಿನ್ನೆಲೆ : ಕೊಡವ ಸಮುದಾಯದಲ್ಲಿ ಸುಮಾರು 800 ಕುಟುಂಬಗಳಿದ್ದು, ಆಧುನಿಕತೆಯ ಭರದಲ್ಲಿ ಇವು ನಾನಾ ಕಾರಣಗಳಿಗಾಗಿ ಹರಿದು ಹಂಚಿಹೋಗಿವೆ. ಹಾಗೆಯೆ ಕೊಡವರ ಸಂಸ್ಕೃತಿ ಸಹ ಅಪಾಯದ ಅಂಚಿನಲ್ಲಿದ್ದು, ಯುವ ಜನಾಂಗ ವಿಮುಖವಾಗುತ್ತಿದ್ದ ಕಾಲದಲ್ಲಿ, ಅಂದರೆ 1996ರಲ್ಲಿ ವಿವಿಧ ಕುಟುಂಬಗಳ ನಡುವೆ ಸ್ನೇಹ ಸೇತು ಬೆಸೆದು ಯುವಕರಿಗೆ ತಮ್ಮ ಸಂಸ್ಕೃತಿಯ ಶ್ರೀಮಂತಿಕೆಯನ್ನು ಮನವರಿಕೆ ಮಾಡಿಕೊಡುವ ಸಲುವಾಗಿ ಈ ರೀತಿಯ ಪಂದ್ಯಾವಳಿ ಜನ್ಮ ತಾಳಿತು.

ಕಳೆದ ನಾಲ್ಕು ವರ್ಷಗಳಲ್ಲಿ ನಾಲ್ಕು ಕುಟುಂಬಗಳು ಈ ಪಂದ್ಯಾವಳಿಯನ್ನು ಯಶಸ್ವಿಯಾಗಿ ಆಯೋಜಿಸಿದವು. ಈ ಬಾರಿ ನೆಲ್ಲಮಕ್ಕಡ ಕುಟುಂಬ ಈ ಹೊಣೆ ಹೊತ್ತು ಅದನ್ನು ಅತ್ಯಂತ ಚೊಕ್ಕವಾದ ರೀತಿಯಲ್ಲಿ ನಡೆಸಿಕೊಟ್ಟು, ಹೊಸ ಹುರುಪು ತುಂಬಿದೆ. ಅಮ್ಮತ್ತಿ ವಿರಾಜಪೇಟೆಯಿಂದ ಆರೇಳು ಕಿಲೋಮೀಟರ್ ದೂರ ಇರುವ ಪುಟ್ಟ ಹಳ್ಳಿ. ನೆಲ್ಲಮಕ್ಕಡ ಕುಟುಂಬದ ಮೂಲ ಬೇರು ಇಲ್ಲಿದೆ. ಹಾಗಾಗಿಯೇ ಈ ಬಾರಿ ಪಂದ್ಯಾವಳಿಯನ್ನು ಅಮ್ಮತ್ತಿಯಲ್ಲಿಯೇ ನಡೆಸಲು ನಿರ್ಧರಿಸಲಾಯಿತು. ಇಲ್ಲಿರುವ ಮಾಧ್ಯಮಿಕ ಹಾಗೂ ಪ್ರೌಢಶಾಲೆ ಮೈದಾನಗಳನ್ನು ಚಮತ್ಕಾರ ರೀತಿಯಲ್ಲಿ ಹಾಕಿ ಕ್ರೀಡಾಂಗಣಗಳನ್ನಾಗಿ ಪರಿವರ್ತಿಸಿ ಈ ಭಾಗದ ಆಟಗಾರರಿಗೆ ಶಾಶ್ವತ ಮೂಲಭೂತ ಸೌಲಭ್ಯ ಕಲಿಸಿದ ಕೀರ್ತಿ ಈ ಕುಟುಂಬಕ್ಕೆ ಸೇರುತ್ತದೆ.

ಸ್ವತಃ ಮೋಹನ್ ಹೇಳುವಂತೆ ಈ ಉತ್ಸಾಹ ಜೇಬಿಗೆ ಸಾಕಷ್ಟು ಕತ್ತರಿ ಹಾಕಿದೆ. ಆದರೆ ಕೆಲ ಪ್ರಾಯೋಜಕರ ಸಹಾಯ ಹಸ್ತ ದೊರಕಿದೆ ಕಾರಣ ಎಲ್ಲವೂ ಅಂದುಕೊಂಡಂತೆ ನಡೆಯಿತು. ಇದೇ ವೇಳೆ ಮುಂದಿನ ವರ್ಷದಿಂದ ಪ್ರಾಯೋಜಕರ ಸೂಕ್ತ ನೆರವಿಲ್ಲದೆ ಪಂದ್ಯಾವಳಿ ಆಯೋಜಿಸುವುದೇ ಕಷ್ಟ ಎನ್ನುವಂತಹ ಮಾತೂ ಕೇಳಿ ಬರುತ್ತಿವೆ. ಮೂಲ ಕಸುಬಾದ ಕಾಫಿ ಬೆಳೆ ಈಗ ಲಾಭಕ್ಕಿಂತ ನಷ್ಟದ ಉದ್ಯೋಗವಾಗಿರುವ ಹಿನ್ನೆಲೆಯಲ್ಲಿ ಸ್ವಂತ ಖರ್ಚಿನಿಂದ ಯಾವ ಕುಟುಂಬವೂ ಈ ಉತ್ಸವವನ್ನು ನಡೆಸಲು ಸಾಧ್ಯವಿಲ್ಲ.

ಪ್ರತಿಷ್ಠೆ ರ ಪಣ: ಈ ಮಧ್ಯೆ ಕೇವಲ ಕೌಟುಂಬಿಕ ಉತ್ಸವವಾಗಿ ಜನ್ಮ ತಾಳಿದ ಈ ಪಂದ್ಯಾಟ ವರ್ಷದಿಂದ ವರ್ಷಕ್ಕೆ ಕುಟುಂಬಗಳ ನಡುವಿನ ಪ್ರತಿಷ್ಠೆಯ ಪಣವಾಗಿ ಮಾರ್ಪಟ್ಟಿರುವುದು ಎಷ್ಟರಮಟ್ಟಿಗೆ ಪೂರಕ ಎಂಬ ಮಾತೂ ಕೇಳಿಬರುತ್ತಿದೆ. ಆಡಂಬರ, ಅಬ್ಬರಕ್ಕಿಂತ ನಿಜವಾದ ಅರ್ಥದಲ್ಲಿ ಆರೋಗ್ಯಕರ ಪೈಪೋಟಿಗೆ ಇದನ್ನು ವೇದಿಕೆಯಾಗಿ ಪರಿವರ್ತಿಸಿಕೊಂಡಲ್ಲಿ ದೀರ್ಘ ಕಾಲ ಇದನ್ನು ಉಳಿಸಿಕೊಂಡು ಹೋಗಬಹುದು ಎಂಬುದು ಸ್ಥಳೀಯರ ಅಭಿಪ್ರಾಯವೂ ಆಗಿದೆ.

— ನಿಸ್ತೇಜ.

ನಿಧನ

ಮಡಿಕೇರಿ ನಿವಾಸಿ ದಾಯನ ಅಪ್ಪಣ್ಣನವರು ದಿನಾಂಕ 28-5-2001ರಲ್ಲಿ ತಮ್ಮ ಸ್ವಗೃಹದಲ್ಲಿ ಹೃದಯಾಘಾತದಿಂದ ನಿಧನರಾದರು. ಇವರಿಗೆ 65 ವರ್ಷ ಪ್ರಾಯವಾಗಿತ್ತು. ಇವರು ಪತ್ನಿ, 2 ಗಂಡುಮಕ್ಕಳು, ಒಬ್ಬಳು ಹೆಂಣು ಮಗಳು ಅಲ್ಲದೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ ಅಲ್ಲದೆ ಪೋಲಿಸ್ ಇಲಾಖೆಯಲ್ಲಿ ಸಬ್ ಇನ್ಸ್‌ಸ್ಪೆಕ್ಟರಾಗಿ ಕಾರ್ಯ ನಿರ್ವಹಿಸಿ ನಿವೃತ್ತರಾಗಿದ್ದ ಇವರ ದಫನಕಾರ್ಯವು ಮಡಿಕೇರಿಯ ಸ್ಟುವರ್ಟ್ ಹಿಲ್‌ನಲ್ಲಿರುವ ಗೌಡ ಸಮಾಜದ ಸ್ಮಶಾನದಲ್ಲಿ ಅಂತ್ಯಕ್ರಿಯೆಯು ವಿಧಿವತ್ತಾಗಿ ನಡೆಯಿತು.

ಉತ್ತರ ಈಶಾನ್ಯದ ಗೇಟು - ಉತ್ತಮ ಶುಭ ಖಂಡಿತ.

ವಾಸ್ತವವೋ, ಅವಾಸ್ತವವೋ ಗೊತ್ತಿದೆಯಾ?

1. ಸತ್ತ ನಂತರ ಕೆಲವರು ದೆವ್ವವಾಗುತ್ತಾರೆ, ಉಳಿದವರನ್ನು ಕಾಡುತ್ತಾರಂತೆ ನಿಜವೇ?

ಇದೊಂದು ನಿಜವಲ್ಲದ, ಆದರೆ ಜನಪ್ರಿಯ ನಂಬಿಕೆ. ಚಿಕ್ಕವಯಸ್ಸಿನಲ್ಲಿ ದುರ್ಮರಣಕ್ಕೆ ಈಡಾದ ವ್ಯಕ್ತಿಯ ದೇಹ ನಾಶವಾದರೂ, ಒಳಗಿರುವ ಆತನ ಮನಸ್ಸು ಚೇತನ ಅಥವಾ ಆತ್ಮ ನಾಶವಾಗುವುದಿಲ್ಲ. ಅದು ವ್ಯಕ್ತಿ ಸತ್ತ ಜಾಗದಲ್ಲಿ ಅಥವಾ ಅವನ ಆತ್ಮೀಯರ ಬಳಿ ಇದ್ದು ಪರೋಕ್ಷವಾಗಿ ತನ್ನ ಇರುವಿಕೆಯನ್ನು ಪ್ರಕಟಿಸುತ್ತದೆ. ತಾನು ಇಷ್ಟಪಡುವವರಿಗೆ ಸಹಾಯ ಮಾಡುತ್ತಾ, ತನಗೆ ಕಷ್ಟ ಕೊಟ್ಟವರಿಗೆ ತೊಂದರೆ ಕೊಡುತ್ತಾ ಕಾಲ ಕಳೆಯುತ್ತದೆ. ಸಾಂಪ್ರದಾಯಿಕ ರೀತಿಯಲ್ಲಿ ಅಂತ್ಯಸಂಸ್ಕಾರ ಕಾಣದ ವ್ಯಕ್ತಿಯ ಆತ್ಮವೂ ಈ ರೀತಿ ಅಲೆದಾಡುತ್ತದೆ. ಆನಂತರ ಪ್ರೇತಾತ್ಮಗಳ ಲೋಕಕ್ಕೋ, ದೇವರ ಸನ್ನಿಧಿಗೋ ಹೋಗುತ್ತದೆ ಎಂದು ಬಹಳ ಜನ ನಂಬುತ್ತಾರೆ. ಗಂಡನನ್ನು ಕಳೆದುಕೊಂಡ ಹೆಂಡತಿಗೆ ಗಂಡನ ಆಕಾರ ಕಾಣಿಸಿಕೊಳ್ಳುವುದನ್ನು. ಗಂಡನ ಧ್ವನಿ ಕೇಳುವುದನ್ನು ಇದಕ್ಕೆ ಸಾಕ್ಷಿಯಾಗಿ ತೋರಿಸುತ್ತಾರೆ. ಸತ್ತ ವ್ಯಕ್ತಿಗೆ ಸೇರಿಸಿದ ವಸ್ತುಗಳು ಸ್ಥಾನಪಲ್ಲಟವಾಗುವುದೂ ಇದಕ್ಕೆ ಸಾಕ್ಷಿ ಎನ್ನುತ್ತಾರೆ. ಇವೆಲ್ಲಾ ದುಃಖಕ್ಕೀಡಾದ ವ್ಯಕ್ತಿಗಳ ಭ್ರಮೆ ಎಂಬುದನ್ನು ಜನ ಒಪ್ಪುವುದಿಲ್ಲ. ಸತ್ತ ವ್ಯಕ್ತಿಗೆ ಅನ್ಯಾಯ ಮಾಡಿ ಭಯಪಡುವ ಅಥವ ತಪ್ಪಿತಸ್ಥ ಬಾವನೆಯನ್ನು ಹೊಂದಿರುವ ವ್ಯಕ್ತಿಗೆ ಯಾವ ಕಾಯಿಲೆ ಅಥವಾ ರೋಗಲಕ್ಷಣ ಕಾಣಿಸಿಕೊಂಡರೆ, ಆತ ಮತ್ತು ಇತರರು ಅವೆಲ್ಲ ಸತ್ತ ವ್ಯಕ್ತಿಯ ದೆವ್ವದ ಕಾರುಬಾರು ಎಂದು ಹೇಳುತ್ತಾರೆ.

ವ್ಯಕ್ತಿ ಸತ್ತನಂತರ, ಆತನ ಮಿದುಳೂ ಸೇರಿದಂತೆ, ದೇಹ ನಾಶವಾಗುತ್ತದೆ. ಮಿದುಳಿನೊಂದಿಗೆ ಮನಸ್ಸು, ನೆನಪು ಎಲ್ಲವೂ ನಾಶವಾಗುತ್ತದೆ. ಸತ್ತನಂತರ ಅಸಹಜವಾಗಿ ಮನಸ್ಸು ಮತ್ತು ಅದರ ಎಲ್ಲಾ ಅನುಭವಗಳು ಮತ್ತೆ ಹೇಗೆ [ಆತ್ಮ ದೆವ್ವದ ರೂಪದಲ್ಲಿ] ಪ್ರಕಟಗೊಳ್ಳಲು ಸಾಧ್ಯ? ಶರೀರಾತೀತ ನೆನಪು ಹೇಗಿರಲು ಸಾಧ್ಯ ಎಂದು ವಿಜ್ಞಾನ ಪ್ರಶ್ನಿಸುತ್ತದೆ. ಆದ್ದರಿಂದ ಆತ್ಮ, ದೆವ್ವ, ಭೂತಗಳೆಲ್ಲ ನಮ್ಮ ಮನಸ್ಸಿನ ಕಲ್ಪನೆಯೇ ಹೊರತು, ವಾಸ್ತವವಲ್ಲ ಎನ್ನಬಹುದು. ಹಾಗೆಯೇ ದೆವ್ವಗಳ ಆಕಾರದ ಕಲ್ಪನೆ ಆಯಾ ಸಂಸ್ಕೃತಿಯಲ್ಲಿ ಪ್ರಚಲಿತವಿರುವ ನಂಬಿಕೆಗಳನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ ಹೆಣ್ಣು ದೆವ್ವ ಬಿಳಿ ಸೀರೆ ಉಟ್ಟಿರಬೇಕು, ತಲೆ ಕೂದಲು ಇಳಿ ಬಿಟ್ಟಿರಬೇಕು, ಕಾಲಿಗೆ ಗೆಜ್ಜೆ ಕಟ್ಟಿರಬೇಕು ಇತ್ಯಾದಿ. ಅಥವಾ ಕೋರೆ ಹಲ್ಲು, ತಲೆಯ ಮೇಲೆ ಕೊಂಬು, ಪಾದಗಳು ಹಿಂದುಮುಂದಾಗಿರಬೇಕು.!

2. ಸತ್ತ ವ್ಯಕ್ತಿಯ ಮನಸ್ಸು (ಆತ್ಮ) ಮತ್ತೊಂದು ಜನ್ಮ ಪಡೆಯುತ್ತದೆಯೇ? ಪುನರ್ಜನ್ಮ ಸಿದ್ಧಾಂತ ನಿಜವೇ?

"ಹುಟ್ಟು ಸಾವು ಒಂದು ಚಕ್ರ. ಹುಟ್ಟಿದವರು ಸಾಯಲೇಬೇಕು, ಹಾಗೇ ಸತ್ತವರು ಮತ್ತೆ ಹುಟ್ಟಲೇ ಬೇಕೆಂಬ" ಸಿದ್ಧಾಂತ ನಮ್ಮಲ್ಲಿ ಜನಪ್ರಿಯವಾಗಿದೆ. ಆಗೊಮ್ಮೆ ಈಗೊಮ್ಮೆ ಕೆಲವು ವ್ಯಕ್ತಿಗಳು, ಇದ್ದಕ್ಕಿದ್ದಂತೆ, ತಮ್ಮ ಪೂರ್ವಜನ್ಮದ ಕೆಲವು ವಿವರಗಳನ್ನು ಕೊಟ್ಟು, ಜನರನ್ನು ಚಕಿತಗೊಳಿಸುತ್ತಾರೆ. ಪರೀಕ್ಷಿಸಿದಾಗ ಅವರ ಹೇಳಿಕೆಗಳು ಹಿಂದೆ ಆಗಿಹೋದ ಒಬ್ಬ ವ್ಯಕ್ತಿಯ ಜೀವನ ವಿವರಗಳಿಗೆ ತಾಳಿಕೆಯಾಗಿ ಜನ ಪುನರ್ಜನ್ಮ ಸಿದ್ಧಾಂತವನ್ನು ಎತ್ತಿ ಹಿಡಿಯುತ್ತಾರೆ.

ಪುನರ್ಜನ್ಮ ಪ್ರಕರಣಗಳ ಬಗ್ಗೆ ವೈಜ್ಞಾನಿಕ ಅಧ್ಯಯನಗಳನ್ನು ಮಾಡಲಾಗಿದೆ. ತಮ್ಮ ಹಿಂದಿನ ಜನ್ಮದ ವಿವರಗಳನ್ನು ಕೊಡುವ 350ಕ್ಕೂ ಹೆಚ್ಚಿನ ಮಕ್ಕಳನ್ನು ಬೆಂಗಳೂರಿನ ನಿಮ್ಹಾನ್ಸ್ ಸಂಸ್ಥೆಯ ಡಾ|| ಸತ್ವಂತ್ ಪಸ್ರೀಚಾ ಪರೀಕ್ಷಿಸಿದ್ದಾರೆ. ಅವರ ಹಿಂದಿನ ಜನ್ಮದ ವಿವರಗಳನ್ನು ಕಲೆಹಾಕಿ ಸತ್ಯಾಸತ್ಯತೆಯನ್ನು ಪರೀಕ್ಷಿಸಿದ್ದಾರೆ. ಹೆಚ್ಚಿನ ಪ್ರಕರಣಗಳಲ್ಲಿ ಅವು ನಿಜವೆಂದು ಕಂಡುಕೊಂಡಿದ್ದಾರೆ. ಪುನರ್ಜನ್ಮ ಸಿದ್ಧಾಂತವಲ್ಲದೆ ಬೇರಾವ ರೀತಿಯಿಂದಲೂ, ಈ ವಿಲಕ್ಷಣವನ್ನು ವಿವರಿಸಲು ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಅಂತೆಯೇ ಅಂತಾರಾಷ್ಟ್ರೀಯ ಸಂಶೋಧಕ ಡಾ|| ಐಯಾನ್ ಸ್ಟೀವನ್‌ಸನ್ ಕೂಡ ಇದೇ ತೀರ್ಮಾನಕ್ಕೆ ಬಂದಿದ್ದಾರೆ.

ಆದರೆ ಹಲವು ಪ್ರಶ್ನೆಗಳು ಸೂಕ್ತ ಉತ್ತರಕ್ಕಾಗಿ ಕಾಯುತ್ತಲೆ ಇವೆ.

- ☆ ಆತ್ಮದ ಸ್ವರೂಪವೇನು, ಜನ್ಮದ ವಿವರಗಳ ನೆನಪು ಯಾವ ರೂಪದಲ್ಲಿ ಉಳಿಯುತ್ತದೆ.
- ☆ ಆತ್ಮ ಯಾವದೇಹವನ್ನು ಸೇರಬೇಕೆಂದು ಹೇಗೆ ನಿರ್ಧರಿಸುತ್ತದೆ ಮತ್ತು ಯಾವ ಹಂತದಲ್ಲಿ (ತಾಯಿಯ ಗರ್ಭದ 280 ದಿನಗಳಲ್ಲಿ ಯಾವಾಗ) ಅದು ದೇಹವನ್ನು ಸೇರುತ್ತದೆ. ತನ್ನ ನೆನಪನ್ನು ಮಗುವಿನ ಮಿದುಳಿಗೆ ಹೇಗೆ ವರ್ಗಾಯಿಸುತ್ತದೆ.
- ☆ ಸತ್ತ ದಿನಕ್ಕೂ ಇನ್ನೊಂದು ದೇಹವನ್ನು ಸೇರುವ ದಿನಕ್ಕೂ ಒಂದೊಂದು ಪ್ರಕರಣದಲ್ಲಿ ಒಂದೊಂದು ಅವಧಿ (ಕೆಲವೇ ಕ್ಷಣಗಳಿಂದ ಹಿಡಿದು 150 ವರ್ಷಗಳಷ್ಟು ದೀರ್ಘಕಾಲ) ಏಕೆ?
- ☆ ಪುನರ್ಜನ್ಮದ ನೆನಪು ಸ್ವಲ್ಪ ಕಾಲಾನಂತರ ಮಸುಕಾಗಿ ಮರೆಯಾಗುತ್ತದೆ ಏಕೆ?
- ☆ ಹೆಚ್ಚಿನ ಪ್ರಕರಣಗಳಲ್ಲಿ ಸತ್ತ ವ್ಯಕ್ತಿಯ ಊರಿಗೂ ಪುನರ್ಜನ್ಮವಾದ ಊರಿನ ಅಂತರ 25 ಕಿ.ಮೀ. ಅಥವಾ ಅದಕ್ಕೂ ಕಡಿಮೆ ಇದೇಕೆ ಹೀಗೆ?
- ☆ ಎಲ್ಲರಿಗೂ ಪುನರ್ಜನ್ಮದ ನೆನಪು ಏಕೆ ಬರುವುದಿಲ್ಲ?

ಆದ್ದರಿಂದ ಪುನರ್ಜನ್ಮ ವಿಚಾರ ಒಂದು ಮುಕ್ತ ಪ್ರಶ್ನೆ. ವಾಸ್ತವವೋ ಅವಾಸ್ತವವೋ ಗೊತ್ತಿಲ್ಲ.

— ಸಂಗ್ರಹ. ಉಳುವಾರನ ತನಜ ಜನಾರ್ಧನ್,
ಕುಶಾಲನಗರ.

ಪೂರ್ವಕ್ಕಿಂತ ಎತ್ತರದ ಪಶ್ಚಿಮದ ಗೋಡೆ- ಎಣೆಯಿಲ್ಲದ ಸೌಭಾಗ್ಯಕ್ಕೆಡೆ.

ಪ್ರಗತಿ ಅಥವಾ ಅದೋಗತಿ ?

— ಬರಹ : ಅನುರಾಧ, MNPM, ಮೈಸೂರು.

ಕೊಡಗಿನ ಮೂಲನಿವಾಸಿಗಳಲ್ಲಿ ಕೊಡಗಿನ ಗೌಡ ಜನಾಂಗವೂ ಒಂದು ಎನ್ನುವುದು ಹೆಮ್ಮೆಯ ವಿಷಯ. ಈ ಜನಾಂಗದವರು ಸಂಖ್ಯೆಯಲ್ಲಿ ಕೊಡಗಿನಲ್ಲಿ ಹೆಚ್ಚು ಇದ್ದರೂ, ಇತ್ತೀಚಿನ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲಿಯೂ ಕಾಣಿಸಿಕೊಳ್ಳುತ್ತಿದ್ದಾರೆ ಎನ್ನುವುದು ಸಂತೋಷದ ವಿಷಯ. ಈ ಜನಾಂಗದಲ್ಲಿಯೂ ನಿಷ್ಠಾವಂತ ಅಧಿಕಾರಿ ಅಧಿಕಾರಿಣಿಗಳು, ಉಪನ್ಯಾಸಕರು, ವೈದ್ಯರು ಹಾಗೂ ವಿಜ್ಞಾನಿಗಳು ಇದ್ದಾರೆ. ಹಾಗೂ ಯುವ ಪೀಳಿಗೆಯಿಂದಲೂ ಹೊರಬರುತ್ತಿದ್ದಾರೆ. ವಿದ್ಯಾಭ್ಯಾಸ ಹಾಗೂ ಕರ್ತವ್ಯ ನಿರ್ವಹಿಸಲು ಕೊಡಗಿನಿಂದ ಹೊರಬಂದ ಈ ಜನಾಂಗದವರು ತಮ್ಮ ಸಂಸ್ಕೃತಿಯನ್ನು ಕಾಪಾಡಲು, ತಮ್ಮ ಜನಾಂಗದ ಬಗ್ಗೆ ವಿಷಯ ವಿನಿಮಯ ಮಾಡಿಕೊಳ್ಳಲು ಹಾಗೂ ಒಗ್ಗಟ್ಟು ತರಲು ಕೊಡಗು ಸಂಗಾತಿ, ಗೌಡ ಸಂಸ್ಕೃತಿಗೆ ಸಂಬಂಧಪಟ್ಟ ಪುಸ್ತಕಗಳು ಹಾಗೂ ಸಮಾಜಗಳಿಗೆ ಹುಟ್ಟು ಹಾಕಿದ್ದಾರೆ. ಹಾಗೆಯೇ, ಜಾತಿಯ ವಧು ಹಾಗೂ ವರಾನ್ವೇಷಣೆಗೆ ಸುಲಭವಾಗುವಂತೆ ವಧುವರ ಅನ್ವೇಷಣಾ ಕೇಂದ್ರಗಳು ಹಾಗೂ ಸಮಾರಂಭಗಳನ್ನು ನಡೆಸುತ್ತಿದ್ದಾರೆ. ಆದರೆ, ದುಃಖದ ವಿಷಯವೆಂದರೆ, ಸಂಸ್ಕೃತಿಯ ಉಳುವಿಗಾಗಿ ಶ್ರಮಿಸುತ್ತಿರುವ ಹಿರಿಯರು ಹಾಗೂ ಕಿರಿಯರು ಜನಾಂಗದ ಹಿಂದಿರುವ ಸತ್ವವನ್ನೇ ಮರೆತಂದಿದೆ. (ಅಪ್ಪ ತಾತ ಕಲಿಸಿ ಕೊಟ್ಟ ವಿಶ್ವಾಸ, ಭಾಂದವ್ಯ ಹಾಗೂ ಪ್ರೀತಿ)

ಮಕ್ಕಳಿಗೆ ಉತ್ತಮವಾದ ಶಿಕ್ಷಣ ಕೊಡುವುದು, ಅವರನ್ನು ಅವರ ಕಾಲಿನ ಮೇಲೆ ನಿಲ್ಲುವಂತೆ ಮಾಡುವುದು ಪ್ರತಿಯೊಬ್ಬ ತಂದೆ ತಾಯಿಗಳ ಕರ್ತವ್ಯ. ಬೆಳೆದ ಮಕ್ಕಳಿಗೆ ಮದುವೆ ಮಾಡುವವರೆಗೆ ತಮ್ಮ ಜವಾಬ್ದಾರಿ ಮುಗಿಯುವುದಿಲ್ಲ ಎನ್ನುವುದು ಪ್ರತಿಯೊಬ್ಬ ತಂದೆ ತಾಯಿಗಳ ಅನಿಸಿಕೆ. ಜನಾಂಗ ಹಾಗೂ ವಂಶವನ್ನು ಮುಂದುವರಿಸಿಕೊಂಡು ಹೋಗಲು ಮಕ್ಕಳಿಗೆ ಮದುವೆ ಮಾಡಬೇಕೆನ್ನುವುದು ಎಲ್ಲಾ ತಂದೆ ತಾಯಿಯರ ಕನಸು. ಕನಸುಗಳೇನೋ ನನಸಾಗುತ್ತಿವೆ. ಆದರೆ ಈ ಜನಾಂಗದಲ್ಲಿಯ ಮದುವೆ ವ್ಯಾಪಾರವಾಗಿ ಬದಲಾಗುತ್ತಿರುವುದು ತೀರಾ ಶೋಚನೀಯ.

ಇತ್ತೀಚಿನ ವರ್ಷಗಳಲ್ಲಿ ತೊಡಕುಗಳು ಉಂಟಾಗುತ್ತಿರುವುದು ಮದುವೆಯ ವಿಷಯದಲ್ಲಿಯೇ ಎಂದೆನಿಸುತ್ತದೆ. ಮದುವೆ ಹೆಣ್ಣು ಗಂಡನ್ನು ಒಂದು ಗೂಡಿಸುವ ಬದಲು, ಇತರ ಜನಾಂಗಗಳಲ್ಲಿ ನಡೆಯುವಂತೆ ವ್ಯಾಪಾರವಾಗುತ್ತಿದೆ. ವಿದ್ಯೆ ಕಲಿತು ನೌಕರಿ ಮಾಡುವುದು ಒಂದೆಡೆ ಹೊಟ್ಟೆಪಾಡಿಗಾದರೆ, ಮತ್ತೊಂದು ಎಡೆ ದೇಶ ಸೇವೆಯನ್ನು ಮಾಡಿದಂತಾಗುತ್ತದೆ. ಆದರೆ, ತಮ್ಮ ಮಗನ ವಿದ್ಯೆಯನ್ನೇ ಬಂಡವಾಳವಾಗಿಟ್ಟು, ಕೊಂಡು ಹೆತ್ತವರು ವ್ಯಾಪಾರ ನಡೆಸುತ್ತಿದ್ದಾರೆ, ಎಂದು ಸುತ್ತ ಮುತ್ತ ಕಣ್ಣಾಯಿಸಿದರೆ ತಿಳಿಯುವ ವಿಷಯ ದುಃಖದ ಸಂಗತಿಯಾಗಿದೆ.

ತಮ್ಮ ಸೊಸೆಯನ್ನು/ಪತ್ನಿಯನ್ನು ಆರಿಸುವಾಗ, ಅವಳು ತಿಂಗಳಿಗೆ ತರುವ ಸಂಬಳ, ಕಾಫಿ ತೋಟ, ಗದ್ದೆ ಅಥವಾ ಚಿನ್ನದ ಒಡವೆಗಳ ಸೆಟ್ಟಿನ ಮೇಲೆ ಅಳೆಯಲಾಗುತ್ತಿದೆ. ಡಾಕ್ಟರ್, ಇಂಜಿನಿಯರ್, ಸರ್ಕಾರಿ ನೌಕರ ಅಥವಾ ಉಪನ್ಯಾಸಕರೆ ಆದರೇನು?" ಕೈತುಂಬಾ ಹಣ ತರುವ ಹುಡುಗಿ ಮಾತ್ರ ನನ್ನ ಪತ್ನಿಯಾಗಲು ಸಾಧ್ಯ" ಎನ್ನುವ ಬೇಡಿಕೆ ತೀರಾ ಸಾಮಾನ್ಯವಾದ ವಿಷಯವಾಗಿ ಕೇಳಿ ಬರುತ್ತಿದೆ. ವೀಳ್ಯೆ ಶಾಸ್ತ್ರ, ಚಪ್ಪರ ಹಾಗೂ ಮೂಹೂರ್ತ ಸಮಾರಂಭಗಳು ಹೆಣ್ಣಿನ ಅಪ್ಪನ ಜೇಬು ಕಾಲಿ ಮಾಡುವ, ಹುಡುಗನ ಪ್ರತಿಷ್ಠೆಯನ್ನು ಎತ್ತಿ ಹಿಡಿಯುವ ವಿಡಿಯೋ ಚಿತ್ರಗಳಾಗುತ್ತಿವೆ.

ತನ್ನ ಕಾಲಿನ ಮೇಲೆ ತಾನಿಂತ ಸ್ವಾಭಿಮಾನದ ಜೀವನವನ್ನು ಮಾಡಲು ವಿದ್ಯಾವಂತಳಾಗಿ ಕೆಲಸದಲ್ಲಿ ಈ ಜನಾಂಗದ ಹೆಣ್ಣುಗಳಿದ್ದಾರೆ ಎನ್ನುವುದು ಹೆಮ್ಮೆಯ ವಿಷಯ. ಆದರೆ, ಸ್ವಾಭಿಮಾನಕ್ಕೆ ಕೊಟ್ಟ ಬೆಲೆ ಎಷ್ಟು? "ಕೆಲಸ ಮಾಡಿ ಸಂಬಳ ತರುತ್ತೀಯಾದರೆ, ಮದುವೆಯಾಗುತ್ತೇನೆ" ಅಥವಾ "ನೇರವಾದ ಮಾತಿನಲ್ಲಿ ಹೇಳುವುದಾದರೆ" ಕೆಲಸ ಮಾಡುವ ಹುಡುಗಿ ಸಿಕ್ಕಿದ್ದರೆ ಚೆನ್ನಾಗಿತ್ತು. ಅದರಲ್ಲಿಯೂ ಸಾಫ್ಟ್‌ವೇರಿನಲ್ಲಿರುವ ಹುಡಿಗಿಯಾದರೆ ಇನ್ನೂ ಒಳ್ಳೆದ್" ಎನ್ನುವ ಹೃದಗಳಿಗೆ ಏನೆನ್ನೋಣ? ಮಗನ ಬೇಡಿಕೆಯನ್ನು ಮುಗುಳು ನಗೆಯಿಂದ ಸಮ್ಮತಿಸುವ ಹೆತ್ತವರ ಹಾಗೂ ಸಹೋದರಿಯರ ತಪ್ಪಿಲ್ಲವೇ? ("ಓದಿದ ಗೂಡೆಯಾದರೆ, ಎಜುಕೇಟೆಡ್ ಆಗಿದ್ದೆ, ಸಂಬಳ ತಂದದೆ, ಜೊತೆಗೆ ಮನೆಯವರನ್ನು ಲಾಯಕ್ಕ್ ನೋಡಿ ಕೊಂಡದೆ")

ಬೆಂಗಳೂರಿನಲ್ಲಿ ಅಥವಾ ಅಮೇರಿಕಾದಲ್ಲಿದ್ದರೂ, ಜನಾಂಗದ ಅಭಿಮಾನದಿಂದ ಅರೆಭಾಷೆ ಮಾತನಾಡುವ ಯುವಕರು, ಮದುವೆಯ ವಿಷಯದಲ್ಲಿ ಚಿಲ್ಲರೆಯಾಗಿ ವರ್ತಿಸುತ್ತಾರೆ ಏಕೆ? ಒಟ್ಟಿನಲ್ಲಿ ಹೇಳುವುದಾದರೆ, ಮದುವೆಯೆಂಬ ಪ್ರೀತಿಯ ಬಂಧನಕ್ಕೆ ಹಣದ ಗೊಡವೆ ಏಕೆ? ಉತ್ತಮ ಶಿಕ್ಷಣ ಹಾಗೂ ಗುಣವನ್ನು ಹೊಂದಿರುವ ಹಣವಿಲ್ಲದ ಗುಣವಂತೆಯರಿಗೆ ಮದುವೆ ಸಾಧ್ಯವಿಲ್ಲವೇನು? ಖಂಡಿತ ಸಾಧ್ಯವಿದೆ.

ಜನಾಂಗದ ಬಗ್ಗೆ ಯೋಚಿಸುವವರಿಗೆ, ಜನಾಂಗದ ಹಿಂದಿರುವ ಪ್ರೀತಿ ವಿಶ್ವಾಸದ ಬಗ್ಗೆಯೂ ಯೋಚಿಸುವುದು ಮುಖ್ಯವೆನಿಸುವುದಿಲ್ಲವೇನು? ಕೇವಲ ಗೇಂಟಿ ಸೀರೆ ಉಡುವುದರಿಂದ (ಜಾತಿಯ ಅಭಿಮಾನದಿಂದ) ಅಥವಾ ಅರೆಭಾಷೆ ಮಾತನಾಡುವುದರಿಂದ ಜನಾಂಗದ ಬಗ್ಗೆ ಇರುವ ಅಲ್ಪಸ್ವಲ್ಪ ಗೌರವ ಕಾಪಾಡಿದಂತಾಗುವುದಿಲ್ಲವೆ? ಇದರ ಬಗ್ಗೆ ಯೋಚಿಸುವುದು ಯಾರ ಹೊಣೆ? ನಮ್ಮ ಹಿರಿಯರದ್ದೋ ಅಥವಾ ಹೊಸ ಬಾಳಿನ ಕನಸು ಕಾಣುತ್ತಿರುವ ಗೂಡೆಗಳ ಮತ್ತೆ ಹೈದಂಗಳ ಜವಾಬ್ದಾರಿಯೋ? ನೀವೇ ಯೋಚಿಸಿ.

ಯಾವ ವ್ಯಕ್ತಿಗೆ ತನ್ನ ಸಂಸ್ಕೃತಿ ಮತ್ತು ಪರಂಪರೆಯ ಕುರಿತು ಅರಿವು ಹಾಗೂ ಅಭಿಮಾನ ಇರುವುದಿಲ್ಲವೋ ಅಂಥ ಸಮಾಜ ಏಳಿಗೆಯಾಗುವುದು ತುಂಬಾ ಕಷ್ಟ

— ಡಾ ||ಎಂ. ಚಿದಾನಂದಮೂರ್ತಿ

ಡಾ|| ಮಾಸ್ತಿ" ಪ್ರಶಸ್ತಿ ವಿಜೇತ ಹಿರಿಯಾ ಸಂಶೋಧಕ.

ಪಶ್ಚಿಮಕ್ಕಿಂತ ಎತ್ತರದ ಪೂರ್ವದ ಗೋಡೆ- ಆರೋಗ್ಯಕ್ಕೆ ತಡೆ.

ಶುಭ ವಿವಾಹ



ಮೈಸೂರು ನಿವಾಸಿ ಮೊಟ್ಟನ ಲೋಕ ಪಾವನ ಮಗಳು ಸುಷ್ಮಾ, B.E. ಮತ್ತು ಶಿವಮೊಗ್ಗದ ಗುರುಮೂರ್ತಿಯವರ ಪುತ್ರ ಅನಂತಕೃಷ್ಣ, M.Sc., ಇವರಿಗೂ ಮೈಸೂರು ಸರಸ್ವತಿ ಪುರಂನಲ್ಲಿರುವ BMK ಕಲ್ಯಾಣಮಂಟಪದಲ್ಲಿ ದಿನಾಂಕ 1-6-2001 ರಂದು ವಿಜೃಂಭಣೆಯಿಂದ ಕಳೆಯಿತು.

ಸೋಮವಾರ ಪೇಟೆ ತಾಲೂಕು ಸೀಗೆ ಹೊಸೂರು ಗ್ರಾಮದ ಪಟ್ಟಡ ಕಾವೇರಿಯಪ್ಪನವರ ಮಗ ಪ್ರಕಾಶನಿಗೂ ಮತ್ತು ಬಲ್ಲಮಾವಟಿ ಗ್ರಾಮದ ಎಡಿಕೇರಿ ದಿ|| ಗಣಪತಿಯವರ ಪುತ್ರಿ ಚಂದ್ರಕಲಾಳಿಗೂ ದಿನಾಂಕ4-6-2001 ರಂದು ವರನ ಸ್ವಗೃಹದಲ್ಲಿ ಶಾಸ್ತ್ರೋಕ್ತವಾಗಿ ದಂಪತಿ ವಿವಾಹ ನಡೆಯಿತು.

ಮದೆ ಗ್ರಾಮದ ಮುದ್ಯನ ದಿ|| ಐಯಣ್ಣನವರ ಪುತ್ರ ಜಗದೀಶ್‌ನಿಗೂ ಮತ್ತು ಕರಡಿಗೋಡು ಗ್ರಾಮದ ಪೂಜಾರಿರ ಬೋಜಪ್ಪನವರ ಪುತ್ರಿ ನಳಿನಿಗೂ ದಿನಾಂಕ8-6-2001 ರಂದು ಮಡಿಕೇರಿ ಯಲ್ಲಿರುವ ಕೆಳಗಿನ ಗೌಡ ಸಮಾಜ ಕಲ್ಯಾಣ ಮಂಟಪದಲ್ಲಿ ಬಾರಿ ವಿಜೃಂಭಣೆಯಿಂದ ನಡೆಯಿತು.

ತಿದ್ದುಪಡಿ

ಕೊಡುಗು ಸಂಗಾತಿ ಸಂಪುಟ 5, ಸಂಚಿಕೆ 10ರ ಪುಟ 2ರಲ್ಲಿ "ಶುಭ ವಿವಾಹ" ಶೀರ್ಷಿಕೆಯಲ್ಲಿ ನಂ. 6, ಕೆದಮುಳ್ಳೂರು ಗ್ರಾಮದ ಕೊರಿಯಾರ್ ಅಪ್ಪಣನವರ ಮಗಳು ಎನ್ನುವುದನ್ನು ಕೊರಿಯಾರ್ ಆನಂದನವರ ಮಗಳು ಕವಿತಳೆಂದು ಸಹೃದಯ ಓದುಗರು ಓದಿಕೊಳ್ಳುವುದು. ದೋಷಕ್ಕೆ ವ್ಯಥೆ ಇ ದೆ.

— ಸಂಪಾದಕ

ಕುಯ್ಯಂಗೇರಿಗ್ರಾಮದ ಚಿಲ್ಲನ ಗೋಪಾಲನವರ ಮಗ ಅನಂತನಿಗೂ ಮತ್ತು ಕೇಕಡ ಬೆಳ್ಯಪ್ಪನವರ ಪುತ್ರಿ ಚಂದ್ರಕಾಂತಿಯ ಶುಭವಿವಾಹವು ದಿನಾಂಕ 10-6-2001 ರಲ್ಲಿ ಮಡಿಕೇರಿಯಲ್ಲಿರುವ ಮೇಲಿನ ಗೌಡ ಸಮಾಜ ಮಂಟಪದಲ್ಲಿ ನಡೆಯಿತೆಂದು ತಿಳಿದು ಬಂದಿದೆ.

ಮೂಲತ ಮಡಿಕೇರಿ ತಾಲೂಕ ಅವಂದೂರು ಗ್ರಾಮದ ಹಾಲಿ ಬೆಂಗಳೂರು ನಿವಾಸಿ ಪೊನ್ನಚನ ತಮ್ಮಯ್ಯನವರ ಮಗಳು ಶುಲಕ್ಷ್ಮಿಗೂ ಮತ್ತು ಸುಳ್ಯ ಕಸಬಾ ಗ್ರಾಮದ ಕಾಯರ್ತೋಡಿ ನಡುಮುಟ್ಲು ಬಿಳಿಯಾರು ರಾಮಣ್ಣ ಗೌಡರ ಪುತ್ರ ರವಿಪ್ರಕಾಶ್‌ಗೂ ದಿನಾಂಕ 13-6-2001 ರಂದು ಸುಳ್ಯದ ಮಂಜುಶ್ರೀ ಕಲಾಮಂದಿರದಲ್ಲಿ ಬಾರೀ ವಿಜೃಂಭಣೆಯಿಂದ ನಡೆಯಿತು.

ಮೃತನಿಗೆ ಆಡಂಬರದ ಔಚಿತ್ಯ ಎಕೆ ?

ಭೂಮಿ ತಾಯಿಯ ಮಡಲಿನಲ್ಲಿ ಬದುಕಿರುವಷ್ಟು ದಿನ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ಕಷ್ಟನಷ್ಟಗಳ ಸರಮಾಲೆಗಳನ್ನು ಎದುರಿಸಿ ನೊಂದು ಬೆಂದು ಯಾಂತ್ರಿಕ ಜೀವನದ ಜೊತೆಗೆ ಕಾಯಿಲೆ ಕಸಾಯಿಲೆಗಳಿಂದಲೊ. ಅಥವಾ ಅನೀರೀಕ್ಷಿತವಾಗಿ ಅಂತಿಮ ಶಾಶ್ವತ ಚಿರನಿದ್ರೆ ಮಾಡುವ ಮುಖೇನ ಪ್ರಾಣ ತ್ಯಾಗ ಮಾಡುತ್ತಾನೆ.

ಈ ಸಮಯದಲ್ಲಿ ಮನೆಯವರಿಗೆ, ನೆಂಟರಿಗೆ, ಬಂದು ಹಿತೈಷಿಗಳಿಗೆ ದುಃಖವಾಗುವುದು ಸಹಜ, ಆದರೆ ಅವರೆಲ್ಲ ಸೇರಿಕೊಂಡು ಶಾಶ್ವತವಾಗಿ ಚಿರನಿದ್ರೆಯಲ್ಲಿರುವ ಮೃತ ಶರೀರ ವನ್ನು ಚಟ್ಟದಲ್ಲೊ, ವಾಹನದಲ್ಲೊ ಮಲಗಿಸಿ ಸಿಂಗಾರಗೊಳಿಸಿ ಹೂ, ಹಾರ ಹಾಕಿ ವಾಲಗ ಬ್ಯಾಂಡು, ಅಕ್ಕಿ, ದುಡ್ಡು ದಾರಿಯಲ್ಲಿ ಬಿಸಾಡುತ್ತಾ ರುದ್ರ ಭೂಮಿಗೆ ಕರೆದೊಯ್ಯುವ ನೆಪದಲ್ಲಿ ಪ್ರಾಣ ತ್ಯಾಗವಾದ ಶವಕ್ಕೆ ಯಾತ್ರೆ ಮಾಡಿಸುತ್ತಾರೆ. ಇದರಿಂದ ಸತ್ತವರಿಗೇನು ಪ್ರಯೋಜನ. ಹೋಗಲಿ ಆ ಸತ್ತ ವ್ಯಕ್ತಿಗೆ ಇಷ್ಟೊಂದು ಅದ್ದೂರಿಯಾಗಿ ಅಲಂಕಾರ ಮಾಡಿದ್ದಾರೆ ಎಂಬ ಅರಿವು ಬರುತ್ತದೆಯೇ? ಮನಷ್ಯ ಬದುಕಿದ್ದಾಗ ಮನೆಯವರು, ಬಂದುಗಳು ಹಿತೈಷಿಗಳು ಚೆನ್ನಾಗಿ ನೋಡಿಕೊಂಡರೆ ಸಾಕು, ಅದು ಬಿಟ್ಟು ಸತ್ತನಂತರ ಅದ್ದೂರಿಯಾಗಿ ದೂಪೆಯೆಂಬ ಚಪ್ಪರಕ್ಕೆ ಸಿಂಗಾರ ಮಾಡಿ ಸಹಿ ತಿಂಡಿ, ತಿನಿಸು ಮದ್ಯವನ್ನಿಟ್ಟು, ಅವರ ಹೆಸರಿನಲ್ಲಿ ಅಮಲೇರಿಸಿ ಅವಹೇಳನ ಮಾಡುವುದು ಸರಿಯೆ? ಅದಿರಲಿ ಒಂಬತ್ತನೆ ಅಥವಾ ಹನ್ನೆರಡನೆ ದಿನದಲ್ಲಿ ತಿಥಿ ಎಂಬ ಮರ್ಮಾಕಾಂಡದ ಹೆಸರಿನಲ್ಲಿ ಆಡಂಬರದಿಂದ ನಾವು ಮಾಡುತ್ತಿರುವ ಮಾಂಸ ಬೋಜನ, ಮತ್ತೇರಿಸುವಷ್ಟು ಮಧ್ಯಾಪಾನ ಮಾಡಿ ತೇಗುವಷ್ಟು ತಿಂಡಿ ಪದಾರ್ಥಗಳು ಇದರ ಔಚಿತ್ಯವಾದರೂ ಏಕೆ. ಸರ್ವಸ್ವ ಕಲುಷಿತ, ಕಲ್ಮಶ, ಎಲ್ಲವನ್ನು ಶಾಂತ ಭಾವನೆಯೊಂದಿಗೆ ಹರಿಯುವ ಗಂಗಾಮಾತೆಯ ಜಲಾಧಾರೆಯಲ್ಲಿ ಹರಿಯಬಿಡುವ ಮಾನುವ ಶರೀರಕ್ಕೆ ಇದರ ಅವಶ್ಯಕತೆ ಇದೆಯಾ? ಪ್ರತಿಯೊಬ್ಬರೂ ಸ್ವಲ್ಪ ಯೋಚಿಸಿ ಅನಾವಶ್ಯಕವಾಗಿ ದುಂದುವೆಚ್ಚಮಾಡಿ ಚಿರ ನಿದ್ರೆಯಲ್ಲಿ ಜಲಧಾರೆಯೊಂದಿಗೆ ಬೆರೆತು ಹೋಗುವ ಮಾನವ ಶರೀರಕ್ಕೆ ಶಾಂತಿ ಎಂಬುದು ಸಿಗುವುದೇ ಜೀವಂತವಾಗಿರುವಾಗ ಪರರಿಗೆ ಉಪಕಾರ ಮಾಡುವ ಅವಕಾಶ ಇರುವ ಈ ನರಜನ್ಮಕ್ಕೆ ಈ ರೀತಿಯ ದುಂದು ವೆಚ್ಚದ ಪುರಸ್ಕಾರದ ಅವಶ್ಯಕತೆ ಇದೆಯಾ, ನಾವೆಲ್ಲಾ ಯೋಚಿಸೋಣವೆ?

— ಕೊಂಬನ ನಂಜಪ್ಪ, ಪೊನ್ನಪ್ಪ. ಕುದುರೆಮುಖ

ದಕ್ಷಿಣಕ್ಕಿಂತ ಎತ್ತರದ ಉತ್ತರದ ಗೋಡೆ- ಐಶ್ವರ್ಯಕ್ಕೆ ತಡೆ.

ಕಾವೇರಿ ನ್ಯಾಷನಲ್ ಪಬ್ಲಿಕ್ ಸ್ಕೂಲ್

ಕೊಡಗು ಎಜುಕೇಶನಲ್ ಅಕಾಡೆಮಿಯವರ ಕೊಡುಗೆ. ಮೊಟ್ಟಮೊದಲ ದಿಟ್ಟ ಹೆಜ್ಜೆ ಕಾವೇರಿ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಇದೇ ಜೂನ್ ಒಂದರಿಂದ ಪ್ರಾರಂಭವಾಗಿದೆ. ಇದರ ಪ್ರಯುಕ್ತ K.E.A ಹಾಗೂ KNPSನ ಉದ್ಘಾಟನಾ ಸಮಾರಂಭವನ್ನು ಜೂನ್ 9ನೇ ತಾರೀಕು 2001ರಂದು ಬೆಂಗಳೂರಿನ ಕೊಡಗು ಗೌಡ ಸಮಾಜದಲ್ಲಿ ಏರ್ಪಡಿಸಲಾಗಿತ್ತು.

ಸಂಜೆ ಮೂರು ಗಂಟೆಯಿಂದ ಕಾರ್ಯಕರ್ತರು ಸಂತೋಷ ಸಂಭ್ರಮದಿಂದ ಅತ್ತಿತ್ತಾ ಓಡಾಡುತ್ತಾ ಅತಿಥಿಗಳನ್ನು ಸ್ವಾಗತಿಸಿ ಸತ್ಕರಿಸಿಲು ಕಾತರರಾಗಿದ್ದರು. ಬಂದವರಿಗಾಗಿ ಕಾಫಿ, ಟೀ, ಬಿಸ್ಕೇಟುಗಳ ವ್ಯವಸ್ತೆ ಮಾಡಲಾಗಿತ್ತು. ಮುಖ್ಯ ಅತಿಥಿಗಳಾಗಿ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಎನ್. ಡಿ. ವೆಂಕಟೇಶರವರು, U.A.S. (GKVK) ಸರ್ಕಾರಿ ಕೃಷಿ ವಿಜ್ಞಾನ ಕೇಂದ್ರದ ನಿವೃತ್ತ ವೈಸ್ ಚಾನ್ಸಲರ್ ಡಾ|| ಕೆ. ವಿ. ದೇವರಾಜ್, ಸುಳ್ಯದ ಶಿಲ್ಪಿ ಅಥವಾ ಸುಯದ ಭೀಷ್ಮ ಎಂದೇ ಪ್ರಸಿದ್ದರಾದ ಕುರುಂಜಿ ವೆಂಕಟರಮಣ ಗೌಡರು, ಕೊಡಗು ಮತ್ತು ದ. ಕನ್ನಡ ಗೌಡ ಸಮಾಜದ ಅಧ್ಯಕ್ಷರಾದ ದಂಬೆಕೋಡಿ ಆನಂದರವರು ಮತ್ತು ಕೊಡಗು ಗೌಡ ಸಮಾಜದ ಹಾಲಿ ಅಧ್ಯಕ್ಷರೂ, ಹೆಸರಾಂತ ಉದ್ಯಮಿಗಳೂ ಆದ ಅಮ್ಮವ್ವನ ವಾಸುರವರು ಆಗಮಿಸಿದ್ದರು. ಅತಿಥಿ ಸತ್ಕಾರದ ನಂತರ ಸಮಾರಂಭವು ಬಿಟ್ಟೀರ ಚೋಂದವ್ವನವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಕೊಡಗು ಎಜುಕೇಶನಲ್ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಗುಡ್ಡೇರ ಚಿನ್ನಯ್ಯನವರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷೆ ವಾಸಂತಿಯವರು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡರು. ಇವರು ಅತಿಥಿಗಳಿಗೆ ಸ್ವಾಗತ ಬಯಸಿದರು. (ಸ್ವಾಗತ ಭಾಷಣದ ವಿವರವನ್ನು ಮುಂದಿನ ಸಂಚಿಕೆಯಲ್ಲಿ ನೀಡಲಾಗುವುದು) ನಂತರ ಹಿರಿಯರೂ ಸಂಸ್ಥೆಯ ಸಲಹೆಗಾರರು ಆದ ಕಾವೇರಿ ಮನೆ ಬೋಜಪ್ಪನವರು ಅತಿಥಿಗಳ ಪರಿಚಯವನ್ನು ಸಭೆಗೆ ಮಾಡಿಸಿದರು. ನಂತರ ಬಂದಿದ್ದ ಅತಿಥಿಗಳು ಜ್ಯೋತಿ ಬೆಳಗುವುದರ ಮೂಲಕ ಸಂಸ್ಥೆಗೂ, ವಿದ್ಯಾಶಾಲೆಗೂ ಶುಭ ಕೋರಿದರು. ತದನಂತರ ಸಂಸ್ಥೆಯ ರೂವಾರಿ ಮೊಟ್ಟನ ರವಿಕುಮಾರ್‌ರವರು ಈ ಸಂಸ್ಥೆಯ (KEA) ಧ್ಯೇಯೋದ್ದೇಶಗಳ ಬಗ್ಗೆ ನೆರೆದವರಿಗೂ ಅತಿಥಿಗಳಿಗೂ ಮನವರಿಕೆ ಮಾಡಿಕೊಟ್ಟರು. ಮುಖ್ಯ ಅತಿಥಿಗಳು ತಮ್ಮ ತಮ್ಮ ವೃತ್ತಿಗನುಸಾರ ಅನೇಕ ಉಪಯುಕ್ತ ಹಿತನುಡಿಗಳನ್ನೂ, ತಿಳುವಳಿಕೆಯನ್ನು ಹೇಳಿದರು. ದಂಬೆಕೊಡಿ ಆನಂದರವರು ಮಾತನಾಡುತ್ತಾ ತಮ್ಮ ಸಮಾಜದವರು ಹೊಸದಾಗಿ ಕೊಂಡುಕೊಂಡ ಜಾಗವಿದೆ. ಅದನ್ನು ಉಪಯೋಗಿಸಿಕೊಂಡು ಇನ್ನೂ ಹೆಚ್ಚಿನ ಬೆಳವಣಿಗೆಯನ್ನು ಮಾಡಬಹುದು ಎಂದು ಹೇಳಿದರು. ಕುರುಂಜಿಯವರು ಮಾತನಾಡುತ್ತಾ ಜನಾಂಗದ ಶ್ರೀಮಂತರು ಉದಾರಿಗಳಾಗಿ ಮುಂದೆ ಬರಬೇಕು ಎಂದು ಹೇಳುತ್ತಾ ಸಂಸ್ಥೆಗೆ ಸ್ಥಳದಲ್ಲೆ 10,000ರೂ. ನಗದುಹಣವನ್ನು ಡೊನೆಶನ್ ರೂಪದಲ್ಲಿ ನೀಡಿದರು. ಅಲ್ಲದೆ ತಮ್ಮ ವಿದ್ಯಾಸಂಸ್ಥೆಯ (KVG) ಪ್ರಾರಂಭದ ದಿನಗಳ ಸಿಹಿ, ಕಹಿಗಳನ್ನು ಹಂಚಿಕೊಂಡರು ಮತ್ತು K.E.A ಸಂಸ್ಥೆ ಹೊರತಂದಿರುವ KNPS ನರ್ಸರಿಯಿಂದ ಪ್ರಾರಂಭಿಸುವುದರಿಂದ ಮುಂದೇ ಯಾವುದೇ ರೀತಿಯ ತೊಂದರೆ ಇಲ್ಲದೆ ಈ ಸಂಸ್ಥೆಯು ಹಾಕಿ ಕೊಂಡಿರುವ ಯೋಜನೆಯಲ್ಲಿ ಯಶಸ್ಸು ಗಳಿಸುವುದೆಂದು ಶುಭ ಹಾರೈಸಿದರು. KEAಯ ಅಧ್ಯಕ್ಷರಾದ ಗುಡ್ಡೆ ಚಿನ್ನಯ್ಯನವರ ಸಂದೇಶವನ್ನು, ಕುದುಪಜೆ ಗಣಪತಿಯವರು ಸಭೆಗೆ ಓದಿ ಹೇಳಿದರು. ನಾವು ನಿರೀಕ್ಷಿಸಿದಷ್ಟು ಅಲ್ಲದಿದ್ದರೂ 300ಕ್ಕೂ ಹೆಚ್ಚು ಜನರು ಬಂದು ಸಹಕರಿಸಿದರು. ಕೊಡಗು ಸಂಗಾತಿಯ ಜನಕ ಪಟ್ಟಡ ಪ್ರಭಾಕರರೂ ಸೇರಿದಂತೆ ಅನೇಕ ಜನಾಂಗದ ಬಂಧುಗಳು ಬೆಂಗಳೂರೇತರ ಸ್ಥಳಗಳಿಂದ ಆಗಮಿಸಿದ್ದರು. ಈ ಸುಂದರ ಸಂಜೆಯ ಕ್ಷಣಗಳನ್ನು ನಾವೆಂದಿಗೂ ಮರೆಯಲಾರೆವು. ಕೊನೆಯಲ್ಲಿ ನಂಗಾರು ನಿಂಗರಾಜರು ವಂದನಾರ್ಪಣೆ ಮಾಡಿದರು. ದೇಶ ಭಕ್ತಿಗೀತೆಯಾದ ಜನಗಣಮನ... ಹಾಡುವುದರೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

ಕೊಡಗು ಎಜುಕೇಶನಲ್ ಅಕಾಡೆಮಿ (ರಿ.)

2001ರ ಫೆಬ್ರವರಿ 6ರಂದು ಅಧಿಕೃತವಾಗಿ ಜನ್ಮತಾಳಿದ ಕೊಡಗು ಎಜುಕೇಶನಲ್ ಅಕಾಡೆಮಿ (KEA) 5 ತಿಂಗಳು ತುಂಬಿ 6ರನೇ ತಿಂಗಳಿಗೆ ಪಾದಾರ್ಪಣೆ ಮಾಡುತ್ತಿದೆ. ಈ ಸಂಸ್ಥೆಯ ಬಗ್ಗೆ ಈಗಾಗಲೇ ಮೈಸೂರಿನಿಂದ ತಡಿಯಪ್ಪನ ಕುಮಾರ ಜಯರವರು ಸಂಗಾತಿಯಲ್ಲಿ ವರದಿ ಮಾಡಿರುವರು.

ಪ್ರತಿಭಾವಂತ ವಕೀಲರು ಸಮಾಜದ ಬಗ್ಗೆ ಕಳಕಳಿಯನ್ನು ಹೊಂದಿದವರೂ ಆದ ಮೊಟ್ಟನ ರವಿಕುಮಾರರು ವಿದ್ಯಾಸಂಸ್ಥೆಯನ್ನು ತೆರೆಯುವ ಆಲೋಚನೆಯನ್ನು ಮುಂದಿಟ್ಟಾಗ ಕೊಡಗು ಗೌಡ ಸಮಾಜದ ಮಾಜಿ ಅಧ್ಯಕ್ಷರಾದ ತೋಟಂಬೈಲು ಬೆಳ್ಳಿಯಪ್ಪನವರು, ಹಾಲಿ ಗೌಡ ಸಮಾಜದ ಅಧ್ಯಕ್ಷರಾದ ಅಮ್ಮವ್ವನ ವಾಸುರವರು ಸೇರಿಂದತೆ ಸಮಾಜದ ಅನೇಕ ಗಣ್ಯವ್ಯಕ್ತಿಗಳು ಸೇರಿ ಒಮ್ಮನಸ್ಸಿನಿಂದ ಈ ಸೂಚನೆಯನ್ನು ಅನುಮೋದಿಸಿದರು. ಅಂತೆಯೇ ಈ K.E.Aಯ ಉದಯವಾಯಿತು.

ಈ ಸಂಸ್ಥೆಯ ಮುಖ್ಯ ಉದ್ದೇಶ, ವಿದ್ಯಾಸಂಸ್ಥೆಗಳನ್ನು ಬೆಳೆಸುವುದು. (to promote education, Science, literature and also sports & maintain libraries) ಉದಾ : ಈ ಸಂಸ್ಥೆಯ ಅಡಿಯಲ್ಲಿ Schools, Colleges,

ಉತ್ತರದಲ್ಲಿ ವಕ್ರವಾದ ಗೋಡೆ - ಹೆಂಗಸರಿಗೆ, ಸಿರಿಗೆ, ಪೀಡೆ.

19ನೇ ಪುಟಕ್ಕೆ

ವಾಂಟೆಡ್ ಮಿಸ್ಟರ್ ರಾಜು : [ನಮ್ಮ ರಾಜು ಮಂಜ ಕಥೆ]

ಲೇಖನ : ಶಂಕರನ ಬಸಪ್ಪ

ಧಾರಾವಾಹಿ - 34

ಬೋಪಜ್ಜನ ಮನೆಲಿ ರಾತ್ರಿ ತುಂಬಾ ಹೊತ್ ಎಲ್ಲಾ ಕುದ್ದ್‌ಕಂಡ್ ಮಾತಾಡಿಕಂಡೊ. ಒಂದ್‌ಕಡೆ ಮಂಜ ರಾಜು ಮೈಸೂರ್‌ಲಿ ಉಟ್ಟುತ್ತೇಳ್ಪ ಗ್ಯಾರೆಂಟಿ ಆಗಿತ್. ತಂಗೆನ ಮದ್ವೆ ಗಿರುವ ಹಣನ, ಚಿನ್ನಾಭರಣ, ಬಟ್ಟೆಬರೆಗಳ ಎಲ್ಲನೂ ಅದೆಂಗೋ ಸಂಪಾದನೆ ಮಾಡಿ ತನ್ನ ಫ್ರೆಂಡ್ ಕೈಲಿ ಕಳ್ಸಿ ಕೊಟ್ಟುಟಲ್ಲಾ. ಇಂವ ಇಷ್ಟ್ ಬೇಗ ಇಷ್ಟೊಂದ್ ಹಣನ ಹೆಂಗೆ ಸಂಪಾದನೆ ಮಾಡ್ತ್? ಇಂವಂಗೆ ಅಷ್ಟೊಂದು ಜನ ವೈರಿಗ ಇಷ್ಟ್ ಬೇಗ ಅದೆಂಗೆ ಹುಟ್ಟಿಕಂಡೋ ? ಇಂವ ಯಾಕೆ ದಿನಕೊಂದ್ ವೇಷನ ಹಾಕಂಡ್ ತಿರ್‌ಗಾಡ್ತ್? ಈಗಳೂ ಇಂವ ಜೀವ ಭಯಂದ ತಂಗೆನ ಮದ್ವೆಗೆ ಬಂದರೂ ಆದುಲ್ಲೆ. ಬಾರದೆ ಇರುಕ್ಕೂ ಆದ್‌ಲೆಲ್ಲಾ? ಛೆ!ಛೆ! ಎಂತಹ ಒಂದ್ ಅಚ್ಚರಿ ಸಂಗತಿ ಇದ್? ನನ್ನ ಮಂಜನ ಈಗ ನಾವು ಹೆಂಗಪ್ಪಾ ಉಳ್ಸಿಕಂಬೋದೂ? ತಾ ಎಲ್ಲವೂ ಒಟ್ಟಿಗೆ ಇದೊಂದೇ ವಿಚಾರನ ಚರ್ಚೆ ಮಾಡಿಕಂಡೇ ಕುದ್ದು ಕಂಡೊ ಹೊರತು ಇದಕ್ಕೆ ಸರಿಯಾದ ಪರಿಹಾರನ ಯಾರ ಕೈಯಿಂದಲೂ ಕಂಡ್ ಹಿಡಿಯಕೆ ಆತ್‌ಲೆ.

ಆದ್ರೇ ರಾಜುಮಂಜನ ಫ್ರೆಂಡ್ Mr. ಮಹೇಂದ್ರಪಾಲ್ ಮಾತ್ರ ಇದರ ಹೆಚ್ಚಿಗೆ ತಲೆಗೆ ಹಚ್ಚಿಕಣದೆ ರಾತ್ರಿ ಊಟ ಆದಂಗೆ ಹೋಗಿ ಮಲಗಿ ನಿದ್ರೆ ಹೊಡಿತಿತ್. ಆದ್ರೇ ಬೆಳಗ್ಗಿನ ಜಾವ 4½ ಗಂಟೆದ್ ಕೋಳಿ ಕೂಗಿದ ಸದ್ದ್ ಕೇಳಿ ತಂಗೆ ಶೋಭಂಗೆ ಎಚ್ಚರ ಆಗಿಹೋತ್. ರಾತ್ರಿ ಎಲ್ಲಾ ನನ್ನ ಅಣ್ಣಯ್ಯಂಗೆ ಏನ್ ಆಪತ್ ಕಾದುಟ್ಟೋತ್ತೇಳಿ ತಲೆ ಕೆಡ್ಸಿಕಂಡಿತ್. ಹಂಗಾಗಿ ಗುಡ್ಡಕ್ಕೆ (ಸ್ನಾನದ ಮನೆ) ಹೋಗಿ ಎರಡ್ ಬಿಂದಿಗೆ ನೀರ್‌ನ ತಲೆ ಮೇಲೆ ಹೊಯ್ಕಂಡ್ ಸ್ನಾನ ಮಾಡಿ ಬಂದ್ ನೆಲ್ಲಕ್ಕಿ ಮುಂದೆ ಬಂದ್ ನಿಂತ್ ಕಂಡತ್.

ಸ್ವಾಮಿ ಗುರುಕಾರಣವನೆ ನನ್ನ ಅಣ್ಣಯ್ಯ ಇನ್ನೂ ಬಾತ್ಲೆ. ಅಂವ ತೊಂದರೆ ಆಗದಂಗೆ ಮನೆಗೆ ಬರೋಕ್ಕು. ಅಂವನ ಜೀವಕ್ಕೆ ಏನೂ ಆಪತ್ ಆಗದಂಗೆ ನೀನ್ ಕಾಪಾಡೋಕುತ್ತೇಳಿ ಕಣ್ಣ್ ಮುಚ್ಚಿಕಂಡ್ ತನ್ನ ಮನ್ಸ್‌ಲಿರುವ ದುಃಖನ ತಡ್‌ಕಂಡ್ ಕೈಮುಗ್ದ್ ಬೇಡಿಕಂಡ್ ಆ ದೇವರಿಗೆ ಅಡ್ಡಬೀತ್.

ಬೋಪಜ್ಜಂಗೆ ಬೆಳಿಗ್ಗೆ 5½ ಗಂಟೆಗೇನೆ ಎದ್ದ್ ಕುದ್ದ್‌ಕಂಡ್ ಒಂದ್ ಸರ್ತಿ ಎಲೆ ಅಡಿಕೆನ ಗುದ್ದಿ ಕಂಡ್ ಬಾಯಿಗೆ ಹಾಕಿಕಂಬೋ ಅಭ್ಯಾಸ. ಇವು ಎದ್ದ್ ಎಲೆ ಅಡಿಕೆನ ಕಲ್ಲ್‌ಂದ ಕುಟ್ಟಿಕಂಡಿರಿಕಾಕನ ಒಬ್ಬೊಬ್ಬಂಗೆ ನಿದ್ರೆಂದ ಎಚ್ಚರ ಆಗಿಹೋತ್. ಇಂದ್ ಮಗಳು ಶೋಭನ ಮದ್ವೆ ಚಪ್ಪರದ ದಿನ. ಸೂರ್ಯನ ಕೆಂಪು ಕಿರಣ ಮೂಡದಿಕ್ಕ್‌ಲಿ ಕಾಂಬಕೆ ಮೊದ್ಲೇ ಕಾಗೆ, ಕೋಗಿಲೆ ಚೊಂಬುಕ ಹಕ್ಕಿಗಳ ಉದಯರಾಗದ ಹಾಡ್‌ಗ ಶುರು ಆಗಿತ್. ತಾಳತ್‌ಮಾನಿ ಕೆಳಮನೆ ಬೋಪಜ್ಜನ ಮನೆಯವುಕೆ, ಸಂಸಾರದವುಕೆಲ್ಲಾ, ದೊಡ್ಡವುಕೆ ಸಣ್ಣವುಕೆಲ್ಲಾ, ಇಂದ್ ಒಂದ್ ತರದ ಸಂತೋಷ, ಹುಮ್ಮಸ್‌ಂದ ಬೇಗ ಬೇಗ ನಿದ್ದೆಂದ ಎದ್ದ್ ಬುಟ್ಟೋ. ಎಲ್ಲವೂ ಬೇಗ ಬೇಗ ಮಾಮೂಲು ಕರ್ಮಗಳ ಮುಗ್ಸಿಕಂಡ್ ಹತ್ರ ಇದ್ದ ಮನೆವು ಒಬ್ಬೊಬ್ಬನೇ ಬೋಪಜ್ಜನ ಮದ್ವೆ ಮನೆಗೆ ಬಂದ್ ಸೇರಿಕಂಡೊ.

ನಮ್ಮ ಊರ್‌ಲೆಲ್ಲಾ ಹಿಂಗೇ ತಾನೆ. ಮನೆಯವರ ಮದ್ವೆ ಜಂಬಾರತ್ತೇಳಿರೆ ಅಲ್ಲಿ ಹಬ್ಬದ ವಾತಾವರಣ ಏರ್ಪಟ್ಟಿದೆ. ಯಾರಿಗೂ ಬೇರೆ ಬೇರೆ ಆಗಿ ಕೆಲಸ ಕಾರ್ಯಗಳ ಹೇಳಕ್ಕುತ್ತೇಳಿ ಇಲ್ಲೆ. ಎಲ್ಲಾ ಒಬ್ಬೊಂದೊಬ್ಬ ಕೂಡ್ಯಾಡಿಕಂಡ್ ಮದ್ವೆ ಮನೆಯವರ ಕೆಲಸ ಕಾರ್ಯಗಳಲ್ಲಿ ಸಹಾಯ ಮಾಡುತಿದ್ದವೆ. ಇಲೆಲ್ಲಾ ಬಡವರು, ಶ್ರೀಮಂತರ್‌ತ್ತೇಳುವ ಬಿನ್ನಾಭಿಪ್ರಾಯ, ಮೇಲು ಕೀಳುತ್ತೇಳುವ ಭಾವನೆ ಇನ್ನೂ ಅಷ್ಟಾಗಿ ಸುರು ಆತ್ಲೆ. ಎಲ್ಲಾ ಪ್ರೀತಿ, ವಿಶ್ವಾಸ, ಸಮ್ಮಂದಗಳಿಗೆ ಮರ್ಯಾದಿ ಕೊಟ್ಟವೆ. ಅಂಕಾರ, ಹಣದ ಸೊಕ್ಕು ದೊಡ್ಡಸ್ತಿಕೆ ಅಷ್ಟಾಗಿ ಬೆಳ್ತ್‌ಲೆ.

ಒಂದ್ ಸಮಯ ನಮ್ಮ ಊರ್‌ಲಿ ಯಾವನಾದ್ರೂ ಒಬ್ಬ ಹಣವಂತ ಬಲಸಾಲಿ ಏನಾದ್ರೂ ಸ್ವಲ್ಪ ಸೊಕ್ಕ್‌ಲಿ (ಅಂಕಾರಲಿ) ಮೆರ್ದ್‌ರೆ ಅಲ್ಲಿಗೆ ಆಗೇ ಹೋತ್. ಆಮೇಲೆ ಆ ಮನುಷ್ಯನ ನಮ್ಮ ಊರ್‌ಜನ ಕಡೆಗಣಿಸಿ ಬುಟ್ಟವೆ. ಆಮೇಲೆ ಅಂವನ ಯಾವುದಾದ್ರೂ ಒಳ್ಳೆ ಕಾರ್‌ಬಾರ್‌ಗಳಿಗೆ ಜನರ ಆಮಂತ್ರಣ ಮಾಡಿರೆ ಬರೇ ಕಾಟಚಾರಕ್ಕೆ ಅಲ್ಲಿಗೆ ಹೋಗಿಬಂದವೆ. ಅಂತಹ ಕಡೆ ಎಲ್ಲಾ ಹಬ್ಬದ ವಾತಾವರಣ ಆಗಲೀ, ಮನಪೂರ್ವಕವಾದ ಪ್ರೀತಿ, ಸಂತೋಸ ಆಗಲೀ ಕಾಂಬೊದಿಲ್ಲೆ. ಬರೇ ತೋರಿಕೆಗೋಸ್ಕರ ಆ ಜಂಬಾರಕ್ಕೆ ಹೋಗಿ ಮುಖ ತೋರ್ಸಿ ಲಾಯಕಲಿ ತಿಂದ್ ಬಂದವೆ.

ಈಗ ಬೋಪಜ್ಜನ ಮದ್ವೆ ಮನೆಗೆ ಒಂದೊಂದೇ ರಂಗ್ ಏರಿಕೆ ಶುರ್‌ಆತ್. ಬೆಳಿಗ್ಗೆನೆ ಸಣ್ಣ ಸಣ್ಣ ಹೆಣ್ಣ್ ಗೂಡೆಗ ಬಂದ್, ಅಂಗಳನ, ಮನೆ, ರಸ್ತೆ ಕಡೆವರ್ಗೂ ಕಸಗುಡ್ಸಿ ಕ್ಲೀನ್ ಮಾಡಿಕೆ ಶುರುಮಾಡ್ದೊ. ಬಾಕಿ ಇದ್ದ ನಾಲ್ಕು ಗೂಡೆಗ ಹಟ್ಟಿಗೆ ಹೋಗಿ 4 ಕುಕ್ಕೆ ತುಂಬಾ ಸೆಗಣೆನ ತುಂಬಿಕಂಡ್ ಬಂದ್ ಮನೆ ಅಂಗಳ, ಚಪ್ಪರದ ಕೆಳಗೆ ದಾರಿಕಡೆ ಎಲ್ಲಾ ಸೆಗಣೆನ ನೀರ್‌ಮಾಡಿಕಂಡ್ ಚೀಪೆಂದ ಸಾರ್ಸಿಕೆ ಶುರುಮಾಡ್ದೊ. ಮನೆ ಎದುರುಗಡೆ ಅಂಗಳಲಿ ನಾಮುಂದೆ ತಾಮುಂದೆ ತಾ ರಂಗೋಲಿಗಳ ಹಾಕಿದೊ.

ಕಳ್ದ ಸಂಚಿಕೆಂದ ......

ರಾಜು ಮಂಜನ ಪೊಟೋ ಮತ್ತ ಅವನ ಮನೆ ಅಡ್ರಾಸ್ ಲೋಕಲ್ ದಿನಪತ್ರಿಕೆಲಿ ಅಚ್ಚಾಗಿ ಬಂದಿತ್ತ್. ಹಂಗಾಗಿ ಈ ಮಿ|| ರಾಜುನ ಹುಡುಕುತಿದ್ದ ಬ್ರಷ್ಟಚಾರಿ ಜನಿಕೆ ರಾಜುನ ಹಿಡ್ಕೆಂಬ ಕೆಲಸ ಸುಲಬ ಆತ್. ಹಂಗಾಗಿ ಈಗ Mr. ರಾಜು ಅವನ ಆಪ್ತ ಮಿತ್ರ ಮಹೇಂದ್ರ ಪಾಲ್‌ನ ಹತ್ರ ಎಲ್ಲಾ ವಿಶ್ಯನ ತಿಳ್ಸಿ ತಂಗೆನ ಮೊದ್ವೆ ಜಂಬಾರ ನಡ್ಸಿಕೆ ಕೇಳಿಕಂಡದೆ. ಈ ಜವಾಬ್ದಾರಿನ ತಕಂಡ್ ಮಹೇಂದ್ರಪಾಲ್ ರಾಜುನ ಮನೆಗೆ ಹೋಗಿ ಅವರ ಕೆಲ್ಸಕಾರ್ಯ ಮಾಡಿಕೆ ಶುರು ಮಾಡಿದೆ. ....

ಮುಂದಕೆ ....

ಈ ಕೆಲ್ಸಗ ನಡಿಯುತಿರ್‌ಕಾಕನ ನೇಪಾಳಿ ಮಹೇಂದ್ರಪಾಲ್ ನಾಲ್ಕೈದ್ ಹುಡುಗರ ಜೊತೆಲಿ ಬಾಳೆ ಗಿಡಗಳ ಕಡ್ದ್ ಹೊತ್ತ್ ಕಂಡ್ ಬಂದೊ. ಎಲ್ಲವೂ ಸೇರಿಕಂಡ್, ಗೇಟಿಗೆ, ಚಪ್ಪರಕ್ಕೆ ಮನೆಗೆ ತೇಳಿಕಂಡ್ ತಂದ್ ತಂದ್ ಬಾಳೆಗಿಡಗಳ ಕಟ್ಟಿ, ಶುಭ ಸೂಚನೆಯ ಅಲಂಕಾರಗಳ ಮಾಡಿಕೆ ಶುರುಮಾಡ್ದೊ. ಮದ್ವೆ ಮನೆ ಚಪ್ಪರದ ಮುಂಬಾಗಿಲಿಗೆ ಎರಡ್ ಬೈನೆ ಮರದ ಹೆಡೆಗಳ ಕಡ್ಕಂಡ್ ಬಂದ್ ತೂಗುಹಾಕಿದೂ.

ಇಷ್ಟ್ಹಾಕನ ಶೋಭಕ್ಕ ಮತ್ತೆ ಅದರ ಅವ್ವ ಮನೆ ಒಳಗೆಂದ ಬಂದ್ ಬನ್ನಿ ಮಕ್ಕಳೆ. ಗಂಟೆ9 ಆಕೆ ಆತ್. ಹೊಟ್ಟೆ ಹಸ್ತ್‌ಕಂಡ್ ಕೆಲ್ಸ ಮಾಡ್ದು ಬೇಡ. ರೊಟ್ಟಿ, ಕಾಫಿ ಮಾಡಿಕಂಡ್ ಆಮೇಲೆ ಕೆಲ್ಸ ಮಾಡಿ. ಬನ್ನಿ ಬನ್ನಿತ್ತೇಳಿ ಅವರ್ನ್‌ನೆಲ್ಲಾ ಒಳಗೆ ಕರ್ತ್. ಈ ಗೂಡೆಮಕ್ಕ ಒಟ್ಟಿಗೆ ಸೇರ್ವಲ್ಲಿ ಕೇಳೂಕಾ? ಒಬ್ಬೊಂದೊಬ್ಬ ಗೇಲಿ ಮಾಡಿಕಂಡ್ ನಗೆಆಡಿಕಂಡ್ ಕಿರುಚಾಡಿ ಕಂಡ್ ಇವು ಕೆಲ್ಸಮಾಡ್‌ತಿರ್‌ಕಾಕನ ಅದರ ನೋಡಿಕೇ ಒಂದ್ ಪೊರ್ಲ್. ಎಲ್ಲಾ ಒಟ್ಟಿಗೆ ಬಂದ್‌ಕುದ್ದ್ ಕಂಡ್ ಶೋಭಕ್ಕನ ಜೊತೆಲಿ ಬೆಳಿಗ್ಗೆನೆ ತಿಂಡಿ ಕಾಫಿನ ಮುಗ್ಸಿದೊ.

ಆಗ ಹೊರಗೆ ಕೈಯಾಲೆಲಿ ಹೈದಂಗಳ ಗುಂಪು ಬಂದ್ ಕುದ್ದು ಕಂಡ್ ತಂಗೆ ಶೋಭನ ಕೈಂದ ಬಡ್ಸಿಕಂಡ್ ಲಾಯಕಲಿ ತಿಂಡಿತಿಂದೊ. ಈ ಮೈಸೂರು ಫ್ರೆಂಡ್ ಮಹೇಂದ್ರಪಾಲ್ ಇದ್ದಲ್ಲಿ ಕೇಳೋಕಾ? ಮಾತ್ ಮಾತಿಗೆ ನಗೆ ಉಕ್ಕಿಬರ್ವಂಗೆ ಜೋಕ್ಸ್‌ಗಳ ಕಟ್ಟ್‌ಮಾಡಿಕಂಡ್ ನಗೆ ಆಡಿಕಂಡ್ ಪುನಃ ಮುಂದಿನ ಕಾರ್‌ಬಾರ್‌ಗಳ ವಿಚಾರಕೆ ತಯಾರಾದೊ.

ಈ ಗೂಡೆಗಳ ಗುಂಪು ಮಾವಿನ ಸೊಪ್ಪ್‌ಂದ ತೋರಣನ ಕಟ್ಟಿಕೆ ಶುರುಮಾಡ್ದೊ. ಕೆಲವು ಸಣ್ಣ ಮಕ್ಕ ಹೋಗಿ ಅಕ್ಕಪಕ್ಕದ ಮನೆಗಳಿಂದ ಮಲ್ಲಿಗೆ ಹೂವು, ಚೆಂಡುಹೂವು, ಗುಲಾಬಿ ಹೂವುಗ ತುಂಬಿ ಕಂಡ್ ಬಂದೊ. ಈ ಗೂಡೆಗೆ ಅದರ ಉದ್ದ ಉದ್ದದ ಮಾಲೆಕಟ್ಟಿ , ಮುಹೂರ್ತ ಮಂಟಪದ ಚಪ್ಪರದ ಒಳಗೆ ತಮಿಗೆ ಇಷ್ಟಬಂದಂಗೆಲ್ಲಾ ಶೃಂಗಾರ ಮಾಡಿಕೆ ಶುರುಮಾಡ್ದೊ. ಇನ್ನೂ ಕಾಗದ ಹೂವುಗ, ಬಣ್ಣ ಬಣ್ಣದ ಬೆಲೂನಗ ಸೀರಿಯಲ್ ಸೆಟ್ಟ್‌ಗ ಇಂತದರೆಲ್ಲಾ ತಕಂಡ್ ಬಾಕೆ Mr. ಮಹೇಂದ್ರಪಾಲ್ ಇಬ್ಬರ್ ಹೈದಂಗಗಳ ಮಡಿಕೇರಿಗೆ ರಾಜುನ ಬೈಕ್‌ನ ಕೊಟ್ಟ್ ಕಳ್ಸಿತ್. ಮಹೇಂದ್ರಪಾಲ್ ಇನ್ನೊಬ್ಬನ ಬೈಕಲಿ ಮಡಿಕೇರಿಗೆ ಹೋಗಿ ಅಲ್ಲಿಂದ ಮದ್ವೆ ಮನೆಗೆ ಬೇಕಾಗುವಷ್ಟು, ಕುರ್ಚಿಗಳ, ಮೇಜುಗಳ ಇನ್ನೂ ಬೇಕಾದಂತಹ ಪರ್ನಿಚರ್‌ಗಳ ತಕಂಡ್ ಒಂದ್ ವ್ಯಾನ್ ಒಳಗೆ ತುಂಬಿಸಿಕಂಡ್ ಬಾತ್. ಇನ್ನಿಬ್ಬರ್ ಪ್ರೆಂಡ್ಸ್‌ಗ ಮೈಕ್‌ಸೆಟ್‌ಗಳ ಹಂಗೇ ಬೇಂಡ್ ಸೆಟ್ಟ್, ಜನರ ಏರ್ಪಾಡ್ ಮಾಡಿಕಂಡ್ ಬಂದೊ. ಸಂಜೆ ಅಷ್ಟ್‌ಹೊತ್ತಿಗೆ ಮನೆಸುತ್ತಾ ಮಿಣಮಿಣ ಬೆಳಗುವ ಬಣ್ಣಬಣ್ಣದ ಸೀರಿಯಲ್ ಸೆಟ್ಟ್, ಬೆಳ್ಗ್‌ವಂಗೆ ಮಾಡ್ದೊ. ಹಿಂಗೆ ಈಗ ಕೆಳಮನೆ ಬೊಜಪಜ್ಜನ ಮಗಳ ಮದ್ವೆ ಮನೆ ಈಗ ಎಲ್ಲಾ ತರದ ರಂಗ್‌ರಂಗಿನ ಅಲಂಕಾರಗಳ ಮಾಡಿಕಂಡ್ ಕಣ್ಣ್ ಕೊರೈಸುವ ಸೀರಿಯಲ್ ಸೆಟ್ಟ್ ಒಳಗೆ ಇದ್ ಒಂದು ಪುಟ್ಟ ಅರಮನೆಯಂಗೆ ಕಾಂಬೊತಿತ್ತ್.

ಈ ಮಧ್ಯೆ ಕೆಲವು ಊರ್‌ನ ಜನರ ಗುಂಪ್‌ಗ, ಮಾಂಸದ ಕುಕ್ಕೆಗಳ ಹೊತ್ತ್ ಕಂಡ್ ಬಂದೊ. ಕೆಲವು ಊರ್‌ನ ಅಕ್ಕಂದಿರ್ ತರಕಾರಿ ಬುಟ್ಟಿಗಳ ಹಿಡ್ಕೊಂಡ್ ಬಂದೊ. ಕತ್ತಲಾದಂಗೇ ಈಗ ಒಬ್ಬೊರಾಗಿ ದೂರದ ನೆಂಟ್ರ್‌ಗ ಬಸ್ಸ್‌ಲಿ ಬಂದ್ ಆ ಗೇಟ್ ಹತ್ರ ಬಸ್ಸ್‌ಂದ ಇಳ್ದ್ ಬರ್‍ತಿದ್ದೊ. ಹೊರಕೆ ಕೊಟ್ಟ, ಮಗಕ್ಕ, ಅತ್ತೆಗ, ಬಾವಂದಿರ್, ಮಾವಂದಿರ್‌ಗ ಹಂಗೇ ಜೊತೆ ಜೊತೆಲಿ ಬೋಪಜ್ಜನ ಸ್ನೇಹಿತರ್‌ಗ, ಊರ್ ಹಿರಿಜನ ಹೈದಂಗ, ಮಕ್ಕಮರಿಗ ಒಟ್ಟಿಗೆ, ತಂಗ್ಯಕ, ನಾದಿನಿ ಗೂಡೆಗೆ ಮಾವಂದಿರ ಮಕ್ಕ ಹಿಂಗೇ ಗುಂಪುಗುಂಪಾಗಿ ಬಾತಿದ್ದೊ. ಅಷ್ಟೊತ್ತಿಗೆ ದೊಡ್ಡ ಸದ್ದ್ ಮಾಡಿಕಂಡ್ ಬುಲ್ಲೆಟ್ ಬೈಕಲಿ ಮಡಿಕೇರಿಂದ ಫೋಟೋ ಮತ್ತೆ ವೀಡಿಯೋ ಗ್ರಾಫರ್‌ಗ ತಮ್ಮ ಲಗ್ಗೇಜ್‌ಗಳ ಹೊತ್ತ್‌ಕಂಡ್ ಬಂದೊ. ಆದ್ರೇ ಇಷ್ಟ್ ಹೊತ್ತಾದ್ರೂ ಈ ಬ್ಯಾಂಡ್‌ಸೆಟ್ ವಾದ್ಯದವು ಇನ್ನೂ ಬಂದ್ ತಲ್‌ಪಿತಿಲ್ಲೆ. Mr. ಮಹೇಂದ್ರಪಾಲ್‌ಗೆ ಸ್ವಲ್ಪ ಗಾಬ್ರಿ ಆತ್. ಏನ್ ಈ ವಾದ್ಯ ಸೆಟ್ಟ್‌ನವು ಅಡ್ವಾನ್ಸ್ ತಕಂಬಕಾಕನ ಅವು 6-ಗಂಟೆ ಒಳಗೆಲ್ಲಾ ಬಂದ್ ತಲಪಿದ್ದವೆ ತಾ ಹೇಳಿದ್ದೊ. ಆದ್ರೆ ಈಗ ಗಂಟೆ ಏಳ್ ಆಕೆ ಆತ್ ತಾ ಗ್ಯಾನಮಾಡಿ. ಮನೆ ಹೈದ ಚೋಮುಣಿನ ಕರ್ದ್ ಹೋಗ್‌ರ ನೀನ್ ಬೈಕ್‌ನ ತಕಂಡ್ ನೋಡು. ಗಂಟೆ ಏಳಾದ್ರೂ ಆ ವಾದ್ಯ ಸೆಟ್‌ನವು ಬಂದ್ ತಲಪಿತಿಲ್ಲೆಲ್ಲಾ? ತಾ ಗಾಭರಿಂದ ಹೇಳ್ತ್. ಆಗ ಚೋಮುಣಿ ಹೇಳ್ತ್. ಆಯ್ಯೋ ಬುಡಿ ಮಹೇಂದ್ರ್‌ಪಾಲ್ ಈ ವಾದ್ಯ ಸೆಟ್ಟ್‌ನವು ಯಾಗೋಳು ಹಿಂಗೇ. ಅವು ಹೇಳ್ದ ಟೈಂಗೆ ಖಂಡಿತಾ ಬಾದುಲೆ. ಇನ್ನ್ ಒಂದ್ ಗಂಟೆ ಒಳಗೆ ಅವು ಬಂದವೆ ನೋಡಿ. ಯಾಕೆತ್ತೇಳಿರೆ ಅವು ಬಾಕಾಕನೇ ಕುಡ್ದ್ ಟೈಟ್ ಆಗಿದ್ದವೆ. ಅವು ಹಂಗೇ ಕುಡ್ಕಂಡ್, ನಡ್ಕಂಡ್ ದಾರಿ ಉದ್ದಕ್ಕೂ ಜಗಳ ಆಡಿಕಂಡ್ ಬಾಕ್ಯಾಕನ ಒಂದ್ ಗಂಟೆ ತಡ ಆದು ತಾ ಸಮಾಧಾನ ಹೇಳ್ತ್ .

ಹೋ ಅಲ್ಲಿ ನೋಡಿ ವಾದ್ಯದವು ಬರುತಾ ಒಳರ್‍ರಾ. ನೋಡಲ್ಲಿ ಗೇಟ್ ಹತ್ರ ತೂರಾಡಿ ಕಂಡ್ ಗೇಟ್‌ನ ದಾಟುತಾ ಒಳೋ ತಾ ಜೋಯಪ್ಪಣ್ಣ ಕೈತೋರ್‍ಸಿ ಹೇಳ್ತ್. ಈ ವಾದ್ಯ ಸೆಟ್ಟ್‌ನವು ತಡಾಗಿ ಬಂದದಕ್ಕೆ ಹೆದ್ರಿಕಂಡ್ ಬೋಪಜ್ಜಂಗೆ ಕೈಮುಗ್ದ್ ಸ್ವಾಮಿ ಯಜಮಾನ್ರೇ ನಮದ್ ಏನ್ ತಡಾತ್ಲೆ. ಈಗ ಪೂಜೆಗಿದ್ದ್‌ದರ ಎಲ್ಲಾ ತಕಂಡ್ ಬನ್ನಿ. ಬೇಗ ಬೇಗ ಕಾಯಿ, ಹೊದ್ರಿ, ಬಾಳೆ ಹಣ್ಣ್ ಹಂಗೆ ಎರಡ್ ಕುಪ್ಪಿ ಕಳ್ಳ್ ನಾವು ಬೇಗ ವಾದ್ಯಸೆಟ್ಟ್ ಪೂಜೆ ಮಾಡಿಕಂಡವೆ ತಾ ಆ ಗುಂಪುನ ಲೀಡರ್ ಕುಳ್ಳಪ್ಪ ಕೇಳ್ತ್. ವಾದ್ಯ ಸೆಟ್ಟ್‌ನವರ ಪೂಜೆ ಆದಂಗೆ ಅವು ಒಂದೇ ಧಂ ವಾದ್ಯನ ಬಾರ್‍ಸಿಕೆ ಶುರುಮಾಡ್ದೊ. ಈಗ ಮದ್ವೆ ಮನೆ ತುಂಬಾ ಒಳ್ಳೆ ಗೌಜಿ ಸುರು ಆತ್. ಸುತ್ತಮುತ್ಲಂದ್ ನೆಂಟರಿಸ್ಟರ್‌ಗ ಬರ್‍ತಿದ್ದವರ ಈ ಮನೆ ಹಿರಿಯವು ಆದ ಬೋಪಜ್ಜ ಮತ್ತೆ ಮಂಜನ ಪ್ರೆಂಡ್ ಮಹೇಂದ್ರಪಾಲ್ ಹೊರಗಡೆ ಚಪ್ಪರದ ಮುಂದೆ ನಿಂತ್‌ಕಂಡ್ ಬರಮಾಡಿ ಕಂಬೊತಿದ್ದೊ. ಅಷ್ಟೊತ್ತಿಗೆ ಎರಡ್ ಪ್ಯಾಂಸಂಜರ್ ಟೆಂಪೋ ಗೇಟ್ ಹತ್ರ ಬಂದ್ ನಿಂತತ್. ಆಗ ಅಲ್ಲಿಗೆ ಈ ಬೋಪಜ್ಜ

ಮೂಡಣದಲ್ಲಿ ವಕ್ರವಾದ ಗೋಡೆ - ಗಂಡಸರ ಶುಭಕ್ಕೆ ತಡೆ.

ಮಹೇಂದ್ರಪಾಲ್‌ನೊಟ್ಟಿಗೆ ಅತ್ತ ಕಡೆ ಓಡಿದೊ. ಅವರ ಹಿಂದೆ ಈ ಮನೆಯ ಕೆಲವು ಹಿರಿ ಅಕ್ಕಂದರ್ ಕೂಡಾ ಹೋಗಿ ಸೇರಿ ಕಂಡೊ ಯಾಕೆತ್ತೇಳ್ರೇ ಆ ನೆಂಟ್ರ್‌ಗಳೇ ಇಂದ್‌ನ ಮುಖ್ಯವಾದ ಗಂಡ್‌ನ ಕಡೆ ಜನ. ಅವು ಒಬ್ಬೊಬ್ಬರಾಗಿ ಟೆಂಪೋಂದ ಕೆಳಗೆ ಇಳ್ದ ಮ್ಯಾಲೆ ಎಲ್ಲವರ್ಲೂ ಇವು ಆದರಂದ ವಿಶ್‌ಮಾಡಿ ಬರಮಾಡಿಕಂಡೊ. ಅವು ಎಲ್ಲಾ 50 ಜನ ಬಂಧಿದ್ದೊ. ಅವರನೆಲ್ಲಾ ಈ ಮಹೇಂದ್ರಪಾಲ್ ಹಾಕಿದ್ದ ಚಪ್ಪರದ ಒಂದ್ ಬದಿಗೆ ಕುದ್ರಿಕೆ ಏರ್ಪಾಡ್ ಮಾಡ್ತ್ . ಈ ಗಂಡ್‌ನ ಕಡೆವು ಮನೆ ಜನ ಎಲ್ಲಾ ಬಂದ್ ಪದ್ದತಿ ಪ್ರಕಾರ ಮಾತ್ ಕತೆ ಆಡ್ಸಿ ಹೋದ ಮೇಲೆ ಅವುಕೆಲ್ಲಾ ಲೈಟ್‌ಆಗಿ ದಣು ಆರ್ಸಿಕಂಬಕೆ ಲಿಂಬೆ ಜ್ಯೂಸ್‌ನ ತಂದ್ ಕೊಟ್ಟೊ. ಅದೆಲ್ಲಾ ಕುಡ್ದ್ ಆದಮೇಲೆ ವರನ ಕಡೇವು ಉಳ್ಕಂಬಕೆ, ಮತ್ತೆ ಅವುಕ್ಕೆ ಒಂದ್ ಕೊಯಿರೆನ ಮಿಸ್ಟರ್ ಫಾಲ್ ಎರಂಜ್ ಮಾಡಿ ಕೊಡ್ತ್.

ಬಂದಿದ್ದ ಈ ಗಂಡ್‌ನ ಕಡೆ ನೆಂಟ್ರ್‌ಗೆ ಎಲ್ಲವೂ ಆ ಅಲ್ಪರೆಯ ಎರಡ್ ಕೊಂಬರೆಗಳಲ್ಲಿ ಇರಿಕೆ ವ್ಯವಸ್ತೆ ಆದಮೇಲೆ ಮುಂದಕೆ ಗಂಡ್‌ಗ ಮದ್ವೆ ಸಾಸ್ತ್ರಗಳ ಇತರ ಪದ್ದತಿಗಳ ಬೇರೇ ಆಗಿ ನಡ್ಸಿಕಂಬಕೆ ಅವರ ಕಡೆ ಬಂದಿದ್ದ ಹೆಣ್ಣ್ ಜನ ತಯಾರಿ ಮಾಡುತಿದ್ದೊ. ಆಗ ಬೋಪಜ್ಜ ಬಂದ್ ಹೇಳ್ದೊ ಬಂದ ದಿಬ್ಬಣದ ನೆಂಟ್ರ್‌ಕಡೆವು ಊಟಮಾಡಿ ಕಂಬಕೆ ಏಳಿ ಆಮೇಲೆ ನೀವು ನಿಮ್ಮ ಪದ್ದತಿ ಪ್ರಕಾರದ ಮದ್ವೆ ಸಾಸ್ತ್ರಗಳ ಮಾಡಿಕಣಿತಾ ಹೇಳಿಕಂಡೊ. ಹಂಗೇ ಈಗ ಬಂದಿದ್ದ ಎಲ್ಲಾ ನೆಂಟ್ರ್‌ಗ ಈ ಊರು ಪಂಕ್ತಿಲಿ ಒಟ್ಟಿಗೆ ಊಟಕ್ಕೆ ಕುದ್ದ್‌ಕಂಡೊ. ಮಿಸ್ಟರ್ ಮಹೇಂದ್ರಪಾಲ್ ಊಟಕ್ಕೆ ಕುದ್ದಿದ ನೆಂಟರುಗಳಿಗೆ ಬಹಳ ಮುತವರ್ಜಿ ವಹಿಸಿಕಂಡ್ ಎಲ್ಲಾ ಕಡೆಗಳಲ್ಲೂ ಓಡಾಡಿಕಂಡ್ ಸ್ನೇಹಿತರೊಟ್ಟಿಗೆ ಸೇರಿಕಂಡ್ ಊಟಕ್ಕೆ ಕುದ್ದಿದ ಜೆನಿಕೆಲ್ಲಾ ಅರ್ಧ ಅರ್ಧಗ್ಲಾಸ್ ಡ್ರಿಂಕ್ಸ್‌ನ ಟ್ರೇಲಿ ಜೋಡ್ಸಿಕಂಡ್ ಸಪ್ಲೈ ಮಾಡ್ತಿತ್. ಈ ಚೂಟಿಯಾದ ರಾಜುಮಂಜನ ಫ್ರೆಂಡ್‌ನ ನೋಡ್ದ ಇಲ್ಲಿನ ಜನ ಬಹಳ ಮೆಚ್ಚಿಕೊಂಡಿದ್ದೊ.

(ಎಲ್ಲಿ ಬೋಪುಬಾವ ನಿಮ್ಮ ರಾಜು ಮಂಜ ಇನ್ನೂ ಬಂದ್ ತಲ್ಪಿತಿಲ್ಲೆ?

ಮುಂದುವರಿಯುವುದು.

ನಿಧನ



ಪೊಕ್ಕುಲಂಡ್ರ ಸೀತಮ್ಮ
W/o ಪೊಕ್ಕುಲಂಡ್ರ ಅಪ್ಪಯ್ಯ
ಮರಣ : 4-6-2001

ದಿನಾಂಕ 4-6-2001ರಲ್ಲಿ ನನ್ನ ಧರ್ಮಪತ್ನಿ ಪೊಕ್ಕುಲಂಡ್ರ ಸೀತಮ್ಮನವರ ಅಂತ್ಯ ಸಂಸ್ಕಾರದಲ್ಲಿ ಭಾಗಿಯಾಗಿ ಸಹಕರಿಸಿದ ನಮ್ಮ ಸರ್ವ ಬಂಧು ಮಿತ್ರರೆಲ್ಲರಿಗೂ ವಂದನೆಗಳು. ವೈಕುಂಠವಾಸಿಯಾದ ಮೃತರ ಆತ್ಮಕ್ಕೆ ಆ ಭಗವಂತನು ಚಿರಶಾಂತಿಯನ್ನು ನೀಡಲೆಂದು ಅನುದಿನವು ಪ್ರಾರ್ಥಿಸುವೆವು.

ದುಃಖತಪ್ತ ಪತಿ : ಪೊಕ್ಕುಲಂಡ್ರ ಅಪ್ಪಯ್ಯ
ಮತ್ತು ಮಕ್ಕಳು
ಕೆದಮುಳ್ಳೂರು ಗ್ರಾಮ ಮತ್ತು ಅಂಚೆ,
ವೀರಾಜಪೇಟೆ ತಾಲ್ಲೂಕು

16ನೇ ಪುಟದಿಂದ


ತಾಂತ್ರಿಕ ವಿದ್ಯಾಲಯಗಳು, ವೃತ್ತಿಪರ ಕಾಲೇಜುಗಳು ಮುಂತಾದವುಗಳನ್ನು, ಸರಪಳಿಯಂದದಿ ಬೆಳೆಸುವ ಬೃಹತ್ ಯೋಜನೆಯ ಉದ್ದೇಶಗಳನ್ನು ಇಟ್ಟುಕೊಂಡಿದೆ. ಅಂತೆಯೇ ಈಗ ಈ ಸಂಸ್ಥೆ ಇಟ್ಟ ಮೊದಲ ಹೆಜ್ಜೆ, ಕಾವೇರಿ ನ್ಯಾಷನಲ್ ಪಬ್ಲಿಕ್ ಸ್ಕೂಲ್ (KNPS), ಇದೇ ಜೂನ್1 ರಂದು 12 ಮಂದಿ ಮಕ್ಕಳೊಂದಿಗೆ ನರ್ಸರಿ ತರಗತಿಯು ಪ್ರಾರಂಭವಾಗಿ ಈಗ 20 ಮಕ್ಕಳನ್ನು ಹೊಂದಿದೆ.

ಬೃಹತ್ ಯೋಜನೆಯನ್ನು ಹಾಕಿಕೊಂಡಾಗ ಹಣವೂ ಬೃಹದಾಕಾರವಾಗಿ ಖರ್ಚಾಗುವುದು ಸರ್ವೇಸಾಮಾನ್ಯ. ಈ ಸಂಸ್ಥೆಗೆ ಬಂಡವಾಳ, Promoters, ಹತ್ತು ಕುಟುಂಬ ಹದಿನೆಂಟು ಗೋತ್ರದ ಗೌಡ ಬಾಂಧವರು ಎಲ್ಲೇ ಇರಲಿ ಈ ಸಂಸ್ಥೆಗೆPromoter ಅಥವಾ Member ಆಗಿ ಸೇರಬಹುದು. Promtional fundನ ಒಂದು Unit 10,000 ರೂ. (refundable) membershipನ1,000 (Non refundable) ಒಟ್ಟು 11 ಸಾವಿರದಂತೆ ಕೊಟ್ಟು, ಈ ಸದವಕಾಶವನ್ನು ಉಪಯೋಗಿಸಿಕೊಂಡು, ಜನಸೇವೆಯೇ ಜನಾರ್ಧನ ಸೇವೆ ಎಂದು ಈ ಮಹತ್ಕಾರ್ಯದಲ್ಲಿ ಭಾಗಿಯಾಗಬೇಕೆಂದು ಸಂಸ್ಥೆಯ ಪರವಾಗಿ ಕೋರುತ್ತೇನೆ.

ಇತೀ : ಬಿಟ್ಟೀರ ಚೋಂದಮ್ಮ ಶಂಭು, ಬೆಂಗಳೂರು

ಹೆಚ್ಚಿನ ವಿವರಕ್ಕಾಗಿ, ಸಂಪರ್ಕಿಸಬೇಕಾದ ವಿಳಾಸ :
413, Cauvery Nagar, RT Nagar P.O.,
Bangalore - 32
PH : 3539555

ಪತ್ರ ವಿಭಾಗ



ಅಭಿಪ್ರಾಯ

ಮಾನ್ಯರೆ,

ನಾನು ಕೊಡಗು ಸಂಗಾತಿ ಪ್ರಾರಂಭ ಆದಲ್ಲಿಂದ ಅದರ ಜೀವಾವಧಿ ಸದಸ್ಯತನ ಪಡೆದು ಕೊಂಡಿದ್ದು, ನನಗೆ ಬರುತ್ತಿರುವ ಕೊ.ಸ.ಯನ್ನು ಓದುತ್ತಾ ಇದ್ದೇನೆ. ಅನೇಕ ನಮ್ಮ ಜನಾಂಗದ ಲೇಖಕರು ಕೊಡಗು ಗೌಡ ಜನಾಂಗದ ಸಂಸ್ಕೃತಿಯ ಬಗ್ಗೆ, ಭಾಷೆಯ ಬಗ್ಗೆ ಬರೆದಿರುವ ಲೇಖನಗಳನ್ನು ಓದಿರುತ್ತೇನೆ. ಆದರೆ ನನ್ನ ಮನಸ್ಸಿನಲ್ಲಿ ಒಂದು ವಿಚಾರವು ಮಾತ್ರ ಇತ್ಯರ್ಥ ವಾಗಿಲ್ಲ. ಅದೇನೆಂದರೆ ನಮ್ಮ ಜನಾಂಗದ ತಾಯ್ನುಡಿಯನ್ನು "ಅರೆಭಾಷೆ" ಎಂತಲೂ "ಅರೆಭಾಷಿಕ" ಎಂತಲೂ ಕರೆಯುತ್ತಿರುವುದು! ಅದೇ ರೀತಿ ನಮ್ಮನ್ನು ಅರೆಭಾಷೆಗೌಡರು ಅಂತ ಕರೆಯುತ್ತಿರುವುದು. "ಭಾಷೆ" ಎಂದರೆ ನಿಘಂಟು ಪ್ರಕಾರ ಜನರು ಬಳಸುವ ಮಾತಿನ ರೀತಿ, ಮಾತಿನ ರೂಪ ಎಂದು ಅರ್ಥ, ಇಂಗ್ಲೀಷ್‌ನಲ್ಲಿ Language ಎನ್ನುತ್ತೇವೆ. ಭಾರತದಲ್ಲಿ ಯಾಕೆ ನಮ್ಮ ಕರ್ನಾಟಕ ರಾಜ್ಯದಲ್ಲೂ ಪ್ರಾದೇಶಿಕವಾಗಿ ಆಯಾ ಜನಾಂಗದವರು ತಮ್ಮದೇ ಆದ ಉಪಭಾಷೆಯಲ್ಲಿ ಮಾತಾಡುತ್ತಾರೆ. ಅಂಥಹ ಭಾಷೆಗಳಿಗೂ ಬೇರೆ ಬೇರೆ ಹೆಸರುಗಳಿವೆ, ಉದಾಹರಣೆಗೆ ನಮ್ಮ ಗೌಡ ಭಾಷೆಗೆ ಹೋಲುವಂತಹ "ಹವ್ಯಕ" ಎಂಬ ಭಾಷೆಯನ್ನು ಕರ್ನಾಟಕದ ಕೆಲವು ಜನಾಂಗದವರು ಬಳಸುತ್ತಾರೆ. ಅದು ಒಂದು ಉಪಭಾಷೆ, ಆದರೆ ನಮ್ಮ ಉಪಭಾಷೆಗೆ ಅರೆಭಾಷೆ ಎಂಬುದಾಗಿ ಕರೆಯುವುದು ತಪ್ಪು. ಕ್ರಿ. ಶ. 10ರಲ್ಲಿ ಕನ್ನಡ ಮರಾಠಿ ಭಾಷೆಯು ಅರಿಯಾ ಎಂದು ಕರೆಯಲ್ಪಟ್ಟಿದ್ದು, ಅದೇ ಅರಿಯಾಭಾಷೆಯು ಯಾಕಾಗಿ ಅರೆಭಾಷೆ ಎಂಬುದಾಗಿ ಆಗಿರಬಾರದು? ಇತ್ಯಾದಿ ಸಂಶೋಧನೆ ಮಾಡಿ ನಮ್ಮ ಭಾಷೆಯ ಮೂಲವನ್ನು ಹುಡುಕುತ್ತಾ ಹೋಗುವುದರಿಂದ ನಮ್ಮ ಯುವ ಜನಾಂಗಕ್ಕೆ ಹೆಚ್ಚೇನು ಪ್ರಯೋಜನವಿಲ್ಲ!

ನಮ್ಮ ದಿನನಿತ್ಯದ ಮಾತೃಭಾಷೆಯನ್ನು ಅರೆಭಾಷೆ ಎಂದು ಕರೆಯುವುದರಲ್ಲಿ ಅರ್ಥವಿಲ್ಲ. ನಮ್ಮನ್ನು ಕಡಿಮೆ ಮಾಡಿಕೊಂಡಂತೆ ಎಂದು ನನ್ನ ಭಾವನೆ. ನಮ್ಮ ಭಾಷೆಯು ಸ್ವಚ್ಛಕನ್ನಡ ಭಾಷೆಗೆ ಹೋಲುವ ರೀತಿ ಇದ್ದು, ಕನ್ನಡ ಭಾಷೆಯ ಅಕ್ಷರಗಳನ್ನು ಬಳಸಿಕೊಂಡು ಸುಲಭವಾಗಿ ನಮ್ಮ ಭಾಷೆಯನ್ನು ಬರೆಯಬಹುದಾದ್ದರಿಂದ ನಮ್ಮ ತಾಯ್ನುಡಿಯನ್ನು "ಅರೆಕನ್ನಡ" ಅಥವಾ "ಅರೆಗನ್ನಡ ಭಾಷೆ" ಎಂದು ಕರೆದರೆ ಅದಕ್ಕೆ ಅರ್ಥವಿದೆ. ಇಲ್ಲದೇ ಹೋದರೆ ಕೊಡಗು ಗೌಡಭಾಷೆ ಎಂದಾದರು ಕರೆಯಬೇಕು. ನಾವು ಕೆಲವು ಸಂದರ್ಭಗಳಲ್ಲಿ ಯಾರಾದರು ಮೂರನೇಯವನು ಬಾಯಿಗೆ ಬಂದಂತೆ ಮಾತಾಡಿದಾಗ ಆತನನ್ನು ಹಿಂದಿನಿಂದ "ಅಂವಂಗೆ ಭಾಷೆ ಇಲ್ಲೆ ಬುಡಿ", ಅಂವ ಅರೆಪಿರಾಂದ" ಇತ್ಯಾದಿಯಾಗಿ ಬಳಸುತ್ತೇವೆ. ಇಲ್ಲಿ ಭಾಷೆ ಎಂದರೆ "ಬುದ್ಧಿ, ಮಿದುಳು, ಸಭ್ಯತೆ" ಇತ್ಯಾದಿ ಅರ್ಥಬರುತ್ತೆ. ಹೀಗಿರುವಾಗ ನಮ್ಮ ಭಾಷೆಯನ್ನು ಅರೆಭಾಷೆ ಎಂದು ನಾವೇ ಕರೆದುಕೊಂಡರೆ ಅದರ ಅರ್ಥ ಅರ್ಧಬುದ್ಧಿಯವ ಎಂಬ ಅರ್ಥವೂ ಬರಬಹುದು. ಆದುದರಿಂದ ನಮ್ಮ ಜನಾಂಗದ ತಾಯ್ನುಡಿಯನ್ನು ಎಂದೂ "ಅರೆಭಾಷೆ" ಅಥಾವ "ಅರೆಭಾಷಿಕ" ಹಾಗೂ "ಅರೆಭಾಷೆಗೌಡರು" ಎಂಬುದಾಗಿ ಕರೆಯುವುದನ್ನು ನಿಲ್ಲಿಸಿ "ಅರೆಕನ್ನಡ ಭಾಷೆ" ಅಥವಾ "ಅರೆಗನ್ನಡ ಭಾಷೆ" ಹಾಗೂ ಕೊಡಗಿನ ಅರೆಗನ್ನಡ ಭಾಷೆ ಗೌಡರು ಎಂಬುದಾಗಿ ಕರೆಯಬೇಕೆಂದು ಅಭಿಪ್ರಾಯ ಪಡುತ್ತೇನೆ.

ಕೊಡಗು ಸಂಗಾತಿಯಲ್ಲಿ ನಮ್ಮ ತಾಯ್ನುಡಿ ಭಾಷೆಯ ಒಂದು ವಿಭಾಗವಿದ್ದು ಅದರಲ್ಲಿ ಬಹಳ ಸೊಗಸಾದ ಲೇಖನಗಳು ಮೂಡಿ ಬರುತ್ತಾ ಇವೆ. ಆ ವಿಭಾಗಕ್ಕೂ ಸಹ ಇನ್ನು ಮುಂದೆ "ಅರೆಭಾಷಿಕ ವಿಭಾಗ" ಎಂಬುದರ ಬದಲು "ಅರೆಗನ್ನಡ ಭಾಷೆ" ವಿಭಾಗ ಎಂಬುದಾಗಿ ಬರೆಯುತ್ತೀರೆಂದು ನಂಬುತ್ತೇನೆ.

ಇತೀ ತಮ್ಮವ

— ಬೈತಡ್ಕ ಅಯ್ಯಪ್ಪ ಜೋಯಪ್ಪ, ಡಿಯಸ್ಪಿ, ಬೆಂಗಳೂರು

ವಿ. ಸೂ. : ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಭಾಷೆ ಮತ್ತು ಸಂಸ್ಕೃತಿ ಬಗ್ಗೆ ಕಠಿಣವಾದ ಸಂಶೋಧನೆ ಆಗದ ವಿನಹ ಮನಬಂದಂತೆ ಬದಲಾಯಿಸಿ ಕೊಳ್ಳಲು ಆಗದ ಮಾತುಗಳು. ಅರೆ ಭಾಷೆಯೇ ಒಂದು ಸ್ವತಂತ್ರವಾದ ಭಾಷೆಯಾಗಿದ್ದು ಕನ್ನಡದ ಹಿಂದಿನ ನಡುಗನ್ನಡವೇ ಆಗಿದೆಯೆಂದು ನಿಸ್ಸಂದೇಹ. ಅರೆಭಾಷೆ, ಅರೆಭಾಷಿಕರು ಜನಸಾಮಾನ್ಯರಾಡುವ, ಹಿರಯರಾಡುವ ಶಬ್ದ ಪ್ರಯೋಗವಾಗಿದೆ. ತಾಯಿಗರ್ಭದಿಂದ ಬಂದಾಗ ಅರೆಭಾಷೆಯನ್ನು ಹೊತ್ತೆ ಹೊರಜಗತ್ತಿಗೆ ಬಂದವರಿಗೆ ಈಗ ತಾಯಿಯೇ ಅಸಹ್ಯವೇ? ಏನೇ ಇರಲಿ ಸಂಶೋಧನೆ, ಚಿಂತನೆ, ಆಗದ ಹೊರತು ಹೀಗೆಯೇ ಮುಂದುವರಿಯುತ್ತದೆ. ಜನಾಂಗಬಾಂದವರ ಸಹಕಾರವನ್ನು ನಿರೀಕ್ಷಿಸುತ್ತೇವೆ.

— ಸಂಗಾತಿ

ನಷ್ಟ ಆದುಲೆ -10

ನಯ ವಿನಯ ಇಲ್ಲದವನ ಅಧಿಕಾರ, ಘನತೆ ಇಲ್ಲದ ಜೀವನ, ಹಿಡಿ ಇಲ್ಲದ ಕತ್ತಿ ಹಂಗೆ ಪ್ರಯೋಜನಕೆ ಬಾದುಲೆ. ನಯ, ವಿನಯುದ ವಳ್ಳ ಮಾತಿಗೆ ದುಡ್ಡು ಖರ್ಚಿಲ್ಲೆ. ತೊಂದರೆಯೂ ಇಲ್ಲೆ. ಗಾಳಿ ತುಂಬಿದ ತಲೆ ದಿಂಬ್ ವಳಗೆ ಟೊಳ್ಳ್ ಆಗಿದ್ದರೂ ಸಹ ಆದರ್ಮೆಲೆ ಕುದ್ದವಂಗೂ ಒಂದ್ ಆನಂದ. ಹಂಗೆನೆ ನಯ, ವಿನಯ ಇದ್ದಲ್ಲಿ ಒಂದ್ ಇಲ್ಲದಂಗೆ ಕಂಡರೆ ಅದ್ ಜೀವನದ ಕಿತಾಪತಿನ ನಯಮಾಡಿ ಬದ್ಕ್‌ನ ದಾರಿ ಮಾಡ್ದೆ. ಆಗಾಡಿ ಚಕ್ರ ಸದ್ದ್ ಇಲ್ಲದೆ ತಿರ್‍ಗಿದರೂ ಅದಕ್ಕೆ ಎಣ್ಣೆ ಹಾಕಕ್ಕು. ಹಂಗೇನೆ ಜೀವನತೇಳ್ವ ಚಕ್ರ ಲಾಯ್ಕಲಿ ತಿರ್‍ಗ್‌ಕೆ ವಿನಯ ತೇಳ್ವ ಎಣ್ಣೆ ಬೇಕ್. ಹಾಲ್ ಕುಡ್ದ್ ಹಲ್ಲ್ ಕಳ್ಕಂಡವ ಇಲ್ಲೆ. ನಯ ವಿನಯ ತೋರ್ಸಿ ನಷ್ಟ ಪಟ್ಟಂವ ಇಲ್ಲೆ.

ಕೊಡವ ಭಾಷೆಲಿ : ಚೇಂದ್ರಿಮಾಡ ಮುತ್ತಪ್ಪ

ಅರೆಭಾಷೆಗೆ : ಪಟ್ಟಡ ಪ್ರಭಾಕರ.

ಈಶಾನ್ಯದ ಕೋಣೆಗೆ ಪೂರ್ವದ ನಿಷ್ಕ್ರಮಣದ್ವಾರ - ತರುವುದು ಶುಭ ಅಪಾರ.



ಮೊದಲ ವರ್ಷದ ಪುಣ್ಯ ಸ್ಮರಣೆ

ನಿಧನ : 18-05-2000

ನೀನು ನಮ್ಮನ್ನಗಲಿ ಒಂದು ವರ್ಷ ಸಂದರೂ, ಇಂದಿಗೂ ನಿನ್ನ ಸವಿನೆನಪು ಹಾಗೂ ಆದರ್ಶಗಳು ನಮ್ಮಲ್ಲಿ ಸದಾ ಹಚ್ಚ ಹಸುರಾಗಿ ಉಳಿದಿದೆ. ಭಗವಂತನು ನಿನ್ನ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುವೆವು.

ಪತಿ : ಪೇರಿಯನ ಕಾರ್ಯಪ್ಪ
ಪುತ್ರರು : ಗುಲ್ಮನ್ ಹಾಗೂ ಜುಗ್ನು
ಗಲ್ಫ್ ಕಾಟೇಜ್, ಕರಡಿಗೋಡು ರಸ್ತೆ,
ಸಿದ್ದಾಪುರ, ಕೊಡಗು.

ದಿII ಪೇರಿಯನ ಅಮ್ಮಾಜಿ ಕಾರ್ಯಪ್ಪ

ದಿII ಕೋಳು ಮುಡಿಯನ ಟಿ. ರಾಮಯ್ಯ



ಪ್ರಥಮ ವರ್ಷದ ಸವಿನೆನಪು

ನೀವು ನಮ್ಮನ್ನಗಲಿ ಒಂದು ವರ್ಷ ಕಳೆದರೂ ಸದಾ ನಿಮ್ಮ ನೆನಪು ಸದಾ ನಮ್ಮಲ್ಲಿ ಮರುಕಳಿಸುತ್ತಿದೆ. ನೀವು ಹಾಕಿ ಕೊಟ್ಟ ದಾರಿಯಲ್ಲಿಯೇ ಇಂದಿಗೂ ನಾವುಗಳು ಮಕ್ಕಳು, ಮರಿಮಕ್ಕಳು ಮುಂದುವರಿಯುತ್ತಿದ್ದೇವೆ. ನಿಮ್ಮ ನಿಷ್ಠೆ, ಪ್ರಾಮಾಣಿಕತೆ, ಜನಾಂಗ ಬಗೆಗಿನ ಕಾಳಜಿ ನಮಗೆಲ್ಲರಿಗೂ ದಾರಿ ದೀಪವಾಗಿದೆ. ಅನುದಿನವು ಆ ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂಬುದಾಗಿ ಹಾರೈಸುವೆವು.

ಪತ್ನಿ : ಪಾರ್ವತಿ, ಮಗ : ಅನಂತ್‌ಕುಮಾರ್, ಸೊಸೆ : ಪ್ರೇಮ ಮತ್ತು ಸಹೋದರ, ಸಹೋದರಿಯರು, ನಾದಿನಿ, ಬಾವಂದಿರು, ಮಕ್ಕಳು, ಅಳಿಯಂದಿರು ಹಾಗೂ ಮೊಮ್ಮಕ್ಕಳು,
ಶ್ರೀನಿವಾಸ ನಿಲಯ, ಗಾಳಿಬೀಡು, ಕೊಡಗು. ☎ : **08272 - 24071**

ಜನನ : 1929 ಮರಣ : 27-6-2000

ದಿII ಕುಂಜಿಲನ ದೇವಯ್ಯ



ಸವಿನೆನಪು

ನೀವು ನಮ್ಮನ್ನಗಲಿ ಒಂದು ವರ್ಷವಾದರು, ನಿಮ್ಮ ನೆನಪು ಚಿರನೂತನವಾಗಿಯೇ ಇದೆ. ನಿಮ್ಮ ತ್ಯಾಗ ಪ್ರೀತಿ ವಾತ್ಸಲ್ಯಗಳಿಂದ ಕೂಡಿದ ಆದರ್ಶ ಜೀವನ ನಮಗೆ ಮಾರ್ಗದರ್ಶನ ಹೌದು. ನಿಮ್ಮ ಆತ್ಮಕ್ಕೆ ಅನುದಿನವು ಚಿರಶಾಂತಿಯನ್ನು ಬಯಸುವೆವು.

**ಪತ್ನಿ : ದೇವಮ್ಮ, ಮಕ್ಕಳು,
ಅಳಿಯಂದಿರು, ಸೊಸೆಯಂದಿರು,
ಮತ್ತು ಮೊಮ್ಮಕ್ಕಳು**
☎ : **080 - 3634001**

ಮರಣ : 28-6-2000

ದಿII ಅಂಚೆಮನೆ ಚಿಣ್ಣಮ್ಮ
ಅಭ್ಯತ್‌ಮಂಗಲ



2ನೇ ವರ್ಷದ ಚಿರಸ್ಮರಣೆ

ನೀವು ನಮ್ಮನ್ನಗಲಿ 2 ವರ್ಷಗಳು ಕಳೆದರೂ ನಿಮ್ಮ ಸವಿ ನೆನಪು ಆಗಿಂದಾಗ್ಯೆ ಮರುಕಳಿಸುತ್ತಿದ್ದು, ನಿಮ್ಮ ಪ್ರೀತಿ, ವಾತ್ಸಲ್ಯ, ತ್ಯಾಗದ ಆದರ್ಶ ಜೀವನ ನಮಗೆ ಅನುದಿನವು ಮಾರ್ಗದರ್ಶನವಾಗಿದೆ. ನಿಮ್ಮ ನಿಷ್ಕಲ್ಮಶ ದಿವ್ಯಾತ್ಮಕ್ಕೆ ಆ ಭಗವಂತನು ಚಿರಶಾಂತಿಯನ್ನು ನೀಡಲೆಂದು ಅನುದಿನವು ಪ್ರಾರ್ಥಿಸುತ್ತಿರುವೆವು.

ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರೂ,
ಸೊಸೆಯಂದಿರೂ ಹಾಗೂ ಅಪಾರ ಬಂಧು ಬಳಗದವರು

ಪ್ರಕಟಣೆ : ಅಂಚೆಮನೆ ಗಣೇಶ, ಮೈಸೂರು ☎ : **0821 - 496246**

ಜನನ : 12-4-1924 ಮರಣ 27-6-1999

Reg. No. KA/SK/MYS-88 Registered : 10-01-96 TCI Kar. 09592


ಕೊಡಗು ಎಜುಕೇಷನಲ್ ಅಕಾಡೆಮಿ (ರಿ.) ಬೆಂಗಳೂರು.

ಸಂಸ್ಥೆಯ ಮೊದಲ ಹೆಜ್ಜೆ ಕಾವೇರಿ ನ್ಯಾಷನಲ್ ಪಬ್ಲಿಕ್ ಸ್ಕೂಲ್

ದಿನಾಂಕ 9-6-2001 ರಲ್ಲಿ ಬೆಂಗಳೂರಿನ ಆರ್.ಟಿ. ನಗರದಲ್ಲಿ ಉದ್ಘಾಟನೆಗೊಂಡಿತು.



ಕಾರ್ಯದರ್ಶಿ ಶ್ರೀ ಮೊಟ್ಟನ ರವಿಕುಮಾರ್, ಅಡ್ವೋಕೇಟ್ ಇವರಿಂದ ಸಂಸ್ಥೆಯ ಧ್ಯೇಯೋದ್ದೇಶಗಳ ವಿವರಣೆ




ಕಾವೇರಿ ನ್ಯಾಷನಲ್ ಪಬ್ಲಿಕ್ ಸ್ಕೂಲ್, ಬೆಂಗಳೂರು ಇದರ ವಿಹಂಗಮ ನೋಟ




ಮುಖ್ಯ ಅತಿಥಿಗಳಾಗಿ ವೇದಿಕೆಯಲ್ಲಿ ಆಸೀನರಾಗಿರುವ ಸಂಸ್ಥೆಯ ರುವಾರಿ ಶ್ರೀ ಮೊಟ್ಟನ ರವಿಕುಮಾರ್, ಅತಿಥಿ ಡಾ. ಕೆ. ವಿ. ದೇವರಾಜ್, ಶ್ರೀ ಕುರುಂಜಿ ವೆಂಕಟರಮಣ ಗೌಡರು, ಜಸ್ಟೀಸ್ ಎನ್. ಡಿ. ವೆಂಕಟೇಶ್, ಉಪಾಧ್ಯಕ್ಷೆ ಶ್ರೀಮತಿ ವಾಸಂತಿ, ಶ್ರೀ ದೆಂಬೆಕೋಡಿ ಆನಂದ ಮತ್ತು ಅಮ್ಮವ್ವನ ವಾಸುರವರು



ಜ್ಯೋತಿ ಬೆಳಗಿ ಉದ್ಘಾಟಿಸುತ್ತಿರುವುದು ಕೊಡಗು ಎಜುಕೇಷನಲ್ ಅಕಾಡೆಮಿಯ ಉಪಾಧ್ಯಕ್ಷೆಯಾದ ಶ್ರೀಮತಿ ವಾಸಂತಿ ವಸಂತಕುಮಾರ್‌ನವರು



ದಿನಾಂಕ 9-6-2001ರಲ್ಲಿ ಕಾವೇರಿ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಉದ್ಘಾಟನೆಗೊಂಡಾಗ ಬೆಂಗಳೂರಿನ ನಮ್ಮ ಸಮಾಜದ ಅಧ್ಯಕ್ಷದ್ವಯರನ್ನು ಹಾರ ಹಾಕಿ ಸ್ವಾಗತಿಸುತ್ತಿರುವುದು



ಕಾವೇರಿ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಉದಯದ ದಿನ ಹಿರಿಯ ಶಿಕ್ಷಣ ತಜ್ಞ ಶ್ರೀ ಕುರುಂಜಿ ವೆಂಕಟರಮಣ ಗೌಡರು ಭಾಷಣದಲ್ಲಿ ಮಗ್ನವಾಗಿರುವುದು

Kodagu Sangathi Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ **: 0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.